
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜೂನ್ 11, 2008 ರೂ. 12/-



ರೆಡ್ಡಿ ಕಪಿಮುಷ್ಠಿಯಲ್ಲಿ

ಯಡ್ಡಿ



ಯಡ್ಡಿ-ಶೆಟ್ಟರ್


ಗುದ್ದಾಟ

ಕಟ್ಟಾಗೆ ಏನಾಗಿದೆ?





ವರ್ತೂರು ಪ್ರಕಾಶ್



'ಗೂಳಿ' ನಕಲಿ ಮಾರ್ಕ್ಸ್‌ಕಾರ್ಡ್ ವೀರ



'ನಾನು ಕೊಲೆ ಮಾಡಿಲ್ಲ'

ವಿರೋಧಿ ನಾಯಕ ಖರ್ಗೆ ಪಾಠ ಕಲಿಯದ ಕಾಂಗ್ರೆಸ್

ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ನೇಮಕಗೊಂಡಿದ್ದಾರೆ. ಸಹಜವಾಗಿ ಇನ್ನು ಮುಂದೆ ಅವರು ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಬೇಕು.

ಖರ್ಗೆಗೆ ಈ ಜವಾಬ್ದಾರಿ ಹೊಸದೇನಲ್ಲ. ಸೀನಿಯಾರಿಟಿ ಪ್ರಕಾರ ನೋಡಿದರೂ ಅವರಿಗೆ ಈ ಸ್ಥಾನ ಸಿಕ್ಕಿರುವುದು ಸಹಜ ನ್ಯಾಯದಂತೆಯೇ ಕಾಣುತ್ತಿದೆ.

ಆದರೆ



ಖರ್ಗೆಗೆ ಅಷ್ಟು ಸಾಮರ್ಥ್ಯವಿದೆಯೇ ಎಂದು ನೋಡಿದರೆ ನಿರಾಶೆಯಾಗುತ್ತದೆ. ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್‌ನ ಒಳಜಗಳ, ಗುಂಪುಗಾರಿಕೆಯಿಂದ ತತ್ತರಿಸಿ ಹೋದಂತೆ ಕಾಣುತ್ತಿದ್ದ ಖರ್ಗೆ ತಮ್ಮ ಬಹುತೇಕ ಸಮಯವನ್ನು ಚಿತ್ತಾಪುರ ಕ್ಷೇತ್ರದಲ್ಲಿ ಕಳೆದರೆ ವಿನಃ ಯಡಿಯೂರಪ್ಪ ಅಥವಾ ಕುಮಾರಸ್ವಾಮಿಯಂತೆ ಇಡೀ ರಾಜ್ಯ ಓಡಾಡಿ ಪ್ರಚಾರ ಕಾರ್ಯ ನಡೆಸಿರಲಿಲ್ಲ, ಕಾರ್ಯಕರ್ತರಲ್ಲಿ ಸ್ಫೂರ್ತಿ ತುಂಬಲೂ ಅವರಿಗೆ ಆಗಲಿಲ್ಲ.

ಚುನಾವಣೆ ಜಯಿಸಲು ಕಾಂಗ್ರೆಸ್ ಪಕ್ಷಕ್ಕೆ ಬೇಕಾಗಿದ್ದ ವರ್ಚಸ್ವೀ ನಾಯಕತ್ವ, ಮಾತುಗಾರಿಕೆ, ತಂತ್ರಗಾರಿಕೆ ಈ ಯಾವುದನ್ನೂ ಖರ್ಗೆ ಸಾಬೀತು ಮಾಡಿರಲಿಲ್ಲ, ಅದರ ಬದಲಾಗಿ ಈ ಖರ್ಗೆ-ಧರಂಸಿಂಗ್ ಜೋಡಿ ಸೇರಿಕೊಂಡು ಹೈಕಮಾಂಡ್‌ನ ದಾರಿ ತಪ್ಪಿಸಿ ಕನಿಷ್ಠ 20 ಕ್ಷೇತ್ರಗಳಲ್ಲಿ ಅಯೋಗ್ಯರಿಗೆ ಅಸಮರ್ಥರಿಗೆ ಟಿಕೆಟ್ ಕೊಡಿಸಿ ಕಾಂಗ್ರೆಸ್‌ನ ಸಮಾಧಿ ಕಟ್ಟಿಬಿಟ್ಟರು.

ಈಗ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ 59 ಶಾಸಕರು ಖರ್ಗೆ ಹೆಸರು ಸೂಚಿಸಿದರೆಂದು ಬಿಂಬಿಸಿ ಅವರನ್ನೇ ವಿರೋಧಿ ನಾಯಕರೆಂದು ತಂದು ಕೂರಿಸಲಾಗಿದೆ. ಈ ಸ್ಥಾನಕ್ಕೆ ಆಕಾಂಕ್ಷಿಯಾಗಿದ್ದ ಸಿದ್ಧರಾಮಯ್ಯನ ಪರ ಹನ್ನೊಂದು ಶಾಸಕರು ಒಲವು ವ್ಯಕ್ತಪಡಿಸಿದ್ದರಂತೆ. ಈ ಅಂಕಿ ಸಂಖ್ಯೆ ವಿಚಾರ ಬದಿಗಿಟ್ಟು ಹೇಳಬೇಕೆಂದರೆ ಸಿದ್ಧರಾಮಯ್ಯ ಆ ಸ್ಥಾನಕ್ಕೆ ನಿಜಕ್ಕೂ ಅರ್ಹ ವ್ಯಕ್ತಿಯಾಗುತ್ತಿದ್ದರು.

ಕೇವಲ ಸದನದಲ್ಲಿ ಮಾತ್ರವಲ್ಲದೆ ರಾಜ್ಯದೆಲ್ಲೆಡೆ ಬಿಜೆಪಿ ಸರ್ಕಾರದ ವಿರುದ್ಧ ಜನಾಭಿಪ್ರಾಯ ರೂಪಿಸುವ, ಮುಂದಿನ ಬೆಳವಣಿಗೆಗಳಿಗೆ ತಕ್ಕಹಾಗೆ ಕಾಂಗ್ರೆಸ್ ಪಾರ್ಟಿಯನ್ನು ರೆಡಿ ಮಾಡುವ ಶಕ್ತಿ ಸಿದ್ಧರಾಮಯ್ಯನವರಿಗಿತ್ತು.

ಈ ಖರ್ಗೆ-ಧರಂಸಿಂಗ್ ಜೋಡಿ ಎಷ್ಟು ಹಾಸ್ಯಾಸ್ಪದವಾಗಿ ಚುನಾವಣೆಗಳಿಗೆ ತಯಾರಿ ಮಾಡಿಕೊಂಡಿತ್ತೆಂದರೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಕಾಂಗ್ರೆಸ್‌ನ ಜಿಲ್ಲಾ ಸಮಿತಿಗಳೇ ರಚನೆಯಾಗಿರಲಿಲ್ಲ, ಅಂದರೆ ಬಿಜೆಪಿಗಳು 33 ಸಾವಿರ ಬೂತ್ ಲೆವೆಲ್ ಕಮಿಟಿ ರಚಿಸಿಕೊಂಡು ಮುನ್ನುಗ್ಗುತ್ತಿದ್ದಾಗಲೂ ಕಾಂಗ್ರೆಸ್‌ಗೆ ಜಿಲ್ಲಾ ಚುನಾವಣಾ ಸಮಿತಿಗಳೇ ರಚನೆಯಾಗಿರಲಿಲ್ಲ.

ಅರ್ಹರಿಗೆ ಟಿಕೆಟ್ ವಂಚನೆ, ಚುನಾವಣಾ ತಯಾರಿ ಅವ್ಯವಸ್ಥೆಗಳನ್ನೆಲ್ಲ ನೋಡಿ, ರೋಸಿ ಹೋದ ಕಾರ್ಯಕರ್ತರು ನಾಯಕರಿಗೆ ಶಾಪ ಹಾಕುತ್ತಿದ್ದ ಘಟನೆಗಳೂ ನಡೆದಿವೆ. ಕೊನೆಗೆ ಬಂಡಾಯ ಕಾಂಗ್ರೆಸ್ ಶಾಸಕ ವರ್ತೂರು ಪ್ರಕಾಶ "150 ಕೆ.ಜಿ. ತೂಕದ ನಾಯಕರಿರುವ ತನಕ ಕಾಂಗ್ರೆಸ್ ಉದ್ಧಾರವಾಗಲ್ಲ" ಎಂದು ಬಹಿರಂಗವಾಗಿ ಗೇಲಿ ಮಾಡುವ ತನಕ ಅಸಹನೆ ವ್ಯಕ್ತವಾಗಿದೆ.

ಮೂಲಭೂತವಾಗಿ ಖರ್ಗೆ ವ್ಯಕ್ತಿತ್ವದಲ್ಲಿ ಒಬ್ಬ ಹೋರಾಟಗಾರನಿಲ್ಲ, ಅವರು ಆಡಳಿತ ಪಕ್ಷದಲ್ಲಿರಲಿ ಇಲ್ಲಾ ವಿರೋಧ ಪಕ್ಷವಾಗಿರಲಿ ಒಂದು ಇಂಪ್ಯಾಕ್ಟ್ ಬೀರುವಷ್ಟು ಕ್ರಿಯಾಶೀಲತೆ ಖರ್ಗೆಗೆ ಸಾಧ್ಯವಿಲ್ಲ.

ಕಾಂಗ್ರೆಸ್ ಹೈಕಮಾಂಡಿಗೆ ನಿಜಕ್ಕೂ ಕರ್ನಾಟಕದಲ್ಲಿ ಮತ್ತೆ ಪಾರ್ಟಿ ಕಟ್ಟಿ ಬೆಳೆಸಬೇಕೆಂಬ ನೈಜ ಕಾಳಜಿ ಇದ್ದಿದ್ದರೆ ಇವತ್ತು ವಿರೋಧಿ ನಾಯಕನ ಸ್ಥಾನಕ್ಕೆ ಸಿದ್ಧರಾಮಯ್ಯ ಬರಬೇಕಿತ್ತು, ಖರ್ಗೆ ಹೇಗೋ ಕೆಪಿಸಿಸಿ ಅಧ್ಯಕ್ಷ ಆಗಿದ್ದರಿಂದ ಅವರಿಗೆ ಅದೇ ಗೌರವದ ನಿಷ್ಕ್ರಿಯ ಹುದ್ದೆ ಸಾಕಾಗುತ್ತಿತ್ತು.

ಕೃಷ್ಣನ ಬಡಬಡಿಕೆ

ಎಸ್ಸೆಂ ಕೃಷ್ಣ ದಪಲಿ ಸೇರಿಕೊಂಡಿದ್ದಾರೆ. ಅತ್ತ ಮಹಾರಾಷ್ಟ್ರದ ಗವರ್ನರ್ ಹುದ್ದೆಯೂ ಹೋಯಿತು, ಇತ್ತ ಕರ್ನಾಟಕದಲ್ಲಿ ಏನೂ ಗಿಟ್ಟಲಿಲ್ಲವೆಂಬ ನಿರಾಸೆ ಕೃಷ್ಣರನ್ನೂ ಕಾಡುತ್ತಿದೆ.



"ನನ್ನನ್ನು ಸಿಎಂ ಅಭ್ಯರ್ಥಿ ಎಂದು ಬಿಂಬಿಸದೇ ಹೋದದ್ದು ತಪ್ಪಾಯಿತು. ನನಗೆ ಸ್ಪರ್ಧಿಸಲು ಅವಕಾಶ ಕೊಟ್ಟಿದಿದ್ದರೆ ಚುನಾವಣಾ ಫಲಿತಾಂಶ ಬೇರೆಯಾಗುತ್ತಿತ್ತು." ಎಂದೆಲ್ಲಾ ಕೃಷ್ಣ ತೆಹಲ್ಕ ಹಾಗೂ ಔಟ್‌ಲುಕ್ ಪತ್ರಿಕೆಗಳ ಇಂಟರ್‌ವ್ಯೂನಲ್ಲಿ ಹೇಳಿಕೊಂಡಿದ್ದಾರೆ. ಒಂದು ವೇಳೆ ಕೃಷ್ಣ ಬಯಸಿದ್ದನೆಲ್ಲಾ ಹೈಕಮಾಂಡ್ ಒಪ್ಪಿಕೊಂಡು ಬಿಟ್ಟಿದಿದ್ದರೆ ಅಂತಾ ದೊಡ್ಡ ಪವಾಡಗಳೇನೂ ನಡೆಯುತ್ತಿರಲಿಲ್ಲವೆಂಬುದು ಖಚಿತ. ಮುಖ್ಯ ವಿಚಾರವೇ ರಾಜ್ಯ ಕಾಂಗ್ರೆಸ್ ಈ ಚುನಾವಣೆಗೆ ಯಾವ ರೀತಿಯಲ್ಲೂ ತಯಾರಾಗಿರಲಿಲ್ಲ ಎಂಬುದಾಗಿದೆ.


ಕೃಷ್ಣ ಎಲೆಕ್ಷನ್‌ಗೆ ನಿಲ್ಲಲು ಅವಕಾಶ ಸಿಗಲಿಲ್ಲ ಎಂಬುದು ಬೇರೆ ವಿಚಾರ. ಆದರೆ ಈ ಕೃಷ್ಣ ಹಾಗೂ ಡಿಕೆಶಿ ಗುಂಪು ಎಂಥ ಚಿಲ್ಲರೆ ರಾಜಕೀಯ ಮಾಡಿದ್ದರೆಂದರೆ ಖರ್ಗೆಯನ್ನು ಚಿತ್ತಾಪುರದಲ್ಲಿ ಸೋಲಿಸಿಬಿಡಬೇಕೆಂದು ಪ್ರತಿಸ್ಪರ್ಧಿ ಅಭ್ಯರ್ಥಿಗೆ ಒಂದು ಕೋಟಿಗೂ ಹೆಚ್ಚು ಹಣ ಪಂಪ್ ಮಾಡಿದ್ದರು.

ಇವರಿಬ್ಬರ ಲೆಕ್ಕಾಚಾರ ಏನಾಗಿತ್ತೆಂದರೆ ಕಾಂಗ್ರೆಸ್‌ಗೆ ಮೆಜಾರಿಟಿ ಸೀಟ್ ಬರುತ್ತೆ ಆದರೆ ಅದೇ ವೇಳೆ ಖರ್ಗೆ ಸೋಲಬೇಕು. ಆಗ ಕೃಷ್ಣಗೆ ಸಿಎಂ ದಾರಿ ಸುಗಮವಾಗುತ್ತದೆ ಎಂದು ಇವರು ಪಿತೂರಿ ನಡೆಸಿದ್ದರು.

ಕಾಂಗ್ರೆಸ್ ಎಂಬ ಒಡೆದ ಮನೆ, ಒಡೆದ ಮನಸ್ಸುಗಳ ಪಕ್ಷ ಉದ್ಧಾರವಾಗಬೇಕೆಂದರೆ ಎಲ್ಲಿ ಸಾಧ್ಯ!?



ಮಹಿಳೆಯರೆಲ್ಲರೂ ಮಹಿಳಾವಾದಿಗಳೆ?



ವಿಮಾನದಿಂದ ಹೊರಬಂದಾಗ ನನ್ನ ಸುತ್ತ ಜಗಮಗಿಸುತ್ತಿದ್ದ ನಿಲ್ದಾಣವನ್ನು ಕಂಡು ನಾನು ಬೆಂಗಳೂರಿಗೆ ಬಂದಿರುಗಿದ್ದೇನೊ ಅಥವಾ ಅಮೆರಿಕದ ಮತ್ತ್ಯಾವುದೋ ಊರಿನಲ್ಲಿ ಲ್ಯಾಂಡ್ ಆಗಿದ್ದೇನೋ ಎಂಬ ಅನುಮಾನ ಮೂಡಿತು. ಆದರೆ ಕೆಲ ಕ್ಷಣಗಳಲ್ಲೇ ನೆನಪಾಯಿತು, ನಾನು ಬೆಂಗಳೂರಿನ ಹೊಸ ಹೆಮ್ಮೆಯಾದ ಅಂತರರಾಷ್ಟ್ರೀಯ ಏರ್‌ಪೋರ್ಟಿನಲ್ಲಿ ಹಾಜರಾಗಿದ್ದೇನೆಂದು.

ಈ ಬಜಾರಾಮಿ ವಿಮಾನ ನಿಲ್ದಾಣಕ್ಕಾಗಿ ತಮ್ಮ ಭೂಮಿ, ಬದುಕು ಮತ್ತು ಅಸ್ತಿತ್ವವನ್ನೇ ಕಳೆದುಕೊಂಡ ಸಾವಿರಾರು ರೈತರು ಎಲ್ಲಿಗೆ ಹೋದರು ಎಂದು ಯೋಚಿಸುತ್ತಿರುವಾಗಲೇ "ಪಾಸ್‌ಪೋರ್ಟ್ ಪ್ಲೀಸ್" ಎಂಬ ಹೆಣ್ಣು ದನಿ ಕೇಳಿಸಿತು. ನನ್ನ ಮುಂದೆ ಅಮೆರಿಕದ ಏರ್‌ಹೊಸ್ಟೆಸ್‌ನಂತೆ ಸ್ಕರ್ಟ್ ಮತ್ತು ಟಾಪ್ ಧರಿಸಿದ್ದ ಅಪ್ಪಟ ಭಾರತೀಯ ಬೆಡಗಿಯೊಬ್ಬಳು ನಿಂತಿದ್ದಳು. ಅಮೆರಿಕವೇ ನನ್ನೊಂದಿಗೆ ಭಾರತಕ್ಕೆ ಬಂತೋ, ಅಥವಾ ಭಾರತದಲ್ಲೇ ಅಮೆರಿಕಾವೊಂದು ಜನ್ಮವೆತ್ತಿದೆಯೋ ಎಂದು ಚಿಂತಿಸುತ್ತಾ ಹೊರಬರುತ್ತಿದ್ದಂತೆ ಅಪ್ಪ ಮತ್ತು ಅಮ್ಮ ಎದುರಾದರಲ್ಲದೆ ನನ್ನ ತಮ್ಮ ಶಾಂತನು ನನ್ನ ಮೇಲೆ ಕಪಿಯಂತೆ ಎಗರಿ ಅಪ್ಪಿಕೊಂಡ. ಎರಡು ವರ್ಷಗಳ ನಂತರ ಅವರನ್ನೆಲ್ಲ ನೋಡಿ ನನಗೆ ತುಂಬಾ ಸಂತೋಷವಾಯಿತು. "Lovely to have you back again" ಅನ್ನುತ್ತಾ ಅಪ್ಪ ನನ್ನ ಬೆನ್ನು ತಟ್ಟಿದರು. ಅಮ್ಮ ನನ್ನನ್ನು ಅಪ್ಪಿಕೊಂಡು "ಸರಿಯಾಗಿ ಏರೋಪ್ಲೇನಿಂದ ನಿನ್ನ ಸಾಮಾನೆಲ್ಲಾ ತಗೊಂಡಿದ್ದಿ ತಾನೆ? ಏನೂ ಮರೆತಿಲ್ಲ ತಾನೆ?" ಎಂದು ಅವರಿಗೆ ಸಹಜವಾದ ಪ್ರಶ್ನೆಗಳನ್ನು ಕೇಳಿದರು. ಆದರೆ ಶಾಂತನು ಮಾತ್ರ "ಶಾರೂ, ನಾನು ಕೇಳಿದ್ದನ್ನೆಲ್ಲಾ ಅಮೆರಿಕಾದಿಂದ ತಂದಿದ್ದೀಯಾ" ಎಂದು ಕುಣಿಯಲಾರಂಭಿಸಿದ. "Thank you ಅಪ್ಪ" "ಏನೂ ಮರೆತಿಲ್ಲ ಅಮ್ಮಾ", "ತಂದಿದ್ದೀನಿ. ಮನೆಗೆ ಹೋಗುವವರೆಗೆ ಇರೊ" ಎಂದು ಎಲ್ಲರಿಗೆ ಹೇಳುತ್ತಾ ನನ್ನ ಮಿತ್ರ ಕಬೀರ್‌ಗಾಗಿ ಹುಡುಕಾಡಿದೆ. ಅದನ್ನ ಗ್ರಹಿಸಿದ ಶಾಂತನು "ಕಬೀರ್‌ಗೆ ಆಫೀಸಲ್ಲಿ ಕೆಲಸ ಇದೆಯಂತೆ. ಆಮೇಲೆ ಮನೆಗೆ ಬರ್ತಾನಂತೆ" ಅಂದ. ಎರಡು ವರ್ಷಗಳ ಕಾಲ ಅಮೆರಿಕಾದಲ್ಲಿ ಓದಿ ಹಿಂದಿರುಗಿದ್ದ ನನಗೆ ಅಪ್ಪನ ಹೆಮ್ಮೆ, ಅಮ್ಮನ ಪ್ರೀತಿ, ತಮ್ಮನ ಸ್ನೇಹ ಇವೆಲ್ಲವನ್ನು ಕಂಡು ನಾನು ಬೆಚ್ಚಗಿನ ಗೂಡಿಗೆ ವಾಪಸ್ಸು ಬಂದಿದ್ದೇನೆ ಅನ್ನಿಸಿತು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ನಮ್ಮ ಮನೆಗೆ ಐವತ್ತು ಕಿಲೋಮೀಟರ್ ಪಯಣ. ಮೊದಮೊದಲು ಅದು, ಇದು, ಗೆಳೆಯರು, ಬಂಧು ಬಳಗದವರ ಬಗ್ಗೆ ಒಂದಿಷ್ಟು ಅಮ್ಮ ಮತ್ತು ತಮ್ಮನೊಂದಿಗೆ ಚರ್ಚಿಸಿದೆ. ಇದನ್ನೆಲ್ಲ ಸ್ವಲ್ಪ ಕಾಲ ಕೇಳಿದ ಅಪ್ಪನಿಗೆ ಬೋರ್ ಆಯಿತು. ತಕ್ಷಣವೇ ಅಪ್ಪ, "ಶಾರು, ಡೆಮಾಕ್ರಟ್ ಪಕ್ಷದ ಅಭ್ಯರ್ಥಿಯಾಗಿ ಒಬಾಮಾ ಗೆಲ್ತಾನೋ ಅಥವಾ ಹಿಲರಿ ಕ್ಲಿಂಟನ್ ಗೆಲ್ತಾಳೊ?" ಎಂದು ಕೇಳಿದರು.

"ಸದ್ಯಕ್ಕೆ ಎಲ್ಲರೂ ಹೇಳ್ತಿರೋದು ಒಬಾಮಾನೇ ಗೆಲ್ತಾನೆ ಅಂತ" ಎಂದು ಹೇಳಿದೆ. ರಾಜಕೀಯ ಅಂದರೆ ಅಷ್ಟಕಷ್ಟೆ ಎಂಬಂತಿರುವ ಶಾಂತನು "ಅಲ್ಲಾ ಶಾರೂ, ಅಮೆರಿಕಾದ ಮಹಿಳೆಯರು ಮಾಡರ್ನ್ ಆಗಿದ್ದಾರೆ. ಅವರಲ್ಲಿ ಬಹಳಷ್ಟು ಜನ ನಿನ್ನಂತೆ ಮಹಿಳಾವಾದಿಗಳಾಗಿದ್ದಾರೆ. ಆದರೂ ಹಿಲರಿ ಎಂಬ ಮಹಿಳೆ ಬದಲಾಗಿ ಅಮೆರಿಕಾದಂತಹ ದೇಶದಲ್ಲೂ ಒಬಾಮಾ ಎಂಬ ಪುರುಷ ಗೆಲ್ತಾನೆ ಅಂದ್ರೆ ಯಾವಾಗಮ್ಮಾ ನಿಮ್ಮ women's fight ಗೆಲ್ಲೋದು?" ಎಂದು ನನ್ನನ್ನು ಕಿಚಾಯಿಸಿದ.

ಅವನ ಕೈಗೆ ಸಣ್ಣದಾದ ಒಂದು ಏಟು ಕೊಟ್ಟ ನಾನು "ಪೆದ್ದು ಮಹಿಳಾವಾದ ಅಂದ್ರೆ ಮಹಿಳೆಯರನ್ನೇ ಅಧಿಕಾರದ ಸ್ಥಾನಕ್ಕೆ ಗೆಲ್ಲಿಸೋದಲ್ಲ, ಹಾಗೆ ನೋಡಿದ್ರೆ ನಮ್ಮ ಇಂದಿರಾ ಗಾಂಧಿ, ಸೋನಿಯಾ ಗಾಂಧಿ, ಉಮಾ ಭಾರತಿ, ವಸುಂಧರಾ ರಾಜೆ ಮತ್ತು ಮಾಯಾವತಿ ಇವರನ್ನೆಲ್ಲಾ ಗೆಲ್ಲಿಸಿರೋ ನಮ್ಮ ದೇಶ ಮಹಿಳಾವಾದಿ ದೇಶ ಅಂತಾಯ್ತಾ? ಅಥವಾ ಅವರೆಲ್ಲಾ ಮಹಿಳಾವಾದಿಗಳು ಅಂತ ಹೇಳಕ್ಕಾಗುತ್ತಾ?" ಎಂದು ಮರುಪ್ರಶ್ನಿಸಿದೆ.

"ಅದೆಲ್ಲಾ ಸಂಗೊತ್ತಿಲ್ಲಪ್ಪ" ಎಂದು ಶಾಂತನು ಹೇಳಿ ಮುಗಿಸುತ್ತಿದ್ದಂತೆ ಅಪ್ಪ "ಇಂದಿರಾ ಗಾಂಧಿ ಮಹಿಳಾವಾದಿ ಆಗಿರಲಿಲ್ಲ, ಬದಲಾಗಿ ಅದ್ಯಾರೋ ಹೇಳಿದ್ದಂತೆ ಆಕೆಯ ಸಚಿವ ಸಂಪುಟದಲ್ಲಿದ್ದ ಏಕೈಕ ಪುರುಷ ಆಕೆಯಾಗಿದ್ದಳು" ಎಂದು ಹೇಳಿ ನಕ್ಕರು.

"ಇದೇನ್ರಿ, ಮಹಿಳೆಯರ ಯಶಸ್ಸನ್ನು ಇಷ್ಟು ಹಗುರವಾಗಿ ತಿರಸ್ಕರಿಸುತ್ತೀರಾ?" ಎಂದು ಅಮ್ಮ ಸ್ವಲ್ಪ ಮುನಿಸಿನಿಂದಲೇ ಅಪ್ಪನನ್ನು ಕೇಳಿದರು. "ನಾನಂದದ್ದು ಹಾಗಲ್ಲ, ಮಹಿಳೆಯಾಗಲಿ, ಪುರುಷನಾಗಲಿ ಅವರು ಯಶಸ್ಸುಗಳಿಸುವುದಕ್ಕೂ, ಮಹಿಳಾವಾದಿಗಳಾಗಿರುವುದಕ್ಕೂ ವ್ಯತ್ಯಾಸ ಇದೆ ಅಂತ ಹೇಳಿದ್ದು" ಎಂದು ಅಪ್ಪ ಉತ್ತರಿಸಿದರು.

ಅಪ್ಪ ಹೇಳಿದ್ದು ಸತ್ಯ, ಯಾಕೆಂದರೆ ಮಹಿಳೆ ಆಗಿರುವ ಮಾತ್ರಕ್ಕೆ, ಅವರು ಮಹಿಳಾವಾದಿಗಳಾಗಿರುತ್ತಾರೆ ಎಂಬುದು ಎಷ್ಟು ತಪ್ಪೋ, ಹಾಗೆಯೇ ಪುರುಷರಾಗಿರುವ ಮಾತ್ರಕ್ಕೆ ಅವರು ಮಹಿಳಾವಾದವನ್ನು ತಿರಸ್ಕರಿಸುತ್ತಾರೆ ಎಂಬುದೂ ಅಷ್ಟೇ ತಪ್ಪು, ಉದಾಹರಣೆಗೆ ಭಾರತದ ಇಂದಿರಾ ಗಾಂಧಿ, ಇಸ್ರೇಲಿನ ಗೊಲ್ಡಾ ಮಿಯರ್, ಶ್ರೀಲಂಕಾದ ಸಿರಿಮಾವೋ ಬಂಡಾರನಾಯ್ಕೆ, ಇಂಗ್ಲೆಂಡಿನ ಮಾರ್ಗರೆಟ್ ಥಾಚೆರ್ ಇವರೆಲ್ಲಾ ವಿವಿಧ ಸಂಸ್ಕೃತಿಯ ದೇಶಗಳ ನಾಯಕಿಯರಾದರೂ ಅವರ್‍ಯಾರೂ ಮಹಿಳಾವಾದಿಗಳಾಗಿರಲಿಲ್ಲ, ಅಷ್ಟೇ ಅಲ್ಲ, ತಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಅವರೂ ಪುರುಷರಂತೆ ಅಧಿಕಾರವನ್ನು ಚಲಾಯಿಸಿದರೇ ಹೊರತು ಮಹಿಳಾವಾದದ ಸರಳ ತಂತ್ರಗಳೂ ಆಡಳಿತದಲ್ಲಿ ಸೇರಿಕೊಳ್ಳುವಂತೆ ಮತ್ತು ತಮ್ಮ ಇಡೀ ಸಮಾಜಕ್ಕೆ, ಲಿಂಗಭೇದವಿಲ್ಲದ ಸಮಾನತೆಯಲ್ಲಿ ಭರವಸೆ ಮೂಡುವಂತೆ ಏನನ್ನೂ ಮಾಡಲಿಲ್ಲ, ಅಧಿಕಾರಕ್ಕಾಗಿ ಅಧಿಕಾರ ಎಂಬ ಸೂತ್ರದಲ್ಲಿ ನಂಬಿಕೆ ಇಟ್ಟ ಎಲ್ಲಾ ಮಹಿಳಾ ನಾಯಕಿಯರು ಪುರುಷ ಪ್ರಧಾನ ಸಂಸ್ಕೃತಿಯಲ್ಲಿ ಪುರುಷರಂತೆಯೇ ವರ್ತಿಸಿದರೆ ಹೊರತು ಮುಖ್ಯವಾಹಿನಿಯಲ್ಲಿ ಸ್ತ್ರೀವಾದ ಹರಡುವಂತೆ ಮಾಡಲಿಲ್ಲ.

ಇದನ್ನೆಲ್ಲಾ ನೆನಪಿಸಿಕೊಂಡ ನಾನು "ಅಪ್ಪಾ, ವಿಚಿತ್ರ ಏನು ಗೊತ್ತಾ? ಅಮೆರಿಕದ ಹಲವು ಹಿರಿಯ ಸ್ತ್ರೀವಾದಿಗಳು ಮಹಿಳೆಯರೆಲ್ಲಾ ಹಿಲರಿಗೆ ತಮ್ಮ ಬೆಂಬಲ ನೀಡಬೇಕು ಎಂದಿದ್ದರೂ ಬಹಳಷ್ಟು ಮಹಿಳೆಯರು ಹಿಲರಿ ಸ್ತ್ರೀವಾದಿ ಅಲ್ಲವೇ ಅಲ್ಲ ಎಂದು ವಾದಿಸಿದ್ದಾರೆ. ಅಷ್ಟೇ ಅಲ್ಲ, ಹಿಲರಿಗೂ ಸ್ತ್ರೀವಾದಕ್ಕೂ ಸಂಬಂಧವೇ ಇಲ್ಲ, ಆಕಸ್ಮಾತ್ ಆಕೆ ಅಧ್ಯಕ್ಷೆಯಾದರೆ ಆಕೆ ಕೂಡ ಬುಷ್ ಅಥವಾ ಕ್ಲಿಂಟನ್‌ನಂತಹ ಪುರುಷರಂತೆಯೇ ಆಡಳಿತ ನಡೆಸುತ್ತಾಳೆ ಎಂದೇ ಅಭಿಪ್ರಾಯಪಟ್ಟಿದ್ದಾರೆ" ಎಂದೆ.

"ಅದು ಸರಿನೇ ಇರಬಹುದು. ಇತ್ತೀಚೆಗೆ ಆಕೆ ತಾನು ಅಧ್ಯಕ್ಷೆಯಾದರೆ ಇರಾನ್ ಕಿರುಕುಳ ನೀಡಿದರೆ ಆ ದೇಶವನ್ನೇ ಸರ್ವನಾಶ ಮಾಡುತ್ತೇನೆ ಅಂದಳು. ಅದು ಪುರುಷವಾದಿ ಹೇಳುವಂತಹ ಮಾತೇ ಹೊರತು ಮಹಿಳಾವಾದಿಯೊಬ್ಬಳು ಹೇಳುವಂತದ್ದಲ್ಲ" ಎಂದರು ಅಪ್ಪ.

ಆದರೆ ಶಾಂತನು ಸುಮ್ಮನಿರಬೇಕಲ್ಲ, "She is such a man, wow" ಅಂದ. ಅವನಿಗೆ ಮತ್ತೊಂದು ತುಂಟಾಟದ ಏಟು ತೊಟ್ಟು "ನೋಡ್ತಿರು, ಒಂದು ದಿನ ನಮ್ಮ ಕಾಲಾನೂ ಬರುತ್ತೆ ಇದು ಮಹಿಳಾ ಪ್ರಧಾನ ಜಗತ್ತಾಗಿ ಪರಿವರ್ತನೆಗೊಂಡು ನೀನು ನಿನ್ನ ಹುಡುಗಿ ಹೇಳಿದಂತೆ ಕುಣಿಯಬೇಕಾಗುತ್ತೆ" ಎಂದೆ.

"ಕನಸು ಕಾಣು ಶಾರೂ, ಅದಕ್ಕೆ ಯಾರೂ ಟ್ಯಾಕ್ಸ್ ಹಾಕಲ್ಲ" ಎಂದು ಶಾಂತನು ಹೇಳುತ್ತಿದ್ದಂತೆ ನಾವು ಮನೆ ತಲುಪಿದೆವು. ಮನೆ ಮುಂದೆ ಆಗಲೇ ಕಬೀರ್‌ನ ಕಾರ್ ನಿಂತಿತ್ತು, ಮನೆಯ ಹಾಲ್‌ನಲ್ಲಿ ನನ್ನ welcome ಪಾರ್ಟಿಗೆಂದು ಕಬೀರ್ ಆಗಲೇ ಎಲ್ಲಾ ಸರಂಜಾಮುಗಳನ್ನು ಜೋಡಿಸಿದ್ದ, ಪಕ್ಕದ ಟೇಬಲ್ ಮೇಲೆ ನಾಲ್ಕು ಡಜನ್ ಕೆಂಪು ಗುಲಾಬಿಗಳ ಬೊಕೆಯನ್ನು ತಂದಿಟ್ಟಿದ್ದ. ಅದರ ಮೇಲಿನ ಪುಟ್ಟ ಹಾಳೆಯಲ್ಲಿ 'Welcome back to the one and only Sharade' ಎಂದು ದುಂಡದಾದ ಅಕ್ಷರಗಳಲ್ಲಿ ಬರೆದಿದ್ದ.

ನನ್ನ ಕಬೀರ್‌ನನ್ನು ನೋಡಿದಾಗ ಎಷ್ಟು ಸಂತೋಷ ಆಯಿತೆಂದರೆ ಅವನತ್ತ ಹೋಗಿ ಅವನನ್ನು ಗಟ್ಟಿಯಾಗಿ ಅಪ್ಪಿಕೊಂಡೆ. ನನ್ನ ಹಣೆಗೆ ಪುಟ್ಟ ಮುತ್ತೊಂದನ್ನು ನೀಡಿದ ಕಬೀರ್ "ಎರಡು ವರ್ಷ ನಮ್ಮನ್ನೆಲ್ಲ ಕಾಯಿಸಿದ ನೀನು ಮತ್ತೆಂದೂ ದೂರ ಹೋಗುವಂತಿಲ್ಲ" ಎಂದ.

■ ಶಾರದೆ



ಅನಿವಾರ್ಯ ಕಾರಣಗಳಿಂದ ಈ ವಾರ ಶಿವಸುಂದರ್‌ರವರ 'ಚಾರ್ವಾಕ' ಅಂಕಣ ಪ್ರಕಟವಾಗುತ್ತಿಲ್ಲ.

-ಸಂ

ಕಳೆದ ವಾರದ ಸಂಚಿಕೆಯಲ್ಲಿ 'ಮರಿಯಾ ಮೈ ಡಾರ್ಲಿಂಗ್' ಎಂಬ ವರದಿಗೆ ಸಂಬಂಧಿಸಿದ ಬಾಕ್ಸ್‌ನಲ್ಲಿ ನಟ ಹರೀಶ್ ರಾಯ್ ಇನ್ನಿಲ್ಲ ಎಂದು ತಪ್ಪಾಗಿ ವರದಿಯಾಗಿತ್ತು. ಈ ಅಚಾತುರ್ಯಕ್ಕೆ ಕ್ಷಮೆ ಯಾಚಿಸುತ್ತಾ ಹರೀಶ್ ರಾಯ್ ಅವರು ಕ್ರಿಯಾಶೀಲರಾಗಿ ಬಹಳಷ್ಟು ಕಾಲ ಇರಲೆಂದು ಆಶಿಸುತ್ತೇವೆ.

-ಸಂ

ನಾಯಕತ್ವದ ಗುಣ



ಕಂಡಹಾಗೆ

■ ಗೌರಿ ಲಂಕೇಶ್

ಕಳೆದ ಹಲವಾರು ವರ್ಷಗಳಿಂದ ನಾವೆಲ್ಲ ಸಹಸ್ರಾರು ರಾಜಕೀಯ ಾಯಕರ ಭಾಷಣಗಳನ್ನು ಕೇಳಿದ್ದೇವೆ, ಟಿವಿಗಳಲ್ಲಿ ನೋಡಿದ್ದೇವೆ, ಪತ್ರಿಕೆಗಳಲ್ಲಿ ದಿದ್ದೇವೆ. ಅದರಲ್ಲೂ ಇತ್ತೀಚೆಗೆ ತಾನೆ ಮುಗಿದಿರುವ ಚುನಾವಣಾ ಂದರ್ಭದಲ್ಲಿ ಅವರೆಲ್ಲರ ಮಾತುಗಳೇ ಎಲ್ಲೆಡೆ ತಾಂಡವವಾಡುತ್ತಿದ್ದವು.

ಆದರೆ ಒಂದು ಕ್ಷಣ ಸುಮ್ಮನೆ ಯೋಚಿಸಿ. ಕರ್ನಾಟಕದ ಯಾವ ಾಜಕೀಯ ನಾಯಕನಾದರೂ ಪ್ರಬುದ್ಧವಾಗಿ, ನಮ್ಮೆಲ್ಲರನ್ನು ಕ್ರಿಯಾಶೀಲ ೋಚನೆಗಳಿಗೆ ಹಚ್ಚುವಂತೆ, ಈ ರಾಜ್ಯದ ಸಾಮಾಜಿಕ, ಆರ್ಥಿಕ ಮತ್ತು ಾಜಕೀಯ ಪರಿಸ್ಥಿತಿಗಳನ್ನು ವಿಮರ್ಶಿಸುವಂತೆ, ನಿಜವಾದ ಬದಲಾವಣೆಗಳು ರಬೇಕೆಂದರೆ ಯಾವುದು ಅಗತ್ಯ ಎಂಬುದರ ಬಗ್ಗೆ ನಮ್ಮ ಮನಸ್ಸಿಗೆ ಾಗುವಂತಹ ಒಂದೇ ಒಂದು ಸಾಲನ್ನಾದರೂ ಹೇಳಿದ್ದು ನೆನಪಾಗುತ್ತದೆಯೇ?

ಇಲ್ಲ ಅಲ್ಲವೇ?

ಬದಲಾಗಿ ನಮ್ಮ ನಾಯಕರುಗಳು ಮತ್ತೆ ಮತ್ತೆ ಹೇಳಿದ್ದಾದರೂ ೇನನ್ನು? ಒಬ್ಬ "ನನಗೆ ದ್ರೋಹ ಬಗೆದವರನ್ನು ಸೋಲಿಸಿ", ಮತ್ತೊಬ್ಬ ಮಣ್ಣಿನ ಮಕ್ಕಳನ್ನು ಗೆಲ್ಲಿಸಿ", ಮಗದೊಬ್ಬ "ನನ್ನನ್ನೇ ಪಕ್ಷದ ನಾಯಕ ೆಂದು ಘೋಷಿಸಿದ್ದರೆ ನಾವು ಗೆಲ್ಲುತ್ತಿದ್ದೆವು" ಎಂಬಂತಹ ಮಾತುಗಳನ್ನಲ್ಲವೇ? ವುಗಳೊಂದಿಗೆ ಎರಡು ರೂಪಾಯಿಗೆ ಅಕ್ಕಿ, ಪುಕ್ಕಟೆ ಕಲರ್ ಟಿವಿ, ಚಿತ ವಿದ್ಯುತ್ ಎಂಬ ಅಸಾಧ್ಯವಾದ ಭರವಸೆಗಳನ್ನು ಮಾತ್ರ. ಅವರಲ್ಲಿ ಾರಾದರೊಬ್ಬರು ನಮ್ಮ ಸಮಾಜದ ಎಲ್ಲಾ ವರ್ಗ ಮತ್ತು ಜಾತಿಗಳನ್ನು ಗ್ಗೂಡಿಸಬೇಕೆಂದು, ಎಲ್ಲರ ಕನಸನ್ನು ನನಸಾಗಿಸಬೇಕೆಂದು, ಎಲ್ಲರಿಗೂ ಉದ್ಯೋಗ, ಉಚಿತ ವೈದ್ಯಕೀಯ ಸೇವೆ, ಸಮಾನ ಶಿಕ್ಷಣ ವ್ಯವಸ್ಥೆ ರ್ಮ, ಲಿಂಗ, ರ್ಗದಂತಹ ಭೇದಗಳನ್ನು ಿಭಾವಿಸದ ಸಮಾನ ವಕಾಶ... ಂತಹವುಗಳನ್ನು ಲ್ಪಿಸಬೇಕೆಂದು ಾತನಾಡಿದ ಉದಾಹರಣೆ ಗುತ್ತದೆಯೆ?

ಎಲ್ಲರೂ ಒಗ್ಗಟ್ಟಾಗಿ ಮ್ಮ ಇಂದಿನ ಮಸ್ಯೆಗಳಾದ ಅಪರಾಧ, ಯೋತ್ಪಾದನೆ, ಣದುಬ್ಬರ, ನಿರುದ್ಯೋಗ, ಸಮಾನತೆಗಳನ್ನು ವಾರಣೆ ಮಾಡುವ ಕಲ್ಪವನ್ನು ಾಡಬೇಕೆಂದು ಾತನಾಡಿದ ಉದಾಹರಣೆ ಮ್ಮ ಮುಂದಿದೆಯೇ?

ಇಲ್ಲ ಅಲ್ಲವೆ?

ಬದಲಾಗಿ ನಮ್ಮ ನಾಯಕರೆಲ್ಲ ಪರಸ್ಪರ ದೂಷಣೆಯಲ್ಲಿ ತೊಡಗಿದ್ದರು. ನಿಮ್ಮಿಂದ ಭಯೋತ್ಪಾದನೆ ಹೆಚ್ಚಾಗಿದೆ" ಎಂದು ಒಬ್ಬನೆಂದರೆ "ಅಂಥವರನ್ನು ತುಗಡೆ ಮಾಡಿದ್ದೇ ನೀವು" ಎಂಬುದು ಮತ್ತೊಬ್ಬನ ಉತ್ತರವಾಗಿತ್ತು. ಗೆಯೇ "ಹಣದುಬ್ಬರಕ್ಕೆ ನೀವೇ ಕಾರಣ" ಎಂದು ಮತ್ತೊಬ್ಬನೆಂದರೆ ಆರ್ಥಿಕ ನೀತಿಗೆ ನೀವೂ ಬೆಂಬಲ ಸೂಚಿಸಿದ್ದಿರಿ" ಎಂಬ ಉತ್ತರ ಮುರಾಗುತ್ತಿತ್ತು. ಇಂತಹ ಪರಸ್ಪರ ಕೆಸರೆರಚಾಟದಲ್ಲಿ ಅವರಿಗೆ ಮತಗಳು ನೆಯೇ ಹೊರತು ಜನಸಾಮಾನ್ಯರ ಯಾವ ಸಮಸ್ಯೆಯೂ ಬಗೆಹರಿಯಲಿಲ್ಲ. ತಹ ಆರೋಪ ಮತ್ತು ಪ್ರತ್ಯಾರೋಪಗಳು ಮತಗಳನ್ನು ಗಳಿಸುವುದಕ್ಕೆಂದೇ ಡಿದ್ದರಿಂದ ಚುನಾವಣೆಗಳ ನಂತರ ಜನರ ಸಮಸ್ಯೆಗಳು ಬಗೆಹರಿಯುತ್ತವೆ ಬ ಭರವಸೆಯೂ ಉಳಿದಿಲ್ಲ. ಬದಲಾಗಿ "ನಿಮ್ಮಲ್ಲೊಬ್ಬರು ಗೆದ್ದಿದ್ದೀರಿ. ರಿಗೆ ಹೆಚ್ಚು ಕಾಟ ಕೊಡದೆ ಅದು ಹೇಗೋ ಆಡಳಿತ ನಡೆಸಿಕೊಂಡು ೋಗಿ ಮಾರಾಯರೆ" ಎಂಬ ಭಾವನೆಯೇ ಇವತ್ತು ಹೆಚ್ಚು ಜನರ ನಸ್ಸಿನಲ್ಲಿ ಮನೆ ಮಾಡಿದೆ. ಸಾಮಾನ್ಯ ಜನರಲ್ಲಿನ ಇಂತಹ ಸಿನಿಕತನಕ್ಕೆ ರಣ ಇಲ್ಲದಿಲ್ಲ. ಶತಶತಮಾನಗಳ ಕಾಲದಿಂದ ಬೇರೆಬೇರೆ ಜನರನ್ನು ಕಾರದಲ್ಲಿ ಕಂಡಿರುವ ನಮ್ಮ ಜನರಿಗೆ "ಯಾರೇ ಬಂದರೂ ನಾವು ಗಿ ಬೀಸೋದು ತಪ್ಪಲ್ಲ" ಎಂಬ ಮಾತು ನಾಣ್ನುಡಿಯಾಗಿ ಅವರ ನಸ್ಸಿನಲ್ಲಿ ಬೇರುಬಿಟ್ಟಿದೆ. ಅಂದಿನ ರಾಜನ ಜಾಗದಲ್ಲಿ ಇವತ್ತು 'ರಾಜ'ಕಾರಣಿ ದಿದ್ದರೂ ಆ ಮನಸ್ಥಿತಿಯಲ್ಲಿ ಬದಲಾವಣೆ ಆಗಿಲ್ಲ. ಯಾರೇ ಅಧಿಕಾರಕ್ಕೆ ಬಂದರೂ ತಮ್ಮ ಜೀವನದಲ್ಲಿ ಯಾವ ಬದಲಾವಣೆಗಳೂ ಆಗುವುದಿಲ್ಲ ಎಂಬ ನಂಬಿಕೆ ಜನರಲ್ಲಿ ದೃಢವಾಗುವಷ್ಟರ ಮಟ್ಟಿನ ನಮ್ಮ ಈ ಬೃಹತ್ ಪ್ರಜಾಪ್ರಭುತ್ವ ಯಶಸ್ವಿಯಾಗಿದೆ! ಈ ಮಾತು ಇವತ್ತು ಬಹಳಷ್ಟು ದೇಶಗಳಿಗೂ ಅನ್ವಯಿಸುತ್ತದೆ ಎಂಬುದು ಬೇರೆ ಮಾತು.

ಆದರೆ ಇತ್ತೀಚೆಗೆ ಬೇರೊಬ್ಬ ರಾಜಕಾರಣಿ ಮಾಡಿದ ಭಾಷಣ, ಅದರಲ್ಲಿ ಆತ ವ್ಯಕ್ತಪಡಿಸಿದ ಆಶೆ, ಜನರನ್ನು ಒಗ್ಗೂಡಿಸುವ ಬಯಕೆ ನನಗೆ ತುಂಬಾ ಇಷ್ಟವಾಯಿತು. ಆದ್ದರಿಂದ ಆ ಭಾಷಣದ ಹಲವು ಮುಖ್ಯ ತುಣುಕುಗಳನ್ನು ಇಲ್ಲಿ ಭಾವಾನುವಾದ ಮಾಡಿ ನೀಡುತ್ತಿದ್ದೇನೆ.

"ನಮ್ಮ ಸಂವಿಧಾನದಲ್ಲಿ ಎಲ್ಲರಿಗೂ ಸಮಾನ ಸ್ಥಾನವನ್ನು ನೀಡಲಾಗಿದೆ. ಆದರೆ ಕಾಗದದ ಮೇಲಿನ ಆ ಆಶ್ವಾಸನೆ ನಮ್ಮ ದಲಿತರಿಗೆ ಮುಕ್ತಿ ನೀಡುವುದಿಲ್ಲ, ಎಲ್ಲಾ ಧರ್ಮ ಮತ್ತು ವರ್ಗದ ಪುರುಷ ಮತ್ತು ಸ್ತ್ರೀಯರಿಗೆ ಈ ದೇಶದ ಪ್ರಜೆಗಳಾಗಿ ಸಮಾನ ಹಕ್ಕುಗಳನ್ನು ಹಾಗು ಅವಕಾಶಗಳನ್ನು ದಯಪಾಲಿಸುವುದಿಲ್ಲ. ಆದ್ದರಿಂದ ನಮ್ಮ ಸಂವಿಧಾನದಲ್ಲಿನ ಆಶಯಗಳನ್ನು ವಾಸ್ತವಗೊಳಿಸುವ ಜವಾಬ್ದಾರಿ ಎಲ್ಲಾ ಜನರ ಮೇಲಿದೆ. ಪ್ರತಿಭಟನೆ ಮತ್ತು ಹೋರಾಟದ ಮೂಲಕ, ರಸ್ತೆಬದಿ ಪ್ರತಿರೋಧದಿಂದ ನ್ಯಾಯಾಲಯದ ಮುಂದೆ ಮೊಕದ್ದಮೆಗಳನ್ನು ಹೂಡುವ ಮೂಲಕ, ಆಂತರಿಕ ಯುದ್ಧ ಮತ್ತು ಅಸಹಕಾರ ಚಳವಳಿಗಳ ಮೂಲಕ ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ವೈಯಕ್ತಿಕ ಹಿತಾಸಕ್ತಿಯನ್ನು ತೊರೆದು ಹೋರಾಟ ಮಾಡಿದಾಗ ಮಾತ್ರ ನಮ್ಮ ಸಂವಿಧಾನದಲ್ಲಿನ ಆಶಯ ಮತ್ತು ಪ್ರಸ್ತುತ ವಾಸ್ತವತೆಗಳ ನಡುವಿನ ಅಂತರವನ್ನು ಕಡಿಮೆ ಮಾಡಬಹುದು.



ನಮಗಿಂತಲೂ ಮುನ್ನ ಬಂದ ಜನ ಹೇಗೆ ಈ ದೇಶದಲ್ಲಿ ಸಮಾನತೆ, ನ್ಯಾಯ, ಸ್ವಾತಂತ್ರ್ಯ ಮತ್ತು ಸರ್ವರ ಅಭಿವೃದ್ಧಿಗಾಗಿ ಶ್ರಮಿಸಿದ್ದರೋ, ಅವರ ಹೋರಾಟವನ್ನು ಇಂದಿನ ಪೀಳಿಗೆಯವರು ಒಗ್ಗಟ್ಟಾಗಿ ಮುಂದುವರಿಸಬೇಕಿದೆ. ಯಾಕೆಂದರೆ ಇವತ್ತು ನಮ್ಮ ಮುಂದಿರುವ ಸಮಸ್ಯೆಗಳನ್ನು ನಾವು ಒಗ್ಗಟ್ಟಾಗದೇ ಬಗೆಹರಿಸಲಾಗುವುದಿಲ್ಲ. ನಾವೆಲ್ಲ ಬೇರೆಬೇರೆ ಸಂಸ್ಕೃತಿಯಿಂದ ಬಂದಿರಬಹುದು, ಆದರೆ ನಮ್ಮೆಲ್ಲರ ಆಶಯ ಒಂದೇ. ನಾವೆಲ್ಲ ಒಂದೇ ಧರ್ಮ, ಜಾತಿ ಅಥವಾ ವರ್ಗಕ್ಕೆ ಸೇರಿಲ್ಲದಿರಬಹುದು ಆದರೆ ನಾವೆಲ್ಲ ಜೊತೆಯಾಗಿ ಪಯಣಿಸಬೇಕಿರುವ ದಿಕ್ಕು ಒಂದೇ. ಅದು ನಮಗೂ, ನಮ್ಮ ಮಕ್ಕಳಿಗೂ, ಮೊಮ್ಮಕ್ಕಳಿಗೂ ಇವತ್ತಿಗಿಂತಲೂ ಉತ್ತಮ ಭವಿಷ್ಯವನ್ನು ಕಲ್ಪಿಸುವ ಆಶೆ ಮತ್ತು ದಿಕ್ಕು.

ಅದರಲ್ಲೂ ಇವತ್ತು ನಮ್ಮೆಲ್ಲರ ಮುಂದಿರುವ ಸಮಸ್ಯೆಗಳು ಸರಳವಾದುದಲ್ಲ. ಯುದ್ಧ, ಭಯೋತ್ಪಾದನೆ, ಕುಸಿಯುತ್ತಿರುವ ಆರ್ಥಿಕ ವ್ಯವಸ್ಥೆ, ಬಡವರಿಗೆ ಎಟುಕಲಾರದ ಆರೋಗ್ಯ ವ್ಯವಸ್ಥೆ, ಏರುಪೇರಾಗುತ್ತಿರುವ ಜಾಗತಿಕ ತಾಪಮಾನ. ಈ ಎಲ್ಲಾ ವಿಷಯಗಳು ಧರ್ಮ, ಲಿಂಗ, ವರ್ಗ ಎಂಬ ಭೇದಭಾವನೆ ಇಲ್ಲದೆ ಎಲ್ಲರನ್ನೂ ತಾಕುತ್ತಿರುವ ಸಮಸ್ಯೆಗಳಾಗಿವೆ.

ಇಂತಹ ಸಮಸ್ಯೆಗಳು ನಮ್ಮೆಲ್ಲರ ಮುಂದಿದ್ದರೂ ಬಡವರ ಮಕ್ಕಳೇ ಅವಲಂಬಿಸಿರುವ ಸರ್ಕಾರಿ ಶಾಲೆಗಳನ್ನು ಉತ್ತಮಗೊಳಿಸಲು ನಮ್ಮ ವ್ಯವಸ್ಥೆಯಿಂದ ಸಾಧ್ಯವಾಗಿಲ್ಲ. ಆ ಶಾಲೆಗಳ ಅಸಮರ್ಥತೆಯಿಂದಾಗಿ ಇವತ್ತು ವಿವಿಧ ವರ್ಗಗಳ ಮಕ್ಕಳ ಸಾಮರ್ಥ್ಯದ ನಡುವಿನ ಅಂತರವನ್ನು ಕುಗ್ಗಿಸಲಾಗಿಲ್ಲ. ಬದಲಾಗಿ ಇವತ್ತಿಗೂ ದಲಿತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಅವಕಾಶಗಳು ಸಿಗದಂತೆ ನೋಡಿಕೊಳ್ಳಲಾಗುತ್ತಿದೆ. ಅವರಿಗೆ ಬ್ಯಾಂಕ್ ಸಾಲಗಳಾಗಲಿ, ಬಾಡಿಗೆ ಮನೆಗಳಾಗಲಿ ಸಿಗದಂತೆ ಇಡೀ ವ್ಯವಸ್ಥೆಯನ್ನು ತಿರುಚಲಾಗಿದೆ. ಅಷ್ಟೇ ಅಲ್ಲ, ಆ ಸಮುದಾಯದವರಿಗೆ ಅವರ ಸಂಖ್ಯಾ ಪ್ರಮಾಣಕ್ಕೆ ತಕ್ಕಂತೆ ಸರ್ಕಾರಿ ಉದ್ಯೋಗಗಳೂ ಸಿಗದಂತೆ ನೋಡಿಕೊಳ್ಳಲಾಗಿದೆ. ಇದೆಲ್ಲದರಿಂದ ಏನಾಗಿದೆ ಎಂದರೆ ಆ ಸಮುದಾಯಗಳು ಇವತ್ತಿಗೂ ಬಡತನದ ಬೇಗುದಿಯಲ್ಲಿ, ಅಸಹಾಯಕತೆಯ ಅವಮಾನದಲ್ಲಿ ಬದುಕುವಂತಾಗಿದೆ. ಇದೆಲ್ಲದರಿಂದಾಗಿ ಆ ಸಮುದಾಯಗಳಲ್ಲಿ ಅಪರಾಧಗಳು ಹೆಚ್ಚಾಗುತ್ತಿದೆ. ಇದಕ್ಕೆ ಅವರು ಮಾತ್ರ ಜವಾಬ್ದಾರರೋ ಅಥವಾ ಅವರನ್ನು ಅಂತಹ ಸ್ಥಿತಿಗೆ ದೂಡಿದ ಸಮಾಜ ಜವಾಬ್ದಾರವೋ?


ಇವತ್ತು ಮೀಸಲಾತಿ ಬಗ್ಗೆ ಮೇಲುಜಾತಿಗಳ ಸಮುದಾಯಗಳಿಗೆ ಅಸಮಾಧಾನವಿದೆ. ಆ ಮೇಲುಜಾತಿಗಳ ಬಹಳಷ್ಟು ಜನರಲ್ಲಿ ತಮಗೆ ಯಾವುದೇ ಸೌಲಭ್ಯಗಳಿಲ್ಲದಿದ್ದರೂ ತಮ್ಮ ಸ್ವಂತ ಪರಿಶ್ರಮದಿಂದ ಮೇಲೆ ಬಂದಿದ್ದೇವೆ ಎಂಬ ಭಾವನೆ ಇದೆ. ಆದ್ದರಿಂದ ಅವರು ವೈಯಕ್ತಿಕವಾಗಿ ಯಾವ ಅನಾಚಾರದಲ್ಲಿ ಪಾಲ್ಗೊಳ್ಳದಿದ್ದರೂ ಅನಗತ್ಯವಾಗಿ ತಮ್ಮನ್ನು ಶಿಕ್ಷಿಸಲಾಗುತ್ತಿದೆ ಎಂಬ ಬೇಸರವಿದೆ. ಅದರಲ್ಲೂ ಇಂದಿನ ಪೈಪೋಟಿ ಯುಗದಲ್ಲಿ ತಮಗೆ ದಕ್ಕಬೇಕಿದ್ದ ಅವಕಾಶಗಳು ಮೀಸಲಾತಿಯಿಂದಾಗಿ ಬೇರೆ ಜಾತಿಯವರ ಪಾಲಾಗುತ್ತಿದೆ ಎಂಬ ಆಕ್ರೋಶವಿದೆ. ಜಾಗತೀಕರಣ, ಪೈಪೋಟಿ ಮತ್ತು ಹಣದುಬ್ಬರದ ಈ ದಿನಗಳಲ್ಲಿ ತಮ್ಮ ಮಕ್ಕಳಿಗೆ ಸಿಗಬೇಕಿದ್ದ ಹುದ್ದೆಗಳು ಮೀಸಲಾತಿಯಿಂದಾಗಿ ಕೆಳಜಾತಿಯ ಅನರ್ಹರಿಗೆ ಸಿಗುತ್ತಿವೆ ಎಂಬ ಕಲ್ಪನೆ ಮನೆ ಮಾಡಿದೆ. ತಮ್ಮ ಬದುಕಿನ ಮತ್ತು ಭವಿಷ್ಯದ ಕನಸುಗಳನ್ನು ಅನ್ಯ ಜಾತಿಯವರು ದೋಚುತ್ತಿದ್ದಾರೆ ಎಂಬ ಅಸಮಾಧಾನವಿದೆ.

ಇಂಥ ಭಾವನೆಗಳಿಂದ ನಮ್ಮ ಇಡೀ ಸಮಾಜಕ್ಕೆ ಅಪಾಯವಿದೆ. ಯಾಕೆಂದರೆ ಅಂಥ ಭಾವನೆಗಳನ್ನೇ ಬಂಡವಾಳ ಮಾಡಿಕೊಂಡು ಮೂಲಭೂತವಾದಿ ಪಕ್ಷಗಳು ಗಟ್ಟಿಗೊಂಡು ಇಡೀ ಸಮಾಜದ ಕ್ಷೇಮಕ್ಕೆ ಅನಾಹುತಕಾರಿಯಾಗುತ್ತಿವೆ. ಒಂದೆಡೆ ಸಹಸ್ರಾರು ಶತಮಾನಗಳಿಂದ ದೌರ್ಜನ್ಯವನ್ನು ಅನುಭವಿಸುತ್ತಾ ಬಂದಿರುವ ದಲಿತ ಮತ್ತು ಅಲ್ಪಸಂಖ್ಯಾತರ ಅಸಮಾಧಾನ, ಇನ್ನೊಂದೆಡೆ ಮೀಸಲಾತಿಯಿಂದಾಗಿ ತಮಗೆ ವಂಚನೆಯಾಗುತ್ತಿದೆ ಎಂಬ ಮೇಲುಜಾತಿಗಳ ಆಕ್ರೋಶ, ಇವುಗಳನ್ನೇ ಬಂಡವಾಳ ಮಾಡಿಕೊಂಡು ಮೂಲಭೂತವಾದಿ ಪಕ್ಷಗಳು ಚುನಾವಣೆಗಳಲ್ಲಿ ತನ್ನ ಮತಗಳನ್ನು ಹೆಚ್ಚಿಸಿಕೊಳ್ಳುತ್ತಿವೆ.


ಆದರೆ ಹೇಗೆ ದಲಿತರ ಮತ್ತು ಅಲ್ಪಸಂಖ್ಯಾತರ ಕೋಪ ನಿರುಪಯುಕ್ತವೊ, ಹಾಗೆಯೇ ಮೇಲುಜಾತಿಗಳ ಅಸಹನೆ ಕೂಡ. ಯಾಕೆಂದರೆ ಇವೆರಡರ ನಡುವೆ ಎಲ್ಲರ ನಿಜವಾದ ವೈರಿಗಳಾದ ಕಾರ್ಪೋರೇಟ್ ಸಂಸ್ಕೃತಿ, ಭ್ರಷ್ಟಾಚಾರ, ಒಳಒಪ್ಪಂದಗಳು, ಕಳ್ಳ ವ್ಯವಹಾರ, ಹಲವರನ್ನೇ ಉದ್ಧಾರ ಮಾಡುವ ಆರ್ಥಿಕ ನೀತಿ, ಇವೆಲ್ಲವೂ ಮರೆಯಾಗುತ್ತಿವೆ. ಜನರ ವಿರುದ್ಧ ಜನರನ್ನು ಎತ್ತಿಕಟ್ಟಿ ಅವರೆಲ್ಲ ಪರಸ್ಪರ ಕಚ್ಚಾಡುವಾಗ ನಿಜವಾದ ಸಮಸ್ಯೆಗಳತ್ತ ಅವರ ಗಮನ ಹರಿಯದಂತೆ ನೋಡಿಕೊಳ್ಳಲಾಗುತ್ತಿದೆ.

ಇವತ್ತು ದಲಿತರು ಮತ್ತು ಅಲ್ಪಸಂಖ್ಯಾತರು ತಮ್ಮ ಇತಿಹಾಸವನ್ನು ಅರಿತುಕೊಳ್ಳುವ ಅಗತ್ಯವಿದೆಯೇ ಹೊರತು ಅದರ ಬಲಿಪಶುಗಳಾಗಕೂಡದು. ಹಾಗೆಯೇ ನಮ್ಮ ಸಂವಿಧಾನ ನೀಡುವ ಎಲ್ಲಾ ಹಕ್ಕುಗಳನ್ನು ನ್ಯಾಯಯುತವಾಗಿ ಅವರೆಲ್ಲ ಪಡೆಯಬೇಕು. ಆದರೆ ಉಚಿತ ಶಿಕ್ಷಣ, ಆರೋಗ್ಯ ಸೇವೆ, ಉದ್ಯೋಗವನ್ನು ಬಯಸುವಾಗ ಮೇಲುಜಾತಿಯ ಬಡವರು, ಮಹಿಳೆಯರು, ನಿರುದ್ಯೋಗಿಗಳ ಬಗೆಗೂ ಕಾಳಜಿಯನ್ನು ಹೊಂದಿರಬೇಕು.

▶ ▶ ▶ 7ನೇ ಪುಟಕ್ಕೆ



ಯಡ್ಡಿ-ಶೆಟ್ಟರ್ ಗುದ್ದಾಟ!



ಯಡ್ಡಿ ನೇತೃತ್ವದ ಬಿಜೆಪಿ ಇಂದಿಹೆಂದೆಂಟುಗಳನ್ನೇನೋ ಬಲಿಗೆ ಹಾಕಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದಿದೆ. ಆದರೆ ಯಡ್ಡಿಯ ದಾರಿ ಮಾತ್ರ ಅಷ್ಟು ಸುಗಮವಾಗಿಲ್ಲ ಅನ್ನೋದು ಮಾತ್ರ ಸ್ಪಷ್ಟ. ಇಲ್ಲಿಯತನಕ ಪ್ರಧಾನವಾಗಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳೊಂದಿಗೆ ಗುದ್ದಾಡಿದ ಯಡ್ಡಿ ಈಗ ಪಕ್ಷದೊಳಗೇ ಇರುವ ದುಷ್ಮನ್‌ಗಳ ವಿರುದ್ಧ ಹೋರಾಡ ಬೇಕಾಗಿ ಬಂದಿದೆ. ಅಸಲಿಗೆ ಇದೇ ಯಡ್ಡಿ ನೇತೃತ್ವದ ಸರ್ಕಾರವನ್ನು ಒಳ ಗಿಂದೊಳಗೇ ದುರ್ಬಲಗೊಳಿಸಿ ದರೂ ಆಶ್ಚರ್ಯವಿಲ್ಲ.

ಒಂದು ರೀತಿಯಲ್ಲಿ ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರುವ ಯಡ್ಡಿ-ಅನಂತೂ ಬಣದ ತಿಕ್ಕಾಟದ ಮುಂದುವರೆದ ಭಾಗ. ಈಗ ಸೀನ್‌ನಲ್ಲಿ ಅನಂತೂ ಬದಲಿಗೆ ಅವರ ಶಿಷ್ಯ ಜಗದೀಶ್ ಶೆಟ್ಟರ್ ಇದ್ದಾರಷ್ಟೆ. ಶೆಟ್ಟರ್‌ಗೆ ಸಚಿವ ಸಂಪುಟದಲ್ಲಿ ಅವಕಾಶ ನಿರಾಕರಿಸುವ ಮೂಲಕ ಯಡ್ಡಿಯ ಕನಸಿನ ಸಿಎಮ್‌ಗಿರಿಗೆ ಮೊದಲಿನಿಂದಲೂ ಮುಳ್ಳಾಗಿ ನಿಂತಿದ್ದ ಅನಂತು ಮತ್ತವರ ಶಿಷ್ಯ ಶೆಟ್ಟರ್‌ಗೆ ಈ ಬಾರಿ ಯಡ್ಡಿ ಸರಿಯಾಗಿಯೇ ಒದೆ ಕೊಟ್ಟಿದ್ದಾರೆ.

ಈ ತಿಕ್ಕಾಟದ ಮುಂದುವರೆದ ಭಾಗವಾಗಿ ಅತ್ತ ಹುಬ್ಬಳ್ಳಿಯಲ್ಲಿ ಅನಂತೂ-ಶೆಟ್ಟರ್ ಸೇರಿಕೊಂಡು ತಮ್ಮ ಲ್ಯಾಂಡ್ ಮಾಫಿಯಾದ ದೊರೆ ಪ್ರದೀಪ್ ಶೆಟ್ಟರ್ ಮೂಲಕ ಯಡ್ಡಿಯ ಸೇಡಿನ ರಾಜಕಾರಣದ ವಿರುದ್ಧ ಗಲಾಟೆಯೆಬ್ಬಿಸಿದ್ದಾರೆ. ಬಸ್ ಸುಡುವುದು, ಪ್ರತಿಭಟನೆ ನಡೆಸುವುದು, ರಸ್ತಾರೋಕೋ ಮಾಡುವುದು - ಹೀಗೆ ಒಂದಾದಮೇಲೊಂದರಂತೆ ತಗಾದೆ ತೆಗೆದಿದ್ದಾರೆ.

ತಾನೊಬ್ಬನೇ ಲಿಂಗಾಯತ ಲೀಡರ್!

ಅಸಲಿಗೆ ಯಡ್ಡಿ ಶೆಟ್ಟರ್‌ಗೆ ಮಂತ್ರಿಗಿರಿ ಕೊಡದಿರುವುದಕ್ಕೆ ಆತ ಅನಂತೂ ಬಣ, ತನ್ನ ವಿರೋಧಿ ಅನ್ನೋದು ಒಂದೇ ಕಾರಣ ಅಲ್ಲ. ಅದಕ್ಕಿಂತಲೂ ಗಹನವಾದ ವಿಚಾರವೊಂದಿದೆ. ಅದೆಂದರೆ, ರಾಜ್ಯದಲ್ಲಿ ಅತ್ಯಂತ ನಿರ್ಣಾಯಕವಾಗಿರುವ ಲಿಂಗಾಯತ ಸಮುದಾಯಕ್ಕೆ ತಾನೊಬ್ಬನೇ ಲೀಡರ್ ಆಗಿ ಮುಂದುವರೆಯುವುದು.



ಈಶ್ವರಪ್ಪ

ಉತ್ತರ ಕರ್ನಾಟಕದ ಬಿಜೆಪಿ ಪಾಳೆಯದಲ್ಲಿ ಹಿರಿಯ ಲಿಂಗಾಯತ ಲೀಡರುಗಳೆಂದರೆ ಇಬ್ಬರು: ಒಬ್ಬರು ಜಗದೀಶ್ ಶೆಟ್ಟರ್, ಮತ್ತೊಬ್ಬರು ಬಸವನಗೌಡ ಪಾಟೀಲ್ ಯತ್ನಾಳ್. ಇವರಿಬ್ಬರೂ ಎಲ್ಲಿಯತನಕ ಸಕ್ರಿಯವಾಗಿರುತ್ತಾರೋ ಅಲ್ಲಿಯತನಕ ಲಿಂಗವಂತ ಯಡ್ಡಿಗೆ ಆಪತ್ತು ಇದ್ದೇ ಇದೆ. ಮೇಲಾಗಿ ಇವರಿಬ್ಬರೂ ತನ್ನ ರಾಜಕೀಯ ಶತ್ರುವಾದ ಅನಂತಕುಮಾರ್‌ನ ಶಿಷ್ಯರು. ಒಂದಲ್ಲಾ ಒಂದು ದಿನ ಕೇವಲ ಯಡಿಯೂರಪ್ಪ ಯಾಕೆ, ನಾವೂ ಲಿಂಗಾಯತ ನಾಯಕರೆ ಎಂದೇನಾದರೂ ಇವರು ಸೆಟೆದು ನಿಂತರೆ ಯಡ್ಡಿಯ ರಾಜಕೀಯ ಭವಿಷ್ಯದ ಮೇಲೆ ಕರಿನೆರಳು ಬಿದ್ದಂತೆಯೇ. ಹಾಗಾಗಿ ಇವರಿಬ್ಬರನ್ನೂ ಹೇಗಾದರೂ ಮಾಡಿ ಸದೆಬಡಿಯಬೇಕೆಂಬುದು ಮೊದಲಿನಿಂದಲೂ ಯಡ್ಡಿಗಿದ್ದ ಲೆಕ್ಕಾಚಾರ. ಅದಕ್ಕಾಗಿ ಮೊದಲಿನಿಂದಲೂ ಯಡ್ಡಿ ಅವರ ರಾಜಕೀಯ ಭವಿಷ್ಯಕ್ಕೆ ಇತಿಶ್ರೀ ಹಾಡಲು ತಂತ್ರಗಳನ್ನು ಹೆಣೆಯುತ್ತಲೇ ಬಂದಿದ್ದಾರೆ.

ಈ ಚುನಾವಣೆಯಲ್ಲಿ ಬಸವನಗೌಡ ಪಾಟೀಲ್ ಯತ್ನಾಳ್ ಸೋಲುಣ್ಣುವುದರೊಂದಿಗೆ ಯಡ್ಡಿಯ ಒಂದು ಕೆಲಸ ತನ್ನಿಂದ ತಾನೇ ಕೈಗೂಡಿತು. ಉಳಿದಿರುವುದು ಚುನಾವಣೆಯಲ್ಲಿ ಗೆದ್ದ ಜಗದೀಶ್ ಶೆಟ್ಟರ್ ಮಾತ್ರ. ಅವರಿಗೆ ಮಂತ್ರಿಗಿರಿಯನ್ನು ನಿರಾಕರಿಸುವ ಮೂಲಕ ಅವರನ್ನು ತುಳಿಯುವ ಪ್ರಯತ್ನಕ್ಕೆ ನಾಂದಿ ಹಾಡಿದ್ದಾರೆ.

ಮೊದಲನೇ ಬಾರಿ ಎಮ್ಮೆಲ್ಲೆಯಾದ ಶೋಭಾ ಕರಂದ್ಲಾಜೆಗೆ, ಬಸವರಾಜ್ ಬೊಮ್ಮಾಯಿಗೆ ಮಂತ್ರಿಗಿರಿ ದಯಪಾಲಿಸಲಾಗಿದೆ. ಆದರೆ, ಅನೇಕ ಬಾರಿ ಗೆದ್ದಿರುವ ಜಗದೀಶ್ ಶೆಟ್ಟರ್‌ಗೆ ಅದನ್ನು ನಿರಾಕರಿಸಲಾಗಿದೆ.

ಶೆಟ್ಟರ್‌ಗೆ ಬೊಮ್ಮಾಯಿ ಕೌಂಟರ್ ವೇಯಿಟ್!

ಶೆಟ್ಟರ್‌ಗೆ ಮಂತ್ರಿಗಿರಿ ನಿರಾಕರಿಸಿ ಉತ್ತರ ಕರ್ನಾಟಕದ ಇನ್ನೊಬ್ಬ ಲಿಂಗವಂತ ಲೀಡರ್ ಬಸವರಾಜ್ ಬೊಮ್ಮಾಯಿಗೆ ಅದನ್ನು ದಯಪಾಲಿಸುವಲ್ಲಿಯೂ ಕೂಡ ಯಡ್ಡಿ ತಂತ್ರಗಾರಿಕೆಯನ್ನು ಮೆರೆದಿದ್ದಾರೆ. ಬೊಮ್ಮಾಯಿ ಕೂಡ ಲಿಂಗವಂತನಾಗಿದ್ದರೂ ಅವನಿಂದ ಯಡ್ಡಿಗೆ ಆಪತ್ತಿಲ್ಲ, ಏಕೆಂದರೆ, ಆತ ಯಡ್ಡಿಗೆ ಸೆಡ್ಡು ಹೊಡೆಯುವಷ್ಟು ಪ್ರಬಲನಾಗಿಲ್ಲ, ಹಾಗಾಗಿ ಆತನಿಗೆ ಮಂತ್ರಿಗಿರಿ ಕೊಡುವುದರಿಂದ ಯಡ್ಡಿಗೇನೂ ನಷ್ಟವಿಲ್ಲ, ಬದಲಿಗೆ ಉತ್ತರ ಕರ್ನಾಟಕದ ಲಿಂಗಾಯತರಿಗೆ ಪ್ರಾತಿನಿಧ್ಯವನ್ನೂ ಕೊಟ್ಟಂತಾಗುತ್ತದೆಯಲ್ಲದೇ ಆ ಭಾಗದಲ್ಲಿ ತನಗೊಬ್ಬ ನಿಷ್ಠಾವಂತ ಚೇಲಾ ಸಿಕ್ಕಂತಾಗುತ್ತದೆ. ಅದೂಅಲ್ಲದೇ, ಆತನನ್ನು ಶೆಟ್ಟರ್‌ಗೆ ಕೌಂಟರ್ ವೇಯಿಟ್ ರೀತಿಯಲ್ಲಿ ಬಳಸಿಕೊಂಡು ಪರ್ಯಾಯ ಲೀಡರ್‌ನನ್ನಾಗಿ ಬೆಳೆಸಬಹುದು. ಹೇಗಿದೆ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವ ಯಡ್ಡಿಯ ತಂತ್ರಗಾರಿಕೆ?



ಅನಂತಕುಮಾರ್

ಈ ಕಾರಣಗಳನ್ನು ಬಿಟ್ಟರೆ ಶೆಟ್ಟರ್ ಮಂತ್ರಿ ಪದವಿಯನ್ನು ನಿರಾಕರಿಸಲು ಬೇರಾವುದೇ ಕಾರಣಗಳು ಇಲ್ಲ, ಏಕೆಂದರೆ, ಶೆಟ್ಟರ್ ಭಾರಿ ಒಳ್ಳೆಯ ಕೆಲಸಗಳ ಮೂಲಕ ದೊಡ್ಡ ಸಾಧನೆಯನ್ನು ಮಾಡಿಲ್ಲವಾದರೂ ದೊಡ್ಡ ದೊಡ್ಡ ಹಗರಣಗಳಲ್ಲಿ ಸಿಕ್ಕಿ ಹಾಕಿಕೊಂಡಿರುವ ಗುರುತರ ಆಪಾದನೆಗಳೂ ಅವರ ಮೇಲಿಲ್ಲ, ಅದೂ ಅಲ್ಲದೇ ಉತ್ತರ ಮತ್ತು ಮಧ್ಯ ಕರ್ನಾಟಕದಲ್ಲಿ ಬಿಜೆಪಿ ಗಟ್ಟಿಯಾಗಿ ತಳವೂರಲು ಶೆಟ್ಟರ್ ಕೊಡುಗೆಯೂ ಗಣನೀಯವಾಗಿದೆ. ಹೀಗಾಗಿ ಇದು ಯಡ್ಡಿಯ ಅಪ್ಪಟ ಸೇಡಿನ ರಾಜಕಾರಣವಲ್ಲದೇ ಮತ್ತೇನೂ ಅಲ್ಲ.

ಶೆಟ್ಟರ್ ಮೂಗಿಗೆ ಸ್ಪೀಕರ್ ಎಂಬ ತುಪ್ಪ!

ಈಗ ಮಂತ್ರಿಗಿರಿ ಕೈತಪ್ಪಿರುವುದರಿಂದ ಮುನಿಸಿಕೊಂಡಿರುವ ಶೆಟ್ಟರ್‌ನನ್ನು ಸಮಾಧಾನಗೊಳಿಸಲು ವಿಧಾನಸಭಾಧ್ಯಕ್ಷ ಸ್ಥಾನವನ್ನು ನೀಡಲು ಯಡ್ಡಿ ಮುಂದಾಗಿದ್ದಾರೆ. ಅದಕ್ಕೆ ಕೊಟ್ಟಿರುವ ಕಾರಣ ಎಂದರೆ ಜಗದೀಶ್ ಶೆಟ್ಟರ್ ಲಾಯರ್ ಆಗಿರುವುದರಿಂದ ಅವರಿಗೆ ಕಾನೂನುಗಳು ಚೆನ್ನಾಗಿ ತಿಳಿದಿವೆ, ಅನುಭವವೂ ಇದೆ. ಈ ಜವಾಬ್ದಾರಿಯನ್ನು ಅವರು ಚೆನ್ನಾಗಿ ನಿಭಾಯಿಸಬಲ್ಲರು ಎಂಬುದು. ಆದರೆ, ವಾಸ್ತವದಲ್ಲಿ ಈ ಜವಾಬ್ದಾರಿಯನ್ನು ಶೆಟ್ಟರ್‌ಗಿಂತ ಚೆನ್ನಾಗಿ ಸಿ.ಎಂ. ಉದಾಸಿ ನಿಭಾಯಿಸಬಲ್ಲರು. ಉದಾಸಿಗೆ ಮಂತ್ರಿಗಿರಿ ಕೊಡಲಾಗಿದೆ. ಶೆಟ್ಟರ್‌ಗೆ ಮೂಗಿಗೆ ತುಪ್ಪ ಸವರಿದಂತೆ ಸ್ಪೀಕರ್ ಸ್ಥಾನ ಕೊಡಲು ಯತ್ನಿಸಲಾಗುತ್ತಿದೆ.

ಯಾವಾಗ ಶೆಟ್ಟರ್ ಖಡಾಖಂಡಿತವಾಗಿ ಅದನ್ನು ನಿರಾಕರಿಸಿದರೋ ಆಗ ಸಂಘಪರಿವಾರದ ಕೇಶವಶಿಲ್ಪಕ್ಕೆ ದೌಡಾಯಿಸಿದ ಯಡ್ಡಿ ಬಂಡಾಯದ ಕಹಳೆ ಊದದಂತೆ, ಸ್ಪೀಕರ್ ಸ್ಥಾನ ಒಪ್ಪಿಕೊಳ್ಳುವಂತೆ ಶೆಟ್ಟರ್ ಮೇಲೆ ಒತ್ತಡ ತರಲು ಸಂಘಪರಿವಾರದ ದಿಗ್ಗಜರಿಗೆ ದುಂಬಾಲು ಬಿದ್ದಿದ್ದಾರೆ.




ಬಸವರಾಜ್ ಬೊಮ್ಮಾಯಿ

ಯಡ್ಡಿಯ ತಂತ್ರಗಾರಿಕೆ, ಸೇಡಿನ ರಾಜಕಾರಣವನ್ನು ಚೆನ್ನಾಗಿ ಅರಿತಿರುವ ಸಂಘಪರಿವಾರದ ನಾಯಕರೂ ಕೂಡ ಶೆಟ್ಟರ್ ಮನವೊಲಿಸಲು ಪ್ರಯತ್ನಿಸುತ್ತಿದ್ದಾರೆಯೇ ಹೊರತು ಯಡ್ಡಿಯ ಮನಪರಿವರ್ತನೆ ಮಾಡಲು ಕಿಂಚಿತ್ತೂ ಯೋಚಿಸುತ್ತಿಲ್ಲ, ಮೊದಲ ಬಾರಿಗೆ ಕರ್ನಾಟಕದಲ್ಲಿ ಅಧಿಕಾರಕ್ಕೇರುತ್ತಿರುವುದರಿಂದ ಪಕ್ಷದೊಳಗೆ ಅಸ್ಥಿರತೆ, ಬಂಡಾಯದ ಹೊಗೆಯಾಡದಂತೆ ನೋಡಿಕೊಂಡು ಸಿಕ್ಕಿರುವ ಅಧಿಕಾರವನ್ನು ಚೆನ್ನಾಗಿ ಬಳಸಿಕೊಂಡು ಸಂಘಪರಿವಾರದ ಸಿದ್ಧಾಂತವನ್ನು ರಾಜ್ಯದಲ್ಲಿ ಭದ್ರಪಡಿಸುವುದು ಅವರ ಉದ್ದೇಶ. ಈಗಾಗಲೇ ಯಡ್ಡಿ ಪಕ್ಷದ ಪರಮೋಚ್ಚ ನಾಯಕನಾಗಿ ಹೊರಹೊಮ್ಮಿರುವುದರಿಂದ ಆತನ ಮನಪರಿವರ್ತನೆಗೆ ಕೈಹಾಕುವುದೂ ಕೂಡ ಸಂಘಪರಿವಾರಕ್ಕೆ ಕಷ್ಟ. ಶೆಟ್ಟರ್ ಆ ಮಟ್ಟದ ಪ್ರಭಾವಿ ಲೀಡರ್ ಆಗಿ ಬೆಳೆಯದಿರುವುದರಿಂದ ಆತನನ್ನೇ ಮನವೊಲಿಸಿ ಬಂಡಾಯ ಶಮನ ಮಾಡುವ ಯೋಚನೆ ಸಂಘಪರಿವಾರಕ್ಕಿದೆ. ಹೀಗಾಗಿ, ಯಡ್ಡಿಯ ಹಠ ಮತ್ತು ಸಂಘಪರಿವಾರದ ಅವಕಾಶವಾದಿತನ ಎರಡೂ ಸೇರಿ ಶೆಟ್ಟರ್‌ನ್ನು ಬಲಿಪಶು ಮಾಡುತ್ತಿರುವುದಂತೂ ಸತ್ಯ.

ಯಡ್ಡಿ-ಶೆಟ್ಟರ್ ಗುದ್ದಾಟದ ಚರಿತ್ರೆ

ವಾಸ್ತವದಲ್ಲಿ ಯಡ್ಡಿ-ಶೆಟ್ಟರ್ ಪರಸ್ಪರ ಸೇಡಿನ ರಾಜಕಾರಣದ ಗುದ್ದಾಟ ನಿನ್ನೆ ಮೊನ್ನೆ ಹುಟ್ಟಿದ್ದಲ್ಲ. 2004ರ ಚುನಾವಣೆಯಲ್ಲಿ ಬಿಜೆಪಿ 79 ಸ್ಥಾನಗಳನ್ನು ಪಡೆಯುವ ಮೂಲಕ ರಾಜ್ಯದ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಮೇಲೆ ಮುಖ್ಯಮಂತ್ರಿ ಗಾದಿಯ ಮೇಲೆ ಯಡ್ಡಿ ಮತ್ತು ಅನಂತೂ ಇಬ್ಬರೂ ಕಣ್ಣಿಡುವುದರೊಂದಿಗೆ ಮೊದಲ ಬಾರಿಗೆ ರಾಜ್ಯ ಬಿಜೆಪಿಯಲ್ಲಿ ಅನಂತೂ ಮತ್ತು ಯಡ್ಡಿ ಎಂಬ ಎರಡು ಬಣಗಳು ಬಹಿರಂಗವಾಗಿ ಸೃಷ್ಟಿಯಾದವು.




ಜಗದೀಶ್ ಶೆಟ್ಟರ್

ಅನಂತೂ ಬಣದಲ್ಲಿ ರುವವರನ್ನು ರಾಜಕೀಯ ವಾಗಿ ತುಳಿಯಲು ಯಡ್ಡಿ ಕಸರತ್ತು ನಡೆಸುತ್ತಿದ್ದರೆ, ಯಡ್ಡಿ ಬಣವನ್ನು ಮುಗಿಸಲು ಅನಂತೂ ತಂತ್ರ ಹೆಣೆಯುತ್ತಿದ್ದ. ಶೆಟ್ಟರ್ ಅನಂತೂ ಬಣ ಸೇರಿದ ಮೇಲೆ ಸಹಜವಾಗಿ ಯಡ್ಡಿಯ ಕೋಪ ಆತನ ಮೇಲೆ ತಿರುಗಿತ್ತು, ಈ ತಿಕ್ಕಾಟದ ಇನ್ನೂ ಪಕ್ವಗೊಳ್ಳುವ ಮೊದಲೇ ಧಾರವಾಡ ಜಿಲ್ಲೆಯ ಕಲಘಟಗಿ ಕ್ಷೇತ್ರದಲ್ಲಿ ಯಡ್ಡಿ ಶಿಷ್ಯ ಸಿ.ಎಂ. ನಿಂಬಣ್ಣವರ್‌ನ್ನು ಸೋಲಿಸಲು ಶೆಟ್ಟರ್ ಮಾಡಿದ ಪ್ರಯತ್ನ ಅಷ್ಟಿಷ್ಟಲ್ಲ, ಅದಕ್ಕೆ ಪ್ರತಿಯಾಗಿ ಯಡ್ಡಿ ಕೋ-ಜಾ ಸರ್ಕಾರದಲ್ಲಿ ಒಂದು ವಾರದ ಮುಖ್ಯಮಂತ್ರಿಯಾದಾಗ ಶೆಟ್ಟರ್ ಮತ್ತು ಕೆ.ಎಸ್.ಈಶ್ವರಪ್ಪ ಇಬ್ಬರನ್ನೂ ಸಚಿವ ಸಂಪುಟದಿಂದ ಹೊರಗಿಟ್ಟಿದ್ದ. ಲಿಂಗಾಯತನೊಬ್ಬ ತನಗೆ ಪರ್ಯಾಯ ಲೀಡರ್ ಆಗಿ ಪಕ್ಷದಲ್ಲಿ ಬೆಳೆಯಬಾರದೆಂಬುದು ಶೆಟ್ಟರ್‌ಗೆ ಮಂತ್ರಿಗಿರಿ ತಪ್ಪಿಸಲು ಕಾರಣವಾಗಿದ್ದರೆ ತನ್ನ ತವರು ಜಿಲ್ಲೆ ಶಿವಮೊಗ್ಗದಲ್ಲೂ ತನಗೊಬ್ಬ ಪರ್ಯಾಯ ಲೀಡರ್ ಬೆಳೆಯಕೂಡದು ಎಂಬುದು ಈಶ್ವರಪ್ಪನನ್ನು ಮಂತ್ರಿಮಂಡಲದಿಂದ ಹೊರಗಿಡುವುದಕ್ಕೆ ಕಾರಣವಾಗಿತ್ತು, ಆಗ ಈಶ್ವರಪ್ಪನನ್ನು ಯಾವ ಕಾರಣಕ್ಕಾಗಿ ಹೊರಗಿಡಲಾಗಿತ್ತೋ ಈ ಬಾರಿ ಅದೇ ಕಾರಣಕ್ಕಾಗಿ ಡಿ.ಎಚ್. ಶಂಕರಮೂರ್ತಿಗೆ ಕೊಕ್ ನೀಡಲಾಗಿದೆ.



ಶೋಭಾ ಕರಂದ್ಲಾಜೆ

ಕಳೆದ ಬಾರಿ ತಮಗಾದ ಅನ್ಯಾಯದ ವಿರುದ್ಧ ಶೆಟ್ಟರ್-ಈಶ್ವರಪ್ಪ ಇಬ್ಬರೂ ಸೇರಿ ಅನಂತೂನೊಂದಿಗೆ ಸೇರಿಕೊಂಡು ಯಡ್ಡಿ ವಿರುದ್ಧ ಹೈಕಮಾಂಡಿಗೆ ದೂರು ಕೊಟ್ಟಿದ್ದರು. ಆದರೆ ಈ ಬಾರಿಯೂ ಇಬ್ಬರನ್ನೂ ಹೊರಗಿಟ್ಟರೆ ಪಕ್ಷದೊಳಗೇ, ಅದರಲ್ಲೂ ಹೈಕಮಾಂಡಿನಿಂದ ಭಾರಿ ಪ್ರತಿರೋಧ ಎದುರಿಸಬೇಕಾಗುತ್ತದೆಂಬುದನ್ನು ಅರಿತು ಈಶ್ವರಪ್ಪನನ್ನು ಸಂಪುಟದೊಳಗೆ ಸೇರಿಸಿಕೊಳ್ಳಲಾಗಿದೆ. ಶತ್ರುಗಳನ್ನು ಜಾಸ್ತಿ ಸೃಷ್ಟಿಸಿಕೊಂಡಷ್ಟೂ ಸಮಸ್ಯೆ ಜಾಸ್ತಿ, ಹಾಗಾಗಿ ಒಬ್ಬೊಬ್ಬರನ್ನೇ ಪ್ರತ್ಯೇಕಿಸಿ ಒಬ್ಬರಾದ ಮೇಲೊಬ್ಬರಂತೆ ಮುಗಿಸಿ ಹಾಕುವುದು ಯಡ್ಡಿಯ ರಾಜಕೀಯ ರಣತಂತ್ರ. ಇಂದು ಶೆಟ್ಟರ್ ಮತ್ತು ಶಂಕರಮೂರ್ತಿ, ನಾಳೆ ಈಶ್ವರಪ್ಪ.



ಚಂದ್ರಕಾಂತ್ ಬೆಲ್ಲದ

ಉತ್ತರ ಕರ್ನಾಟಕ ಯಡ್ಡಿ ಮಡಿಲಿಗೆ!

ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳಿಂದ ಸುಮಾರು 37 ಕ್ಯಾಂಡಿಡೇಟ್‌ಗಳನ್ನು ಗೆಲ್ಲಿಸುವ ಮೂಲಕ ಯಡ್ಡಿಗೆ ಮುಖ್ಯಮಂತ್ರಿ ಗಾದಿಯನ್ನು ತಪ್ಪಿಸುವ ತಂತ್ರವನ್ನು ಅನಂತೂ-ಶೆಟ್ಟರ್ ಹೆಣೆದಿದ್ದರು. ಆದರೆ, ಅದೆಲ್ಲಾ ಈಗ ಠುಸ್ ಎಂದಿದೆ.

ಬದಲಿಗೆ ಯಡ್ಡಿಯೇ ಈಗ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ತನ್ನ ಹಿಂಬಾಲಕರಿಗೆ ಮಂತ್ರಿಗಾದಿ ಒದಗಿಸುವ ಮೂಲಕ ಆಯಾ ಜಿಲ್ಲೆಗಳಲ್ಲಿ ಅನಂತೂ ಬಣವನ್ನು ಮೂಲೆಗುಂಪು ಮಾಡಿ ತನ್ನ ಹಿಡಿತ ಸಾಧಿಸಲು ಮುಂದಾಗಿದ್ದಾರೆ. ಬಾಗಲಕೋಟೆಯಲ್ಲಿ ಚರಂತಿಮಠ, ಹಾವೇರಿಯಲ್ಲಿ ಸಿ.ಎಂ.ಉದಾಸಿ, ಧಾರವಾಡದಲ್ಲಿ ಬಸವರಾಜ್ ಬೊಮ್ಮಾಯಿಗೆ - ಹೀಗೆ ಒಂದೊಂದು ಜಿಲ್ಲೆಯಲ್ಲಿ ಒಬ್ಬೊಬ್ಬ ಹಿಂಬಾಲಕನಿಗೆ ಮಂತ್ರಿ ಪದವಿ ದಯಪಾಲಿಸುವ ಮೂಲಕ ಆಯಾ ಜಿಲ್ಲೆಗಳ ಮೇಲೆ ತನ್ನ ಹಿಡಿತ ಸಾಧಿಸಲು ಯಡ್ಡಿ ಪ್ರಯತ್ನಿಸುತ್ತಿದ್ದಾರೆ.

ಶೆಟ್ಟರ್‌ಗೆ ಮಂತ್ರಿಗಿರಿ ನೀಡದಿರುವುದನ್ನು ಖಂಡತುಂಡವಾಗಿ ಪ್ರತಿಭಟಿಸುತ್ತಿರುವ ಹುಬ್ಬಳ್ಳಿ-ಧಾರವಾಡ ಕ್ಷೇತ್ರದ ಲೋಕಸಭಾ ಸದಸ್ಯ ಹಾಗೂ ಅನಂತಕುಮಾರ್ ಬಣದ ಇನ್ನೊಬ್ಬ ಪ್ರಮುಖ ಕುಳ ಪ್ರಹ್ಲಾದ್ ಜೋಶಿಗೂ ಟಾಂಗ್ ಕೊಡಲು ಯಡ್ಡಿ ತಂತ್ರ ಹೆಣೆಯುತ್ತಿದ್ದಾರೆ. ವಿಆರ್‌ಎಲ್ ಮಾಲಿಕ ವಿಜಯ ಸಂಕೇಶ್ವರನನ್ನು ಜೋಶಿಗೆ ಕೌಂಟರ್ ವೇಯಿಟ್ ಆಗಿ ಬೆಳೆಸುತ್ತಿದ್ದು ಇನ್ನೇನು ಸಮೀಪಿಸುತ್ತಿರುವ ಲೋಕಸಭಾ ಚುನಾವಣೆಯಲ್ಲಿ ಜೋಶಿಯ ಟಿಕೆಟ್ ಸಂಕೇಶ್ವರನ ಪಾಲಾಗುವ ನಿರೀಕ್ಷೆಯಿದೆ. ಆ ಮೂಲಕ ಇಡೀ ಧಾರವಾಡ ಜಿಲ್ಲೆಯಲ್ಲಿ ಅನಂತೂ ಬಣವನ್ನು ಮೂಲೆಗುಂಪು ಮಾಡಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಯೋಚನೆ, ಯೋಜನೆ ಯಡ್ಡಿಯದು.

ಯಡ್ಡಿಗೆ ಗಣಿ ರೆಡ್ಡಿ ಸಾಥ್!

ಯಡ್ಡಿಗಿರುವ ಇನ್ನೊಂದು ಪಾಸಿಟಿವ್ ಪಾಯಿಂಟ್ ಎಂದರೆ ಗಣಿರೆಡ್ಡಿಗಳ ಸಂಪೂರ್ಣ ಬೆಂಬಲ. ಅಸಲಿಗೆ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಅಷ್ಟೊಂದು ಸ್ಥಾನ ಗಳಿಸುವುದಕ್ಕೆ ಗಣಿರೆಡ್ಡಿಗಳು ಹರಿಸಿದ ದುಡ್ಡೇ ಕಾರಣ.

ಅದೂಅಲ್ಲದೇ ಬಿಜೆಪಿ ಸರ್ಕಾರ ರಚನೆಗೆ ಅವಶ್ಯವಿದ್ದ ಇಂಡಿಪೆಂಡೆಂಟ್ ಕ್ಯಾಂಡಿಡೇಟ್‌ಗಳನ್ನು ಯಾರ ಅನುಮತಿಯೂ ಇಲ್ಲದೇ ಖರೀದಿಸಿಕೊಂಡು ಬಂದಿರುವುದೂ ಇದೇ ರೆಡ್ಡಿಗಳು. ಹಾಗಾಗಿ ಒಟ್ಟಾರೆ ಬಿಜೆಪಿ ಅಧಿಕ ಸ್ಥಾನ ಪಡೆಯುವಲ್ಲಿ, ಸರ್ಕಾರ ರಚಿಸುವಲ್ಲಿ ರೆಡ್ಡಿಗಳ ಪಾತ್ರ ದೊಡ್ಡದಿದೆ. ಈ ಕಾರಣಕ್ಕಾಗಿಯೇ ಯಡ್ಡಿ ಗಣಿ ದೊರೆಗಳಾದ ಜನಾರ್ಧನ ರೆಡ್ಡಿ, ಕರುಣಾಕರ ರೆಡ್ಡಿ ಮತ್ತು ಶ್ರೀರಾಮುಲು ಅವರಿಗೆ ಮಂತ್ರಿಗಿರಿಯನ್ನು ಕೊಡುವ ಮೂಲಕ ಅವರ ವಿಶ್ವಾಸ ಗೆದ್ದಿದ್ದಾರೆ. ಸದ್ಯಕ್ಕೆ ಯಡ್ಡಿ ಮತ್ತು ರೆಡ್ಡಿಗಳ ಬಾಂಧವ್ಯ ಅನ್ಯೋನ್ಯವಾಗಿರುವುದರಿಂದ ಯಡ್ಡಿಗೆ ಆನೆ ಬಲ ಬಂದಂತಾಗಿದೆ.

ಅನಂತೂ ಎಂಬ ಮುಳುಗುತ್ತಿರುವ ದೋಣಿ!

ಈ ಎಲ್ಲಾ ಬೆಳವಣಿಗೆಗಳಿಂದ ಅನಂತೂ ಬಣ ನಿಸ್ತೇಜವಾಗಿರುವುದಂತೂ ಸತ್ಯ. ಏನಾದರೂ ಮಾಡಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕೆಂಬ ಪ್ರಯತ್ನದಲ್ಲಿ ಅನಂತೂ ನಿರತರಾಗಿದ್ದಾರೆ. ಶೆಟ್ಟರ್‌ಗೆ ಮಂತ್ರಿಗಿರಿ ನಿರಾಕರಿಸಿದ್ದನ್ನೇ ನೆಪ ಮಾಡಿಕೊಂಡು ತಮ್ಮ ಪಟಾಲಂಗಳಾದ ಅಶೋಕ ಕಾಟವೆ ಮತ್ತು ಚಂದ್ರಕಾಂತ್ ಬೆಲ್ಲದ್‌ರಂಥವರನ್ನು ಕಟ್ಟಿಕೊಂಡು ಕಂಡಕಂಡಲ್ಲಿ ಟಾಂ ಟಾಂ ಹೊಡೆಯುತ್ತಿದ್ದಾರೆ.

ಇನ್ನೊಂದೆಡೆ ಹುಬ್ಬಳ್ಳಿ-ಧಾರವಾಡ ವಕೀಲರ ಸಂಘದವರನ್ನೂ ಯಡ್ಡಿಯ ವಿರುದ್ಧ ಛೂಬಿಟ್ಟು ಕೋರ್ಟಿನ ಕಾರ್ಯಕಲಾಪವನ್ನು ಬಹಿಷ್ಕರಿಸುವಂತೆ ನೋಡಿಕೊಂಡಿದ್ದಾರೆ. ಈ ವಕೀಲರ ಸಂಘದವರೂ ಹಿಂದುಮುಂದು ನೋಡದೆ ಬಾರ್ ಅಸೋಸಿಯೇಶನ್ ಅನಂತೂ ಬಣದ ಅಂಗಸಂಸ್ಥೆಯೋ ಎಂಬಂತೆ ವರ್ತಿಸುತ್ತಿದ್ದಾರೆ. ಅನಂತೂ-ಯಡ್ಡಿ ಅಧಿಕಾರಕ್ಕಾಗಿ ಪರಸ್ಪರ ಕಿತ್ತಾಡುತ್ತಿದ್ದರೆ ಇಬ್ಬರನ್ನೂ ಖಂಡಿಸುವ ಬದಲು ಒಂದು ಬಣದ ಪಕ್ಷವಹಿಸಿ ಕೋರ್ಟು ಕಲಾಪಗಳನ್ನು ಧಿಕ್ಕರಿಸುವುದು ದೇಶದ ನ್ಯಾಯವ್ಯವಸ್ಥೆಗೆ ಮಾಡಿದ ಅಪಮಾನವಲ್ಲದೇ ಮತ್ತೇನೂ ಅಲ್ಲ.

ಇನ್ನೊಂದೆಡೆ ಸ್ಪೀಕರ್ ಸ್ಥಾನವನ್ನು ಒಪ್ಪಿಕೊಳ್ಳಕೂಡದೆಂದೂ, ಮಂತ್ರಿಗಿರಿ ಕೊಟ್ಟರೂ ಹಣಗಳಿಕೆಯ ಸ್ಥಾನಗಳಾದ ಗೃಹ, ಕಂದಾಯ, ಜಲಸಂಪನ್ಮೂಲ ಖಾತೆಗಳನ್ನೇ ಕೊಡಬೇಕೆಂದೂ ಶೆಟ್ಟರ್ ಹಠ ಹಿಡಿಯುವಂತೆ ಮಾಡುವಲ್ಲಿ ಅನಂತೂ ಯಶಸ್ವಿಯಾಗಿದ್ದಾರೆ.


ಒಟ್ಟಿನಲ್ಲಿ ಯಡ್ಡಿಯ ಅಲೆಯಲ್ಲಿ ಮುಳುಗುತ್ತಿರುವ ತನ್ನ ದೋಣಿಯನ್ನು ಉಳಿಸಿಕೊಳ್ಳಲು ಅನಂತೂ ಹೆಣಗಾಡುತ್ತಿರುವುದಂತೂ ಸತ್ಯ.

ಸಮಾಜಘಾತುಕ ಮಂತ್ರಿಗಳು

ಯಡಿಯೂರಪ್ಪ ಸಂಪುಟದಲ್ಲಿ ಈಗ ಕ್ಯಾಬಿನೆಟ್ ದರ್ಜೆ ಸಚಿವರಾಗಿರುವವರ ಪಟ್ಟಿಯತ್ತ ಒಮ್ಮೆ ಕಣ್ಣಾಡಿಸಿದರೆ ಗಾಬರಿಯಾಗುತ್ತದೆ.

ಈ ಪಟ್ಟಿಯಲ್ಲಿ ಇದುವರೆಗೂ ಯಾವುದೇ ಹಗರಣಗಳನ್ನು ಮಾಡಿಕೊಂಡಿರದ ಅರವಿಂದ ಲಿಂಬಾವಳಿ, ಕೃಷ್ಣ ಪಾಲೇಮಾರ್, ವಿ.ಎಸ್. ಆಚಾರ್ಯ, ರವೀಂದ್ರನಾಥ್, ಕಾಗೇರಿ, ಬಸು ಬೊಮ್ಮಾಯಿ, ಗೋವಿಂದ ಕಾರಜೋಳರಂಥವರೂ ಇದ್ದಾರೆ. ಜೊತೆಜೊತೆಯಾಗಿ ಜೈಲಿನಲ್ಲಿರಬೇಕಾದಷ್ಟು ಅವ್ಯವಹಾರ, ಭ್ರಷ್ಟಾಚಾರ, ಕ್ರಿಮಿನಲ್ ಕೆಲಸಗಳನ್ನು ನಡೆಸಿರುವ ಘಟಂಗರೂ ಸೇರಿಕೊಂಡಿದ್ದಾರೆ.

ತಮ್ಮದು ಕಾಂಗ್ರೆಸ್, ಜೆಡಿಎಸ್‌ಗಿಂತಾ ವಿಭಿನ್ನ ಪಕ್ಷ, "ಪಾರ್ಟಿ ವಿತ್ ಎ ಡಿಫರೆನ್ಸ್" ಎಂದೇ ಕೊಚ್ಚಿಕೊಳ್ಳುತ್ತಾ ಬಂದಿರುವ ಬಿಜೆಪಿಗಳಿಗೆ ಭ್ರಷ್ಟಾಚಾರ ಎಂದೂ ಆಳುಕಿನ ವಿಚಾರವಾಗಲಿಲ್ಲ ಎಂಬುದಕ್ಕೆ ಈಗ ಸಚಿವಗಿರಿ ಗಿಟ್ಟಿಸಿಕೊಂಡಿರುವವರ ಕಳಂಕಭರಿತ ಚರಿತ್ರೆಯೇ ಸಾಕ್ಷಿಯಾಗಿದೆ.



ಫೋರ್ಜರಿ ಪ್ರವೀಣ ಕೃಷ್ಣಯ್ಯ ಶೆಟ್ಟಿ

ಮಾಲೂರಿನಿಂದ 2ನೇ ಬಾರಿಗೆ ಶಾಸಕನಾಗಿ ಈ ಕೃಷ್ಣಯ್ಯ ಶೆಟ್ಟಿ ಗೆಲ್ಲಲು ಕಾಂಗ್ರೆಸ್ ನಾಯಕ ಧರಂಸಿಂಗರೇ ನೇರ ಹೊಣೆ. ಈಗ್ಗೆ 10-15 ವರ್ಷಗಳ ಹಿಂದೆ ತನ್ನ ಮನೆಯಲ್ಲೇ ಕಳ್ಳತನ ಮಾಡಿ ಬೆಂಗಳೂರಿನಿಂದ ಓಡಿಬಂದಿದ್ದ ಕೃಷ್ಣಯ್ಯ ಶೆಟ್ಟಿ ಈಗ 500 ಕೋಟಿ ಬೆಲೆಬಾಳುವ ಕುಳವಾಗಿದ್ದಾನೆ.

ರಿಯಲ್ ಎಸ್ಟೇಟ್ ವಂಚನೆ ಹಾಗೂ ಫೋರ್ಜರಿ ಪ್ರಾವೀಣ್ಯತೆಯಿಂದ ಮಾಡಿರುವ ಆಸ್ತಿ ಇದು.

ಬೆಂಗಳೂರಿನ ಹೆಗಡೆನಗರ, ದೇವನಹಳ್ಳಿ ಬಳಿ ಹಾಗೂ ಹೊಸೂರು ರಸ್ತೆ ಆಸುಪಾಸುಗಳಲ್ಲಿ ಈ ಕೃಷ್ಣಯ್ಯ ಶೆಟ್ಟಿ ಬಾಲಾಜಿ ಎಂಟರ್‌ಪ್ರೈಸಸ್‌ನ ಹೆಸರಲ್ಲಿ ಸಾವಿರಾರು ಅಮಾಯಕರಿಗೆ ಟೋಪಿ ಹಾಕಿ, ಹಣ ಬಾಚಿಕೊಂಡಿದ್ದಾನೆ. ಬೇರೆ ಯಾರದ್ದೋ ಜಮೀನು ತೋರಿಸಿ ತನ್ನದೆಂದು ಮಾರಿಕೊಂಡಿರುವುದು, ಒಂದೇ ಸೈಟನ್ನು ನಾಲ್ಕಾರು ಜನರಿಗೆ ಸೇಲ್ ಮಾಡುವುದು ಇವನ ನಿತ್ಯ ಕಾಯಕ. ಗಾಂಧಿನಗರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿ ಈ ಶೆಟ್ಟಿ ಕೈ ಚಳಕದಿಂದ ಹತ್ತಾರು ಕೋಟಿ ರೂಪಾಯಿಗಳನ್ನು ಮನೆ ಸಾಲ, ಸೈಟ್ ಖರೀದಿ ಸಾಲದ ರೂಪದಲ್ಲಿ ದುರುಪಯೋಗ ಮಾಡಿಕೊಳ್ಳಲಾಗಿದೆ. ಕೃಷ್ಣಯ್ಯ ಶೆಟ್ಟಿ ಬಿಜೆಪಿಯ ಬಹುತೇಕ ಭ್ರಷ್ಟ ನಾಯಕರ ಬೇನಾಮಿ ಹೂಡಿಕೆದಾರನಾಗಿದ್ದಾನೆ.

ಸರಿಯಾದ ರೀತಿಯಲ್ಲಿ ತನಿಖೆ ನಡೆದರೆ ಇವನು ಜೈಲು ಪಾಲಾಗುವುದರಲ್ಲಿ ಸಂಶಯವೇ ಇಲ್ಲ.

ಜನಾರ್ದನ ರೆಡ್ಡಿ-ಕರ್ನಾಟಕದ ಶನಿ




ಹಾಲಿ ಬಿಜೆಪಿ ಸರ್ಕಾರದ ಕಿಂಗ್‌ಪಿನ್‌ನಂತಿರುವ ಜನಾರ್ದನ್ ರೆಡ್ಡಿ ಅತ್ಯಂತ ಅಪಾಯಕಾರಿ ಮನುಷ್ಯ. ಕೆಲವೇ ವರ್ಷಗಳ ಹಿಂದೆ ಬಳ್ಳಾರಿಯಲ್ಲಿ 'ಇನ್ನೋಬೆಲ್ ಇಂಡಿಯಾ' ಎಂಬ ಚೀಟಿಂಗ್ ದಂಧೆ ನಡೆಸುತ್ತಾ ಅನ್ನ ಸಂಪಾದಿಸಿಕೊಂಡಿದ್ದ ಈ ಆಂಧ್ರದ ರೆಡ್ಡಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಒಂದು ಸರ್ಕಾರವನ್ನೇ ಉಳಿಸುವ ಇಲ್ಲಾ ಬೀಳಿಸುವ, ತಾಕತ್ತು ಗಳಿಸಿಕೊಳ್ಳುವ ಮಟ್ಟಿಗೆ ಬೆಳೆದಿದ್ದಾನೆ.

ದುಡ್ಡು-ಅದರಲ್ಲೂ ಅಕ್ರಮ, ಕಳ್ಳ ಅದಿರು ದಂಧೆಯ ಸಾವಿರಾರು ಕೋಟಿ ಹಣವೇ ಇವನ ಅಸಲಿ ಶಕ್ತಿ. ಚಿಲ್ಲರೆ ಪುಢಾರಿ ಲೆವೆಲ್ ವ್ಯಕ್ತಿತ್ವದ ರೆಡ್ಡಿ ಜನನಾಯಕನೂ ಅಲ್ಲ, ಅಂಥ ಪ್ರಬುದ್ಧತೆಯೂ ಇವನಿಗಿಲ್ಲ. ಪಕ್ಕಾ ತೆಲುಗು ಸಿನಿಮಾ ವಿಲನ್‌ಗಳಂತೆ ವರ್ತಿಸುವ ಈ ಜನಾರ್ದನ್ ರೆಡ್ಡಿ, ಕರುಣಾಕರ ರೆಡ್ಡಿ, ಶ್ರೀರಾಮುಲು ಗ್ಯಾಂಗ್ ಬಳ್ಳಾರಿ ಜನರಿಗಾಗಲೀ, ಕರ್ನಾಟಕಕ್ಕಾಗಲೀ ಒಳಿತು ಮಾಡಲಾರರು.

ಈ ರೆಡ್ಡಿ ಈಗಾಗಲೇ ತನ್ನ ಒಬಳಾಪುರಂ ಮೈನ್ಸ್ ಕಂಪನಿ ಮೂಲಕ ಕರ್ನಾಟಕದ ಗಡಿಯನ್ನೇ ಬದಲಿಸಿ ರಾಜ್ಯದ ಮೂರು ಹಳ್ಳಿಗಳನ್ನು ನೆರೆಯ ಆಂಧ್ರದ್ದೆಂದು ಕ್ಯಾತೆ ತೆಗೆದಿದ್ದಾನೆ. 20 ವರ್ಷದ ಹಿಂದೆ ತಿನ್ನಲೂ ಗತಿ ಇರದಿದ್ದವನು ಈಗ ಆರು ಸಾವಿರ ಕೋಟಿಯ ಉಕ್ಕು ಕಾರ್ಖಾನೆ ನಿರ್ಮಿಸಲು ಹೊರಟಿದ್ದಾನೆ.

ಇದಿಷ್ಟೂ ಹಣ ಕರ್ನಾಟಕದ ಸಂಪತ್ತು ಎಂಬುದನ್ನು ನಾವು ನೆನಪಿಡಬೇಕು. ಯಡ್ಡಿ ಸಂಪುಟದಲ್ಲಿ ಈಗ ಜನಾರ್ದನ ರೆಡ್ಡಿ, ಕರುಣಾಕರ ರೆಡ್ಡಿ ಹಾಗೂ ವಾಚ್‌ಮ್ಯಾನ್ ಶ್ರೀರಾಮುಲು ಒಟ್ಟಿಗೆ ಕ್ಯಾಬಿನೆಟ್ ಮಂತ್ರಿಗಳಾಗಿ ವಕ್ಕರಿಸಿಕೊಳ್ಳುತ್ತಿರುವುದಂತೂ ನಿಜಕ್ಕೂ ಆತಂಕಕಾರಿಯಾಗಿದೆ.



ಆರ್. ಅಶೋಕ್-ಭೂಗಳ್ಳರ ನಾಯಕ

ಇಡೀ ಬೆಂಗಳೂರಿನ ರಿಯಲ್ ಎಸ್ಟೇಟ್, ಅಕ್ರಮ ದಂಧೆಯ ಕ್ಯಾಪ್ಟನ್‌ನಂತಿರುವ ಅಶೋಕ್ ಉತ್ತರಹಳ್ಳಿ ವ್ಯಾಪ್ತಿಯ ತುರಳ್ಳಿ ಅರಣ್ಯ ಪ್ರದೇಶದಲ್ಲಿ ನುಂಗಿರುವ ಜಮೀನಿನ ವಿವಾದದಿಂದ ಪಾರಾಗಲಾರ. ಕಾಂಗ್ರೆಸ್ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಅಷ್ಟೇ. ನೂರಾರು ಕೋಟಿ ಬೆಲೆಬಾಳುವ ಸರ್ಕಾರಿ ಅರಣ್ಯ ಪ್ರದೇಶವನ್ನು ನುಂಗಿರುವ ಅಶೋಕ್ ಮತ್ತವನ ಭಂಟರು ಬಿಜೆಪಿಯ ಅಯೋಗ್ಯತೆ ಹಾಗೂ ಭ್ರಷ್ಟ ಮುಖಕ್ಕೆ ಸಾಕ್ಷಿಯಾಗಿದ್ದಾರೆ. ಅಮಾಯಕ ರೈತರ ಜಮೀನುಗಳನ್ನು ನೋಟಿಫೈ ಮಾಡಿಸಿ ಬಲಾಢ್ಯರಿಗೆ ಕೊಡಿಸುವುದು ಅಥವಾ ಕೈತುಂಬಾ ಲಂಚ ಕಿತ್ತು ಡಿನೋಟಿಫೈ ಮಾಡಿಸುವುದೇ ಇವನ ನಿತ್ಯ ದಂಧೆ. ಮೊದಮೊದಲು ಅನಂತ್‌ಕುಮಾರ್ ಶಿಷ್ಯನಾಗಿದ್ದ ಅಶೋಕ್ ಯಾವಾಗ ಬಿಜೆಪಿಯಲ್ಲಿ ಯಡ್ಡಿ ಕೈ ಮೇಲಾಯಿತೋ ಆಗ ಶಿಬಿರಾಂತರ ಮಾಡಿ ಈಗ ಯಡ್ಡಿ ಬಣದಲ್ಲಿ ಗುರುತಿಸಿಕೊಂಡಿದ್ದಾನೆ.

ಮುಂದಿನ ದಿನಗಳಲ್ಲಿ ಬಿಜೆಪಿಯ ಮಾನಮರ್ಯಾದೆಗಳು ಹರಾಜಾಗುವಾಗ ಅದರಲ್ಲಿ ಅಶೋಕ್ ಕೊಡುಗೆಯೂ ಸಾಕಷ್ಟಿರುತ್ತದೆ ಎಂದು ಈಗಲೇ ಹೇಳಿಬಿಡಬಹುದು.

ರಕ್ಕಸ ರಾಮುಲು



ಸಾರ್ವಜನಿಕ ಜೀವನದ ಶಿಷ್ಟಾಚಾರ ನಯನಾಜೂಕುಗಳು ಒಂದೂ ಗೊತ್ತಿರದ-ಪ್ರಜಾಪ್ರಭುತ್ವದ ಗಂಧ ಗಾಳಿಯೂ ಇರದ ಬಳ್ಳಾರಿಯ ಶ್ರೀರಾಮುಲು ತರದವರೂ ಕ್ಯಾಬಿನೆಟ್ ಮಂತ್ರಿಯಾಗುತ್ತಾರೆಂದರೆ ಅದು ಬಿಜೆಪಿಯ ಕಳಪೆ ರಾಜಕಾರಣದ ಸಂಕೇತ ಮಾತ್ರ.

ಎಲೆಕ್ಷನ್ ಅಂದರೆ ಗೂಂಡಾಗಿರಿ, ಓಟು ಅಂದರೆ ನೋಟು ಕೊಟ್ಟು ಖರೀದಿಸುವ ವಸ್ತು ಎಂಬುದಷ್ಟೆ ರಾಮುಲುಗೆ ಗೊತ್ತಿರುವ ಡೆಮಾಕ್ರಸಿ. ಈಗ ಬಳ್ಳಾರಿ ಗಣಿ ಲಾಬಿಯ ಗುಲಾಮನಾಗಿರುವ ಯಡಿಯೂರಪ್ಪ ರಾಮುಲು ತರಹದ ಅವಿವೇಕಿಯನ್ನು ಮಂತ್ರಿಯನ್ನಾಗಿಸಿ ಪಕ್ಕದಲ್ಲಿ ಕೂರಿಸಿಕೊಳ್ಳಬೇಕಾಗಿ ಬಂದಿದೆ. ಬಿಜೆಪಿಗಳಲ್ಲಿ ಯಾರಾದರೂ ಸೂಕ್ಷ್ಮಜ್ಞರಿದ್ದರೆ, ಮುಂದಿನ ದಿನಗಳಲ್ಲಿ ರಾಮುಲು ಸೃಷ್ಟಿಸಬಹುದಾದ ಯಡವಟ್ಟುಗಳನ್ನು ನಿಯಂತ್ರಿಸಬೇಕೆಂದರೆ ಈತನಿಗೆ ಒಂದು ತರಬೇತಿ ಕಾರ್ಯಕ್ರಮ ನಡೆಸುವುದು ಉತ್ತಮ.

ಸಾರ್ವಜನಿಕರೊಂದಿಗೆ, ಅಧಿಕಾರಿಗಳೊಂದಿಗೆ ಹಾಗೂ ಮೀಡಿಯಾದೊಂದಿಗೆ ವ್ಯವಹರಿಸುವಾಗ ಯಾವ ಭಾಷೆ ಬಳಸಬೇಕು, ಕೈ-ಬಾಯಿ ಹಾವ-ಭಾವ ಹೇಗಿರಬೇಕೆಂದು ರಾಮುಲುಗೆ ಈಗಲೇ ಹೇಳಿಕೊಡದೆ ಹೋದರೆ ಬಿಜೆಪಿಗೆ ಅವಮಾನ ಖಚಿತ.

ಏಕೆಂದರೆ ರಾಮುಲು ತೆಲುಗು ಸಿನಿಮಾ ವಿಲನ್ ಪಾತ್ರದ ರೀತಿ ಇದ್ದಾನೆ.

ಗೂಳಿಹಟ್ಟಿ ಶೇಖರ್-ನಕಲಿ ಮಾರ್ಕ್ಸ್‌ಕಾರ್ಡ್ ದಂಧೆ ವೀರ



ಹೊಸದುರ್ಗ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರನಾಗಿ ಗೆದ್ದು ಬಂದಿರುವ ಗೂಳಿಹಟ್ಟಿ ಶೇಖರ್ ಹಾಲಿ ಬಿಜೆಪಿ ಸರ್ಕಾರದ ನಿರ್ಣಾಯಕ ಬೆಂಬಲಿಗರಲ್ಲಿ ಒಬ್ಬ. ಆ ಕಾರಣಕ್ಕೇ ಈಗ ಕ್ಯಾಬಿನೆಟ್ ದರ್ಜೆ ಮಂತ್ರಿಗಿರಿಯನ್ನು ಹೊಡೆದುಕೊಂಡಿದ್ದಾನೆ.

ಈ ಗೂಳಿಹಟ್ಟಿ ಬಗ್ಗೆ ಹೊಸದುರ್ಗ ತಾಲ್ಲೂಕಿನ ಜನರಿಗೆ ಬಿಟ್ಟು ಬೇರೆ ಯಾರಿಗೂ ಏನೂ ಗೊತ್ತೇ ಇರಲಿಲ್ಲ. ಹಾಗೆ ಗೊತ್ತಾಗಲು ಈತ ಸಾರ್ವಜನಿಕ ಜೀವನದಲ್ಲಿ ಇರಲೂ ಇಲ್ಲ. ಈಗ ಎಲೆಕ್ಷನ್ ಗೆದ್ದ ಮೇಲೆ ಶೇಖರ್ ಹೇಳುತ್ತಿರುವುದೇನೆಂದರೆ 'ನಾನು 10 ವರ್ಷದ ಹಿಂದೆ ಊರು ಬಿಟ್ಟು ಬೆಂಗಳೂರಿಗೆ ಬಂದೆ, ಅಲ್ಲಿ ಏನೇನೋ ಕೆಲಸ ಮಾಡಿ, ಕೊನೆಗೆ ಗ್ರಾನೈಟ್ ವ್ಯಾಪಾರಕ್ಕಿಳಿದು ಹಣ ಮಾಡಿಕೊಂಡು ಈಗ ರಾಜಕೀಯಕ್ಕೆ ಬಂದು ಗೆದ್ದಿದ್ದೇನೆ' ಅಂತ.

ಆದರೆ ಈ ಗೂಳಿಯ ಅಸಲಿ ವ್ಯಾಪಾರ ಏನಾಗಿತ್ತು ಗೊತ್ತೆ?

ನಕಲಿ ಮಾರ್ಕ್ಸ್‌ಕಾರ್ಡ್ ದಂಧೆ!


ಬೆಂಗಳೂರಿನಲ್ಲಿ ಈಗಲೂ ನಿಮಗೆ ಡಿಗ್ರಿ, ಇಂಜಿನಿಯರಿಂಗ್, ಡಿಪ್ಲೊಮಾ ಸರ್ಟಿಫಿಕೇಟ್‌ಗಳನ್ನು ಸೃಷ್ಟಿಸಿಕೊಡುವ ದಗಾಕೋರರಿದ್ದಾರೆ. ಮುಖ್ಯವಾಗಿ ಉತ್ತರ ಭಾರತದವರೇ ಇವರ ಗಿರಾಕಿಗಳು. ಕೆಲ ದಂಧೆಕೋರರಂತೂ ಗಲ್ಫ್ ದೇಶಗಳಲ್ಲೂ ಈ ನಕಲಿ ಮಾರ್ಕ್ಸ್‌ಕಾರ್ಡ್‌ಗಳನ್ನು ಮಾರುತ್ತಾ ಕೋಟ್ಯಂತರ ರೂಪಾಯಿ ಕಮಾಯಿಸುತ್ತಿದ್ದಾರೆ. ಶಿಕ್ಷಕರ ಕ್ಷೇತ್ರದಿಂದ ಗೆದ್ದು ಎಂಎಲ್‌ಸಿಯಾದ ಶೈಕ್ಷಣಿಕ ಪಢಾರಿಯೊಬ್ಬನ ಹೆಸರೂ ಆಗಿಂದಾಗ್ಗೆ ಈ ದಂಧೆಯಲ್ಲಿ ಕೇಳಿಬರುತ್ತಿರುತ್ತದೆ.

ಗೂಳಿಹಟ್ಟಿ ಶೇಖರ್ ಈ ದಂಧೆಯ ಕಿಂಗ್‌ಪಿನ್‌ಗಳಲ್ಲಿ ಒಬ್ಬನಾಗಿದ್ದ.

ತಮಾಷೆಯೆಂದರೆ ಬೆಂಗಳೂರಿನ ಕೆಲ ಬಿಜೆಪಿ ಯುವ ನಾಯಕರೇ ಗೂಳಿಹಟ್ಟಿ ಶೇಖರ್‌ನ ಜಾತಕವನ್ನು ಹೇಳಿಕೊಂಡು ಗೇಲಿ ಮಾಡುತ್ತಿದ್ದಾರೆ. ಕೇವಲ 10 ವರ್ಷಗಳ ಹಿಂದೆ ಈ ಗೂಳಿ ತಿನ್ನಲು ಏನೂ ಸಿಗದೆ ಅವರಿವರ ಹತ್ತಿರ 50-100 ರೂ. ಭಿಕ್ಷೆ ಕೇಳಿ ಜೀವನ ನಡೆಸುತ್ತಿತ್ತು. ಆಮೇಲೆ ನಕಲಿ ಮಾರ್ಕ್ಸ್‌ಕಾರ್ಡ್ ರ್‍ಯಾಕೆಟ್ ಸೇರಿ ಮೊದಮೊದಲು ಗಿರಾಕಿ ಹುಡುಕಿ ತರುವ ಕೆಲಸ ಮಾಡಿಕೊಂಡು ಕೊನೆಗೆ ತಾನೂ ದಂಧೆಯ ಪಾಲುದಾರನಾಯಿತು. ಕೈಲಿ ಸಾಕಷ್ಟು ಹಣ ಸೇರಿದ ನಂತರ ಮತ್ತೆ ಹಟ್ಟಿಯತ್ತ ಮುಖ ಚಾಚಿದ ಗೂಳಿ ತನ್ನ ಹಡಬೆ ದುಡ್ಡನ್ನೇ ಊರಲ್ಲಿ ದಾನ ಧರ್ಮ ಮಾಡುತ್ತಾ ಇಮೇಜ್ ಬೆಳೆಸಿಕೊಂಡು ಈಗ ಶಾಸಕನಾಗಿದೆ, ಮಂತ್ರಿಗಿರಿಯನ್ನು ಲಪಟಾಯಿಸಿದೆ. ಕರ್ನಾಟಕದ ಜನತೆಯ ಪರವಾಗಿ ಯಡಿಯೂರಪ್ಪ ಹಾಗೂ RSS ಮುಖಂಡರಿಗೆ ನಮ್ಮ ಮನವಿ ಏನೆಂದರೆ...

ಈ ಗೂಳಿಹಟ್ಟಿಗೆ ಬೇರೆ ಯಾವ ಖಾತೆಯನ್ನಾದರೂ ಕೊಡಿ ಹಾಳಾಗಿ ಹೋಗಲಿ, ಆದರೆ ಅಪ್ಪಿತಪ್ಪಿಯೂ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಖಾತೆ ಮಾತ್ರ ಕೊಡಬೇಡಿ.

ಯಾಕೆಂದರೆ ನಕಲಿ ಮಾರ್ಕ್ಸ್‌ಕಾರ್ಡ್ ದಂಧೆಯಲ್ಲಿದ್ದವನನ್ನು ಶಿಕ್ಷಣ ಮಂತ್ರಿ ಮಾಡಿಬಿಟ್ಟರೆ ಅದು ತೀರಾ ಆಭಾಸ, ಅಸಹ್ಯವಾಗಿಬಿಡುತ್ತೆ.



ವಾಚಕರವಾಣಿಗೆ ಪತ್ರ ಬರೆದು ಮಂತ್ರಿಯಾದ ಖಾನ್

ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಲು ಒಂದೆಡೆ ನಿರಂತರ ಬೀದಿಜಗಳ ನಡೆಯುತ್ತಿದ್ದರೆ ಮತ್ತೊಂದೆಡೆ ಮುಮ್ತಾಜ್ ಅಲಿ ಖಾನ್ ಎಂಬುವವರಿಗೆ ತಾನೇ ತಾನಾಗಿ ಕ್ಯಾಬಿನೆಟ್ ದರ್ಜೆ ಮಂತ್ರಿಗಿರಿ ಸಿಕ್ಕಿದೆ.

ವಿಜಯ ಕರ್ನಾಟಕ, ಪ್ರಜಾವಾಣಿಯ ವಾಚಕರ ವಾಣಿ ಕಾಲಂನಲ್ಲಿ ರೆಗ್ಯುಲರ್ ಆಗಿ ಚೆಡ್ಡಿ ಪತ್ರಗಳನ್ನು ಬರೆಯುತ್ತಿದ್ದ ಮುಮ್ತಾಜ್ ಅಲಿ ಖಾನ್ ಏನೇನೂ ಶ್ರಮವಿಲ್ಲದೆ ಈ ಛಾನ್ಸ್ ಹೊಡೆದುಕೊಂಡಿದ್ದಾರೆ.

"ನಾನು ಮುಖ್ಯಮಂತ್ರಿಯಾದರೆ ನನ್ನ ಎಡಬಲದಲ್ಲಿ ಒಬ್ಬೊಬ್ಬ ಮುಸ್ಲಿಂ-ದಲಿತ ಸಚಿವರನ್ನು ಇಟ್ಟುಕೊಂಡೇ ಪ್ರಮಾಣ ವಚನ ಸ್ವೀಕರಿಸುತ್ತೇನೆ" ಅಂದಿದ್ದರು ಯಡ್ಡಿ.

ಇದು ಎಲೆಕ್ಷನ್‌ಗೂ ಮೊದಲು ಯಡ್ಡಿ ಹೇಳಿದ್ದ ಮಾತು. ಆದರೆ ಈ ಬಿಜೆಪಿಗಳಿಗೆ ಮುಸ್ಲಿಂರ ಬಗ್ಗೆ ಎಂಥಾ ದ್ವೇಷವಿದೆಯೆಂದರೆ ತಾವು ಸ್ಪರ್ಧಿಸಿದ್ದ 224 ಕ್ಷೇತ್ರಗಳಲ್ಲಿ ಒಂದು ಕಡೆಯೂ ಮುಸ್ಲಿಂರಿಗೆ ಟಿಕೆಟು ಕೊಟ್ಟಿರಲಿಲ್ಲ. ಆದರೆ ಚುನಾವಣೆ ನಡೆದು ಫಲಿತಾಂಶ ಬಂದೇಟಿಗೆ ಯಡ್ಡಿಗೆ ತಾನು ಸಾರ್ವಜನಿಕವಾಗಿ ಹೇಳಿದ್ದ ಮಾತು ಈಡೇರಿಸಬೇಕಿತ್ತಲ್ಲ. ಆಗ ಕೇಶವ ಶಿಲ್ಪದಲ್ಲಿ ನಾಯಕರು ಸಭೆ ನಡೆಸಿ ಈ ಪತ್ರ ಪ್ರವೀಣ ಮುಮ್ತಾಜ್‌ರನ್ನು ಈ ಹೌದಪ್ಪ ಹುದ್ದೆಗೆ ಆಯ್ಕೆ ಮಾಡಿಕೊಂಡರು.

ಮುಮ್ತಾಜ್ 2004ರಲ್ಲಿ ಜಯಮಹಲ್ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದ ಆಸಾಮಿ. ಹತ್ತಿಪ್ಪತ್ತು ಪುಸ್ತಕ ಬರೆದಿದ್ದನಾದರೂ ಯಾವುದೂ ಕೂಡ ಅಕಾಡೆಮಿಕ್ ವಲಯದ ಅಥವಾ ಕರ್ನಾಟಕದ ವಿದ್ವಾಂಸರ ಗಮನ ಸೆಳೆದಿಲ್ಲ.

ಹಾಗೆ ನೋಡಿದರೆ ಬಿಜೆಪಿಯೊಳಗೆ ರಾಷ್ಟ್ರಮಟ್ಟದಲ್ಲಿ ಈ ಮುಮ್ತಾಜ್ ತರಹದ ಒಂದಿಬ್ಬರು ಚೆಡ್ಡಿ ಮುಸಲ್ಮಾನರಿದ್ದಾರೆ. ಅಬ್ಬಾಸ್ ಅಲಿ ನಕ್ವಿ ಅವರಲೊಬ್ಬ. ಮುಸ್ಲಿಮರಿಗೆ ಪುಗಸಟ್ಟೆ ದೇಶಭಕ್ತಿ ಬೋಧಿಸುವುದು, ಖುರಾನ್ ಮದ್ರಾಸಗಳ ವಿಚಾರ ಬಂದಾಗ ಸಂಘ ಪರಿವಾರದ ನಿಲುವುಗಳನ್ನೇ ಪ್ರತಿಪಾದಿಸುತ್ತಾ ಬಡಬಡಿಸುವುದೇ ಇಂಥವರ ನಿತ್ಯಕಾಯಕ.

ಮುಮ್ತಾಜ್ ಕರ್ನಾಟಕ ಬಿಜೆಪಿಯ ಭಾಗವಾಗದಿದ್ದರೂ ಒಟ್ಟಾರೆ ಚೆಡ್ಡಿ ಪರಿವಾರದ ವಲಯದಲ್ಲಿದ್ದಾತ. ಈತನ ಬಗ್ಗೆ ನಾಡಿನ ಯಾವ ಪ್ರಜ್ಞಾವಂತ ಮುಸಲ್ಮಾನರಿಗೂ ಮೆಚ್ಚುಗೆ, ಅಭಿಮಾನವಿರಲು ಸಾಧ್ಯವಿಲ್ಲ. ಈಗಾಗಲೇ ಕೆಲ ಮುಸ್ಲಿಂ ಸಂಘಟನೆಗಳು ಮುಮ್ತಾಜ್ ನೈಜ ಮುಸ್ಲಿಮನೇ ಅಲ್ಲ, ಆತನನ್ನು ಮುಸ್ಲಿಂ ಸಮುದಾಯದ ಪ್ರತಿನಿಧಿಯಾಗಿ ಮಂತ್ರಿ ಮಾಡಬೇಡಿ ಎಂದು ಗಲಾಟೆ ಮಾಡಿದ್ದಾರೆ.

ಮುಂದೆ ಮುಮ್ತಾಜ್ ಅಲಿ ಖಾನ್‌ಗೆ ಬಿಜೆಪಿಗಳು ವಕ್ಫ್ ಖಾತೆ ಸಚಿವಗಿರಿ ಕೊಟ್ಟರೂ ಆಶ್ಚರ್ಯವಿಲ್ಲ. ಹಾಗೆ ಮಾಡುವ ಮೂಲಕ ಒಬ್ಬ ಚೆಡ್ಡಿ ಮುಸ್ಲಿಂನಿಂದಲೇ ಮುಸ್ಲಿಂರ ಧಾರ್ಮಿಕ ಸಾಂಸ್ಕೃತಿಕ ವಿಚಾರದೊಳಗೆ ತಲೆತೂರಿಸಿ ರಾಡಿ ಎಬ್ಬಿಸಲು ಅವಕಾಶ ಸಿಗುತ್ತದಲ್ಲವೇ?

ಏನೇ ಆಗಲಿ, ಇಡೀ ಇಂಡಿಯಾದೊಳಗೆ ವಾಚಕರ ವಾಣಿಗೆ ಪತ್ರ ಬರೆದೂ ಬರೆದೂ ಕ್ಯಾಬಿನೆಟ್ ಮಿನಿಸ್ಟರ್ ಆದ ಏಕೈಕ ವ್ಯಕ್ತಿ ಈ ಮು[illegible] ಅಲಿ ಖಾನ್ ಎಂದರೆ ಆಶ್ಚರ್ಯವಾಗುತ್ತದೆ[illegible]

ಚಿಕ್ಕಮಗಳೂರು: ವಿನಾಶದಂಚಿನಲ್ಲಿ ಕಾಂಗ್ರೆಸ್!

ಒಂದು ಕಾಲಕ್ಕೆ ಕಾಂಗ್ರೆಸ್‌ನ ಭದ್ರಕೋಟೆ ಎನಿಸಿದ್ದ ಚಿಕ್ಕಮಗಳೂರು ಜಿಲ್ಲೆ ಇವತ್ತು ಅದ್ಯಾವ ಹೀನಾಯ ಪರಿಸ್ಥಿತಿಗೆ ಬಂದು ನಿಂತಿದೆ ಎಂಬುದನ್ನು ಮೊನ್ನೆ ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶ ತೋರಿಸಿಕೊಟ್ಟಿದೆ. ಜಿಲ್ಲೆಯಲ್ಲಿ ಕನಿಷ್ಠ ನಾಲ್ಕು ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿಟ್ಟುಕೊಂಡಿದ್ದ ಕಾಂಗ್ರೆಸ್‌ಗೆ ಕೊನೆಗೆ ದಕ್ಕಿದ್ದು ಕೇವಲ ಒಂದೇ ಒಂದು. ಆ ಮೂಲಕ ತನ್ನ ದುರಂತ ಅಧ್ಯಾಯವನ್ನು ಅದು ಮುಂದುವರೆಸಿದೆ.

ತುರ್ತು ಪರಿಸ್ಥಿತಿಯನ್ನು ಹೇರಿ ನಾಗರಿಕರ ಕನಿಷ್ಠ ಮೂಲಭೂತ ಹಕ್ಕುಗಳನ್ನೂ ಕಿತ್ತುಕೊಂಡು ರಾಷ್ಟ್ರದಾದ್ಯಂತ ಪ್ರಜಾತಂತ್ರಪ್ರೇಮಿಗಳ ಕೋಪಕ್ಕೆ ಒಳಗಾಗಿದ್ದ ಮಾಜಿ ಪ್ರಧಾನಿ ದಿ. ಇಂದಿರಾಗಾಂಧಿಗೆ ಆಶ್ರಯ ನೀಡಿದ್ದ ಜಿಲ್ಲೆಯಿದು. 1979ರಲ್ಲಿ ಇಂದಿರಾ ಅವರು ಚಿಕ್ಕಮಗಳೂರಿನಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಭಾರಿ ಅಂತರದಿಂದ ಗೆಲುವು ಸಾಧಿಸಿದ್ದರು. ಆ ಹೊತ್ತಿಗೆ ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಎದುರಾಳಿಯೇ ಇಲ್ಲದಂತಾಗಿ ಒಂದು ರೀತಿಯ ಅಮಲಿನ ವಾತಾವರಣ ಕಾಂಗ್ರೆಸ್ ಪಾಳೆಯದಲ್ಲಿತ್ತು. ತದನಂತರದ ದಿನಗಳಲ್ಲಿ ಲೋಕಸಭೆ, ವಿಧಾನಸಭಾ ಕ್ಷೇತ್ರಗಳು, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮಪಂಚಾಯತಿ - ಹೀಗೆ ಪ್ರತಿಯೊಂದರಲ್ಲೂ ಗೆಲ್ಲುತ್ತಾ ಇಡೀ ಜಿಲ್ಲೆಯ ಮೇಲೆ ಏಕಾಧಿಪತ್ಯವನ್ನದು ಸಾಧಿಸಿತ್ತು.

ಮೊದಲು ಹೊಡೆತ ನೀಡಿದ್ದು ಜನತಾದಳ!

ಜಿಲ್ಲೆಯ ಮೇಲಿನ ಕಾಂಗ್ರೆಸ್ ಹಿಡಿತ ಒಂದಿಷ್ಟು ವರ್ಷಗಳ ಕಾಲ ಮುಂದುವರೆಯಿತಾದರೂ ಅದನ್ನು ಹಾಗೇ ಉಳಿಸಿಕೊಳ್ಳಲು ಅದರಿಂದ ಸಾಧ್ಯವಾಗಲಿಲ್ಲ. ಇಂದಿರಾ ಗೆಲುವಿನ ಒಂದೂವರೆ ದಶಕ ಮುಗಿಯುತ್ತಿದ್ದಂತೆ ಜಿಲ್ಲೆಯಲ್ಲಿ ಕಾಂಗ್ರೆಸ್ ಕೂಡ ಕಳೆಗುಂದಲಾರಂಭಿಸಿತು. ಅಷ್ಟು ಹೊತ್ತಿಗಾಗಲೇ ಡಿ.ಕೆ. ತಾರಾದೇವಿ ಸಿದ್ಧಾರ್ಥ ಕೇಂದ್ರದಲ್ಲಿ ಆರೋಗ್ಯ ಮಂತ್ರಿಗಳಾಗಿದ್ದರು. ತಂತ್ರಗಾರಿಕೆಗೆ ಆಗಲೇ ಹೆಸರುವಾಸಿಯಾಗಿದ್ದ ದೇವೇಗೌಡರ ಗರಡಿಯಲ್ಲಿ ಬೆಳೆದಿದ್ದ ಬಿ.ಎಲ್.ಶಂಕರ್ ಡಿ.ಕೆ.ತಾರಾದೇವಿಯನ್ನು ಸೋಲಿಸಿ ಕಾಂಗ್ರೆಸ್‌ನ ಭದ್ರ ಕೋಟೆಯನ್ನು ಒಡೆದೇ ಬಿಟ್ಟರು. ಅಂದು ಕಾಂಗ್ರೆಸ್‌ಗೆ ಅಂಟಿದ ಶನಿ ಇಂದಿಗೂ ತೊಲಗಿಲ್ಲ.

ನಂತರದ ದಿನಗಳಲ್ಲಿ ಕಾಂಗ್ರೆಸ್ ಹೊರಗಿನ ಶಕ್ತಿಗಳಿಗಿಂತ ಹೆಚ್ಚಾಗಿ ಒಳಗಿನ ಕಿತ್ತಾಟದಿಂದಲೇ ನಿಸ್ತೇಜವಾಗಿಬಿಟ್ಟಿತು. 1996ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಟಿಕೆಟ್ ಆಕಾಂಕ್ಷಿಯಾಗಿದ್ದ ಡಿ.ಕೆ.ತಾರಾದೇವಿಗೆ ಟಿಕೆಟ್ ಸಿಗಲಿಲ್ಲ. ಅಂದಿನ ಕೆಪಿಸಿಸಿ ಅಧ್ಯಕ್ಷ ಇದೇ ಧ್ರುವ್‌ಸಿಂಗ್ ಕಾರ್ಕಳ ಮೂಲದ ವೀರಪ್ಪ ಮೊಯ್ಲಿಗೆ ಟಿಕೆಟ್ ಕೊಡುವ ಮೂಲಕ ಡಿ.ಕೆ.ತಾರಾದೇವಿಯನ್ನು ಮೂಲೆಗುಂಪು ಮಾಡುವ ಡಿ.ಎಂ.ಪುಟ್ಟೇಗೌಡರ ಪ್ರಯತ್ನಕ್ಕೆ ಸಹಕರಿಸಿದ್ದರು. ಇದರೊಂದಿಗೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಒಳಗೊಳಗೇ ನಡೆಯುತ್ತಿದ್ದ ಕಿತ್ತಾಟ ಭಿನ್ನಮತದ ರೂಪದಲ್ಲಿ ಬಹಿರಂಗವಾಗಿ ಪ್ರಕಟಗೊಂಡುಬಿಟ್ಟಿತು. ಇದರೊಂದಿಗೆ ಪಕ್ಷವೂ ಜಿಲ್ಲೆಯಲ್ಲಿ ಹೋಳಾಯಿತು.

ಡಿ.ಕೆ.ತಾರಾದೇವಿಯನ್ನು ಹೊಸಕಿ ಹಾಕಲು ಪುಟ್ಟೇಗೌಡರಿಗೆ ಕೆಲವು ಕಾರಣಗಳಿದ್ದವು. ತಾರಾದೇವಿ ಒಕ್ಕಲಿಗ ಸಮುದಾಯದ ವರ್ಚಸ್ವಿ ನಾಯಕಿಯಾಗಿ ಅಷ್ಟುಹೊತ್ತಿಗಾಗಲೇ ಬೆಳೆದುನಿಂತಿದ್ದರಿಂದ ಪುಟ್ಟೇಗೌಡರಂತ ಒಕ್ಕಲಿಗ ನಾಯಕರ ಬೆಳವಣಿಗೆಗೆ ಅಡ್ಡಿಯಂತೆ ಕಾಣುತ್ತಿದ್ದರು. ತಾರಾದೇವಿ ಎಂಬ ರಸ್ತೆಯ ಮುಳ್ಳನ್ನು ಬದಿಗೆ ಹಾಕದ ಹೊರತು ಪುಟ್ಟೇಗೌಡರಿಗೆ ಬೆಳೆಯುವ ಅವಕಾಶ ಸಿಗುವುದಿಲ್ಲ ಎಂಬುದು ಅವರಿಗೆ ಮನವರಿಕೆಯಾಗಿತ್ತು. ಇದಕ್ಕೆ ರಾಜ್ಯ ನಾಯಕತ್ವ ಕೂಡ ಕೈಜೋಡಿಸಿತು. ಇದೆಲ್ಲದರ ಪರಿಣಾಮವಾಗಿ ತಾರಾದೇವಿ ಬಿಜೆಪಿ ಪಾಲಾಗಬೇಕಾಯಿತು.

ಬಿಜೆಪಿಯ ಬಿರುಗಾಳಿ


ತಾರಾದೇವಿಯನ್ನು ತುಳಿಯಲು ಯತ್ನಿಸಿದ್ದರಿಂದ ಕಾಂಗ್ರೆಸ್ ಭಾರಿ ಬೆಲೆ ತೆರಬೇಕಾಯಿತು. ಅವರು ಸೀದಾ ಬಿಜೆಪಿ ಸೇರಿಕೊಂಡಿದ್ದರಿಂದ ಬಿಜೆಪಿಯಲ್ಲಿ ಹೊಸ ಅಲೆ ಏಳಲಾರಂಭಿಸಿತು. ಈ ಬಿರುಗಾಳಿಗೆ ಖುದ್ದು ಮೊಯ್ಲಿಯೆ ತೂರಿ ಹೋಗಬೇಕಾಯಿತು. ಪರಿಣಾಮವಾಗಿ ಬಿಜೆಪಿಯ ಡಿ.ಸಿ.ಶ್ರೀಕಂಠಪ್ಪ ಎಂಬ ಕಾಂಜಿಪೀಂಜಿ ಆಸಾಮಿ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಸಂಸತ್ತನ್ನು ...ಸಿದರು.


...ಈ ಪರಿಸ್ಥಿತಿಯನ್ನು ಬಹಳ ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡ ಬಿಜೆಪಿ ತನಗೆ ಸಿಕ್ಕಿರುವ ಅಲ್ಪ ಅವಕಾಶದಲ್ಲಿಯೇ ಭದ್ರವಾಗಿ ನೆಲೆಯೂರಲು ಪ್ರಯತ್ನಿಸತೊಡಗಿತು. ಇದೇ ಹೊತ್ತಿಗೆ ಬಾಬಾಬುಡನ್‌ಗಿರಿಯಂತಹ ಸೂಕ್ಷ್ಮ ವಿಚಾರವನ್ನು ಜನರ ತಲೆಯೊಳಗೆ ತುಂಬಿ ತನ್ನ ಸಾಮಾಜಿಕ ನೆಲೆಯನ್ನು ವಿಸ್ತರಿಸಿಕೊಳ್ಳಲು ಒಂದಿಷ್ಟು ಯಶಸ್ವಿಯಾಯಿತು.


ಆಮೇಲೆ ಕಾಂಗ್ರೆಸ್ ಮೇಲೇಳಲಿಲ್ಲ!

ಇಷ್ಟಾದ ಮೇಲೂ ಕಾಂಗ್ರೆಸ್ ಧುರೀಣರಿಗೆ ತಾವು ಮಾಡಿದ ತಪ್ಪಿನ ಅರಿವಾಗಲಿಲ್ಲ. ಅವರಿಗೆ ಬುದ್ಧಿ ಅನ್ನೋದು ಇದ್ದಿದ್ರೆ ತಕ್ಷಣವೇ ಕೈಜಾರಿ ಹೋಗುತ್ತಿದ್ದ ಜಿಲ್ಲೆಯನ್ನು ಕೈವಶ ಮಾಡಿಕೊಳ್ಳುವುದು ಕಷ್ಟವಾಗುತ್ತಿರಲಿಲ್ಲ. ಜಿಲ್ಲಾ ಕಾಂಗ್ರೆಸ್‌ನ್ನು ಅದರ ಪಾಡಿಗೆ ಬಿಟ್ಟ ರಾಜ್ಯ ನಾಯಕರು ಅತ್ತ ತಲೆಯಿಟ್ಟೂ ಕೂಡ ಮಲಗಲಿಲ್ಲ. ಇದರ ಸಂಪೂರ್ಣ ಲಾಭವನ್ನು ಬಿಜೆಪಿ ಪಡೆದುಕೊಂಡಿತು. ಕೋಮುವಾದಿ ರಾಜಕಾರಣದಲ್ಲಿ ಪಳಗಿದ ಆರೆಸ್ಸೆಸ್‌ನ ಹಿಂಡು ಅಷ್ಟುಹೊತ್ತಿಗಾಗಲೇ ಬಾಬಾಬುಡನ್‌ಗಿರಿಯನ್ನು ದಕ್ಷಿಣ ಭಾರತದ ಅಯೋಧ್ಯೆ ಮಾಡುವ ಪಣತೊಟ್ಟು ಹಿಂದೂ-ಮುಸ್ಲಿಮರ ಮನಸ್ಸಿನಲ್ಲಿ ದ್ವೇಷದ ಹುಳಿ ಹಿಂಡುವಲ್ಲಿ ಯಶಸ್ವಿಯಾಗಿತ್ತು. ಇದೆಲ್ಲದರ ಪರಿಣಾಮವಾಗಿ 2004ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿದ್ದ ಆರು ಕ್ಷೇತ್ರಗಳಲ್ಲಿ ಮೂರು ಬಿಜೆಪಿಯ ಪಾಲಾದವು. ಇದು ವಾಸ್ತವದಲ್ಲಿ ಕಾಂಗ್ರೆಸ್‌ನ ಅಧೋಗತಿಯನ್ನೂ ಬಿಜೆಪಿಯ ಉದಯವನ್ನೂ ಏಕಕಾಲಕ್ಕೆ ಪ್ರತಿಬಿಂಬಿಸುವಂತಿತ್ತು.

ಇದೇ ಸಂದರ್ಭದಲ್ಲಿ ಬಿಜೆಪಿಯಿಂದ ಡಿ.ಕೆ.ತಾರಾದೇವಿ ಹೊರನಡೆದು ಜೆಡಿಎಸ್ ಸೇರಿಕೊಂಡರೆ ಬಿ.ಎಲ್.ಶಂಕರ್ ಜೆಡಿಎಸ್‌ನಿಂದ ಹೊರನಡೆದು ಕಾಂಗ್ರೆಸ್ ಸೇರಿಕೊಂಡರು. ಕಳೆದು ಹೋದ ಕಾಂಗ್ರೆಸ್ ವರ್ಚಸ್ಸನ್ನು ಮರಳಿ ಪಡೆಯುವ ಚಾಣಾಕ್ಷತನ ಬಿ.ಎಲ್.ಶಂಕರ್‌ಗಿತ್ತಾದರೂ ಜಿಲ್ಲೆಯಲ್ಲಿ ಅವರು ಏಕಾಂಗಿಯಾಗಿದ್ದುದರಿಂದ ಅದು ಸಾಧ್ಯವಾಗಲಿಲ್ಲ. ಇನ್ನೊಂದೆಡೆಗೆ ಅವರು ಜೆಡಿಎಸ್ ತೊರೆದಿದ್ದರಿಂದ ಕುಪಿತಗೊಂಡಿದ್ದ ದೇವೇಗೌಡರು ಎಂದಿನಂತೆ ತಮ್ಮ ತಂತ್ರಗಾರಿಕೆಯಿಂದ ಅವರನ್ನು ಸೋಲಿಸುವುದಕ್ಕೆ ಪ್ರಯತ್ನಪಟ್ಟಷ್ಟು ತಮ್ಮದೇ ಅಭ್ಯರ್ಥಿಯಾಗಿದ್ದ ತಾರಾದೇವಿಯನ್ನು ಗೆಲ್ಲಿಸುವುದಕ್ಕೆ ಪ್ರಯತ್ನಪಡಲಿಲ್ಲ. ಕಾಂಗ್ರೆಸ್ ಮತ್ತು ಜೆಡಿಎಸ್‌ನ ಜಗಳದ ಲಾಭವನ್ನು ಮತ್ತೆ ಬಿಜೆಪಿ ಪರಿಣಾಮಕಾರಿಯಾಗಿ ಬಳಸಿಕೊಂಡದ್ದರಿಂದ ಮತ್ತೆ ಮೂರನೇ ಬಾರಿಗೆ ಬಿಜೆಪಿಯ ಡಿ.ಸಿ.ಶ್ರೀಕಂಠಪ್ಪ ಗೆದ್ದು ಬಂದರು.












ಈಗಲಾದರೂ ಕಾಂಗ್ರೆಸ್ ಎಚ್ಚೆತ್ತುಕೊಳ್ಳುವುದೆ?

ಕಾಂಗ್ರೆಸ್ ಚುನಾವಣಾ ರಾಜಕೀಯದಲ್ಲಿ ಪಳಗಿದ ಪಕ್ಷ. ಇನ್ನು ಕೆಲವೇ ತಿಂಗಳುಗಳಲ್ಲಿ ಲೋಕಸಭಾ ಚುನಾವಣೆ ಎದುರಾಗಲಿದೆ. ಜಿಲ್ಲೆಯಲ್ಲಿ ಅದು ಮಾಡಿದ ತಪ್ಪನ್ನು ಈಗಲಾದರೂ ತಿದ್ದಿಕೊಂಡರೆ ಲೋಕಸಭಾ ಚುನಾವಣೆಯಲ್ಲಾದರೂ ಒಂದಿಷ್ಟು ಎದ್ದು ನಿಲ್ಲುವುದಕ್ಕೆ ಅದಕ್ಕೆ ತಾಕತ್ತಾದರೂ ಬರಬಹುದು. ಹಾಗೆ ನೋಡಿದರೆ ಜಿಲ್ಲಾ ಕಾಂಗ್ರೆಸ್‌ನಲ್ಲಿ ಈಗ ಬಿ.ಎಲ್.ಶಂಕರ್, ಡಿ.ಬಿ.ಚಂದ್ರೇಗೌಡ, ಡಿ.ಎಂ.ಪುಟ್ಟೇಗೌಡ, ಸಗೀರ್ ಅಹ್ಮದ್, ಮೋಟಮ್ಮ, ಕೆ.ಎಂ.ಕೃಷ್ಣಮೂರ್ತಿ, ಟಿ.ಎಚ್.ಶಿವಶಂಕರಪ್ಪ, ಟಿ.ವಿ.ಶಿವಶಂಕರಪ್ಪ, ಎಸ್.ಎಂ.ನಾಗರಾಜ್, ಬೇಗಾನೆ ರಾಮಯ್ಯ, ಬಿ.ಎಲ್.ರಾಮದಾಸ್, ಎ.ಎನ್.ರಮೇಶ್, ಟಿ.ಡಿ.ರಾಜೇಗೌಡ, ಕೆ.ಬಿ.ಮಲ್ಲಿಕಾರ್ಜುನನಂತಹ ಡಜನ್‌ಗಟ್ಟಲೇ ಸಮರ್ಥ ಲೀಡರುಗಳಿದ್ದಾರೆ. ಒಳಗಿನ ಜಗಳ ಕಡಿಮೆ ಮಾಡಿಕೊಂಡು ಒಂದಿಷ್ಟು ಒಗ್ಗಟ್ಟಿನಿಂದ ಹೋರಾಡಿದರೆ ಜಿಲ್ಲೆಯಲ್ಲಿ ಬಿಜೆಪಿ ತಲೆ ಎತ್ತದಂತೆ ಮಾಡಬಹುದು. ಆದರೆ, ಆ ಒಗ್ಗಟ್ಟನ್ನು ಕಾಂಗ್ರೆಸ್ ಪ್ರದರ್ಶಿಸುತ್ತದೆಯೋ ಎಂಬುದು ಕೊನೆಗೂ ಉಳಿಯುವ ಪ್ರಶ್ನೆ.

■ ಅಜೀಜ್ ಕಿರಗುಂದ



ಚಲುವರಾಯಸ್ವಾಮಿ



ಶಿವರಾಮೇಗೌಡ

ನಾಗಮಂಗಲ: ಒಂದೇ ಕಲ್ಲಿಗೆ ಎರಡು ಮಿಕ!

ಹಲವಾರು ಘಟನೆಗಳಿಂದ ನಾಡಿನ ಗಮನ ಸೆಳೆದಿದ್ದ ನಾಗಮಂಗಲದಲ್ಲಿ ಒಂದೇ ಕಲ್ಲಿಗೆ ಎರಡು ಮಿಕಗಳು ನೆಲಕ್ಕುರುಳಿವೆ. ತನ್ನ ಪುಕ್ಕಲು ರಾಜಕಾರಣದ ಶೈಲಿಯಿಂದಾಗಿಯೇ ಕಾಂಗ್ರೆ ಟಿಕೆಟ್ ವಂಚಿತರಾದ ಶಿವರಾಮೇಗೌಡ ಮತ್ತು ಅಹಂಕಾರದ ಮೂಟೆಯಂತಾಗಿರುವ ಜನತಾದಳದ ಚಲುವರಾಯಸ್ವಾಮಿ ಇಬ್ಬರೂ ಕಾಂಗ್ರೆಸ್‌ನ ಸುರೇಶ್ ಗೌಡ ಎಂಬ ಹೊಸಬನ ಎದುರು ಸೋತಿದ್ದಾರೆ. ಹಾಗೆ ನೋಡಿದರೆ ಶಿವರಾಮೇಗೌಡ ಕಾಂಗ್ರೆ ಟಿಕೆಟ್ ಪಡೆದು ಚುನಾವಣೆಯಲ್ಲಿ ಸ್ಪರ್ಧಿಸಿದ್ದರೆ, ಚಲುವರಾಯಸ್ವಾಮಿ ಎದುರು ಭಾರಿ ಅಂತರದ ಗೆಲುವು ಸಾಧಿಸುತ್ತಿದ್ದ. ಆಕಸ್ಮಾತ್ ಸುರೇಶ್‌ಗೌಡ ಬಿಜೆಪಿ ಅಭ್ಯರ್ಥಿಯಾಗಿದ್ದರೆ, ಸುರೇಶ್ ಮತ್ತು ಶಿವರಾಮನ ಗುದ್ದಾಟದಲ್ಲಿ ಚಲುವ ಸರಾಗವಾಗಿ ಗೆದ್ದು ಬರುತ್ತಿದ್ದ. ಆದರೆ ಚಲುವರಾಯಸ್ವಾಮಿ ಹಾಗೆ ಗೆದ್ದು ಬಂದ ಮರುಕ್ಷಣವೂ ಬಿಜೆಪಿ ಪಾಳಯದಲ್ಲಿ ಕಾಣಿಸಿಕೊಳ್ಳುತ್ತಿದ್ದ ಎಂಬುದು ಜೆಡಿಎಸ್‌ನ ವ್ಯಾಖ್ಯಾನವಾಗಿದೆ!

ಈ ಚಲುವರಾಯಸ್ವಾಮಿ ಬಿಜೆಪಿ ಪಕ್ಕದಲ್ಲಿರುವುದನ್ನು ವಾರೆಗಣ್ಣಿಂದಲೇ ಗಮನಿಸಿದ್ದ ದೇವೇಗೌಡರು, ಪಾರ್ಟಿ ಕಾರ್ಯಕರ್ತರ ಎದುರೇ "ಮುಂದಿನ ಚುನಾವಣೆಯಲ್ಲಿ ಹತ್ತು ಕೋಟಿ ಖರ್ಚು ಮಾಡಿದರೂ ನೀನು ಗೆಲ್ಲಲಾಗುವುದಿಲ್ಲ." ಎಂದು ಮೂದಲಿಸಿದ್ದರು. ಇದರಿಂದ ಅಸಹನೆಗೊಂಡ ಚಲುವರಾಯಸ್ವಾಮಿ, ಬಿಜೆಪಿಯವರ ಜೊತೆ ಹೆಚ್ಚು ಓಡಾಡಿದ್ದೂ ಅಲ್ಲದೇ ಕೇವಲ ನೂರಾರು ಓಟು ಪಡೆದು ಪರಾರಿಯಾಗುವಂತಹ ಬಿಜೆಪಿ ಕ್ಯಾಂಡಿಡೇಟ್ ಹಾಕಿಸಿಕೊಂಡಿದ್ದ. ಅಷ್ಟೇ ಅಲ್ಲ, ದೇವೇಗೌಡರು ಹೇಳಿದ್ದಕ್ಕಿಂತಲೂ ಹೆಚ್ಚು ಹಣವನ್ನು ಖರ್ಚು ಮಾಡಿದ. ಜನರಂತೂ ವಾರಗಟ್ಟಲೆ ಬಾಡು, ಬಳ್ಳೆ, ಮದ್ಯ ಸೇವನೆಯಿಂದ ಮಲೆತುಹೋಗಿದ್ದರು. ಆದರೇನು, ಚುನಾವಣೆಯಲ್ಲಿ ಚಲುವನಿಗೆ ಸರಿಯಾಗಿಯೇ ಕೈಕೊಟ್ಟು ಬಿಟ್ಟರು.



ಸುರೇಶ್

"ಮೂವತ್ತು ಸಾವಿರಕ್ಕಿಂತಲೂ ಅಧಿಕ ಬಹುಮತಗಳಿಂದ ಆರಿಸಿಬರುತ್ತೇನೆ"ಎಂದು ಹೇಳಿಕೊಂಡು ಬಂದಿದ್ದ ಚಲುವರಾಯಸ್ವಾಮಿಗೆ ಸೋಲು ನಂಬಲಾರದ ಸಂಗತಿಯಾಯಿತು. ಈ ಶಾಕ್‌ನಿಂದ ಚೇತರಿಸಿಕೊಳ್ಳಲಾರದೆ ಅವರು ಫಲಿತಾಂಶ ಪ್ರಕಟವಾದ ಮರುದಿನದಿಂದಲೇ ಹೋಬಳಿ ಮಟ್ಟದ ಕಾರ್ಯಕರ್ತರ ಸಭೆ ಕರೆದು, ತಾಲ್ಲೂಕಿನಲ್ಲಿ ಸಂಚಾರ ಮಾಡಿದರು. ಎಂದಿನಂತೆ ಅವರ ಪಟಾಲಂ ಜೈಕಾರ ಹಾಕುತ್ತಾ ಸುತ್ತಿದರು. ಜನರಿಗೆ ಎಂತಹ ಮನರಂಜನೆ ಸಿಕ್ಕಿತೆಂದರೆ, ಗೆದ್ದ ಅಭ್ಯರ್ಥಿ ಎತ್ತಲೊ ಹೋಗಿದ್ದರೆ, ಸೋತವನೆ ಜೈಕಾರ ಹಾಕಿಸಿಕೊಂಡು ತಿರುಗಿದ್ದು ಮೋಜಿನದಾಗಿತ್ತು.

ನಾಗಮಂಗಲದಲ್ಲಿ ಹಿಂದೆಂದೂ ಆಗಿರದಷ್ಟು ಕೆಲಸಗಳನ್ನ ಚಲುವರಾಯಸ್ವಾಮಿ ಮಾಡಿಸಿದ್ದರೂ ಈತ ಸೋತಿದ್ದೇಕೆ ಎಂದು ಅವಲೋಕಿಸಿದರೆ, ಹಲವು ಸರಳ ಕಾರಣಗಳು ಸಿಗುತ್ತವೆ. ಈತನ ಅಣ್ಣನಾದ ಲಕ್ಷ್ಮೀಕಾಂತ ಕಂಟ್ರ್ಯಾಕ್ಟರ್ ಆಗಿರುವುದರಿಂದ, ತಾಲ್ಲೂಕಿನ ಎಲ್ಲ ಕಾಮಗಾರಿಗಳಲ್ಲಿ ಈತನದ್ದೇ ಸಿಂಹಪಾಲು. ಒಮ್ಮೆ ಬರೋಬರಿ 13 ಕೋಟಿ ರೂ.ಗಳ ಕಾಮಗಾರಿಯನ್ನು ಈ ಲಕ್ಷ್ಮೀಕಾಂತನೇ ಲಪಟಾಯಿಸಿದ್ದ. ಇದೆಲ್ಲದರೊಂದಿಗೆ ಮೈಸೂರು ಮತ್ತು ಮಂಡ್ಯದವರೆಗೂ ಲಕ್ಷ್ಮೀಕಾಂತ ತನ್ನ ಕಳಪೆ ಕಾಮಗಾರಿ ಸಾಮ್ರಾಜ್ಯವನ್ನು ವಿಸ್ತರಿಸಿದ್ದ. ಇವೆಲ್ಲವು ಸಣ್ಣಪುಟ್ಟ ಕಂಟ್ರ್ಯಾಕ್ಟರುಗಳು ಚಲುವರಾಯಸ್ವಾಮಿ ವಿರುದ್ಧ ತಿರುಗಿ ಬೀಳುವಂತೆ ಮಾಡಿತ್ತು. ಇದಿಷ್ಟು ಸಾಲದೆಂಬಂತೆ ಸಿದ್ಧರಾಮಯ್ಯನವರ ಬಗ್ಗೆ ಹಗುರವಾಗಿ ಮಾತನಾಡುತ್ತಾ ಚಾಮುಂಡೇಶ್ವರಿ ಚುನಾವಣೆಯಲ್ಲಿ ತುಂಬಾ ಓಡಾಡಿದ್ದ ಚಲುವರಾಯಸ್ವಾಮಿ. ಈತನ ಇಂತಹ ಚಟುವಟಿಕೆಗಳನ್ನು ಗಮನಿಸಿದ್ದ ಕುರುಬರು ಸಮಯಕ್ಕಾಗಿ ಕಾಯುತ್ತಿದ್ದರು. ಒಳ್ಳೆ ಸಮಯಕ್ಕೆ ಬಂದ ಸಿದ್ಧರಾಮಯ್ಯ "ಈತ ಸರಕಾರದ ಹಣವನ್ನು ಯದ್ವಾತದ್ವಾ ಹೊಡೆದು ಗುಡ್ಡೆ ಹಾಕಿಕೊಂಡಿರುವುದರಿಂದ, ಅವನು ಕೊಟ್ಟಿದನ್ನು ಈಸಿಕೊಂಡು ಒಂದೇ ಒಂದು ಓಟನ್ನು ಕೊಡಬೇಡಿ" ಎಂದು ಹೋಗಿದ್ದರು.

ಇದೆಲ್ಲದರ ಜೊತೆಗೆ ಚಲುವರಾಯಸ್ವಾಮಿಗೆ ಸಿರಿಗರ ಹೊಡೆದಿತ್ತು. ತುಂಬ ಬಡತನದಿಂದ ಬಂದ ಈತ ದಿನ ಬೆಳಗಾಗುವುದರಲ್ಲಿ ಕೋಟ್ಯಾಧಿಪತಿಯಾದ. ಏನನ್ನಾದರೂ ಹಣದ ಬಲದಿಂದ ಕೊಳ್ಳಬಲ್ಲೆ ಎಂಬ ಅಹಂಕಾರಕ್ಕೆ ತುತ್ತಾದ. ಬಡತನವಿದ್ದರೂ ಸ್ವಾಭಿಮಾನಿಗಳಾದ ನಾಗಮಂಗಲದ ಜನರ ಎದುರು ಈತ ಕ್ಷುದ್ರ ಜಂತುವಾಗಿ ಮಾರ್ಪಟ್ಟು ಬಹಳ ದಿನಗಳಾಗಿದ್ದುವು. ಆದರೆ ಇದ್ಯಾವುದನ್ನೂ ಚಲುವರಾಯಸ್ವಾಮಿ ಗಮನಿಸಲಿಲ್ಲ.

ಸರಕಾರದ ರಚನೆಯಲ್ಲಿ ಘಟಾನುಘಟಿ ರಾಜಕಾರಣಿಗಳೇ ತನ್ನನ್ನ ಕರೆದು ಮಾತನಾಡಿಸುತ್ತಿರುವಾಗ, ಟಿ.ವಿ.ಯಲ್ಲಿ ಕಾಣಿಸಿಕೊಂಡು ರಾಜಕಾರಣದ ಆಗುಹೋಗನ್ನು ಚರ್ಚಿಸುವ ತಾನು ದೇವೇಗೌಡ ಮತ್ತು ಎಸ್ಸೆಂ ಕೃಷ್ಣರ ಮಟ್ಟದ ರಾಜಕಾರಣಿ ಎಂದು ಭಾವಿಸಿದ. ಆದ್ದರಿಂದ ತನ್ನ ಎದುರು ನಿಂತ "ಸುರೇಶ್‌ಗೌಡ ಯಾವ ಲೆಕ್ಕಕ್ಕೂ ಇಲ್ಲ, ಅಂತವನ ಎದುರು ನಾನು ನಿಂತಿರುವುದೇ ನನಗೆ ಅವಮಾನ" ಎಂದು ಹೇಳಿಕೊಂಡು ತಿರುಗಿದ. ಆದರೆ ಜನ ಈತನ ಅಹಂಕಾರಕ್ಕೆ ತಕ್ಕ ಶಾಸ್ತಿ ಮಾಡಿದ್ದಾರೆ.


ಹಾಗೆ ನೋಡಿದರೆ, ಈತ ಶಿವರಾಮೇಗೌಡನಷ್ಟು ಅಪಾಯಕಾರಿಯಲ್ಲ. ಆದರೆ ಶಿವರಾಮೇಗೌಡನ ಸಮೇತ ಆತನ ಇಡೀ ಸಂಬಂಧಿಗಳು ಈ ಬಾರಿ ಚಲುವರಾಯಸ್ವಾಮಿ ಗೆಲುವಾಗಿ ಓಡಾಡಿದರೆಂದರೆ, ಈತ ಶಿವರಾಮೇಗೌಡನ ಸ್ಥಾನಕ್ಕೆ ಹೋರಾಟ ನಡೆಸಿದ್ದ ಎಂದಂತಾಗುವುದಿಲ್ಲವೇ?!

■ ವರದಿಗಾರ

ನಾಯಕತ್ವದ ಗುಣ

3ನೇ ಪುಟದಿಂದ ▶ ▶ ▶

ಹಾಗೆಯೇ ಮೇಲುಜಾತಿಯವರು ಕೂಡ ಸಮಾನ ಸಮಾಜಕ್ಕಾಗಿ ಮೀಸಲಾತಿ ಅಗತ್ಯ ಎಂಬುದನ್ನು ಅರಿತುಕೊಂಡು ಅದನ್ನು ಬೆಂಬಲಿಸಬೇಕು. ಹೇಗೆ ನಮ್ಮ ವ್ಯವಸ್ಥೆ ಇಡೀ ಸಮುದಾಯಗಳನ್ನೇ ಮುಖ್ಯವಾಹಿನಿಯಿಂದ ಹೊರಗಿಟ್ಟಿದೆ, ಅವರಿಗೆ ಹೇಗೆ ಅನ್ಯಾಯ ಮಾಡಲಾಗುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಎಲ್ಲಾ ಶಾಲೆ ಮತ್ತು ಸಮುದಾಯಗಳು, ಮಾನವ ಹಕ್ಕುಗಳು, ಸಮಾನ ಅವಕಾಶ ಎಲ್ಲರಿಗೂ ಸಿಗುವಂತೆ ಒತ್ತಾಯ ಮಾಡಬೇಕು. ನಮ್ಮ ದೇಶದ ಎಲ್ಲಾ ಧರ್ಮ, ಜಾತಿ ಮತ್ತು ವರ್ಗದ ಜನರು ನನ್ನ ಕನಸುಗಳನ್ನು ಬಲಿಕೊಟ್ಟು ನಿಮ್ಮ ಕನಸುಗಳನ್ನು ನನಸಾಗಿಸಿಕೊಳ್ಳುವುದು ಸರಿಯಲ್ಲ ಎಂಬುದನ್ನು ಅರ್ಥ ಮಾಡಿಕೊಂಡಾಗ, ಎಲ್ಲರೂ ಉದ್ಧಾರವಾದಾಗ ಮಾತ್ರ ನಮ್ಮ ದೇಶವೂ ಉದ್ಧಾರವಾಗುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಂಡಾಗ ಮಾತ್ರ ನಮ್ಮ ಸಂವಿಧಾನದಲ್ಲಿನ ಆಶಯಗಳು ವಾಸ್ತವ ವಾಗುತ್ತವೆ.



ಎಲ್ಲಾ ಧರ್ಮಗಳಲ್ಲಿನ ಸಾರ ಎಲ್ಲರಿಗೂ ಲೇಸನ್ನು ಬಗೆಯುವುದೇ ಆಗಿದೆ. ಹಾಗಾಗಿ ಇನ್ನೊಬ್ಬರ ಏಳಿಗೆಯಲ್ಲಿ ನನ್ನ ಏಳಿಗೆಯೂ ಇದೆ ಎಂಬ ನಿಲುವು ನಮ್ಮೆಲ್ಲರದ್ದಾಗ ಅದು ನಮ್ಮ ರಾಜಕೀಯ ಸಿದ್ಧಾಂತವೂ ಆಗುತ್ತದೆ. ನಮ್ಮ ಮುಂದೆ ಎರಡು ಆಯ್ಕೆಗಳಿವೆ. ಮೊದಲನೆಯದು ಸಮುದಾಯಗಳ ನಡುವೆ ಬಿರುಕುಗಳನ್ನು ಮೂಡಿಸಿ ದೇಶದ ಒಗ್ಗಟ್ಟನ್ನು ಮುರಿಯುವ ಸಿದ್ಧಾಂತ, ಎರಡನೆಯದು ಆ ಸಿದ್ಧಾಂತವನ್ನು ತಿರಸ್ಕರಿಸಿ ಎಲ್ಲಾ ಧರ್ಮ, ವರ್ಗ, ಜಾತಿಯ ಬಡವರ ಮಕ್ಕಳ ಭವಿಷ್ಯವನ್ನು, ಜನರ ಬದುಕನ್ನು ನಾಶಪಡಿಸುತ್ತಿರುವ ಆರ್ಥಿಕ ವ್ಯವಸ್ಥೆಯನ್ನು, ಜಾಗತೀಕರಣದಿಂದಾಗಿ ಎಲ್ಲರಿಗೂ ಎಟುಕದಂತಾಗಿರುವ ಆರೋಗ್ಯ ವ್ಯವಸ್ಥೆಯನ್ನು, ಖಾಸಗೀಕರಣದಿಂದಾಗಿ ಸರ್ಕಾರಿ ಕಾರ್ಖಾನೆಗಳು ಮುಚ್ಚಲ್ಪಟ್ಟು ನೌಕರರನ್ನು ಬೀದಿಪಾಲು ಮಾಡಿರುವುದನ್ನು, SEZ ಗಳಿಂದಾಗಿ ತಮ್ಮ ಭೂಮಿಯನ್ನು ಕಳೆದುಕೊಳ್ಳುತ್ತಿರುವ ರೈತರ ಸಂಕಷ್ಟ, ಇವೆಲ್ಲವನ್ನು ವಿರೋಧಿಸಬೇಕಿದೆ. ಅದಕ್ಕೆ ಬೇಕಿರುವುದೇನೆಂದರೆ ಬೇರೆ ಜಾತಿ ಅಥವಾ ಧರ್ಮದವರು ನಿಮ್ಮ ಬದುಕು ಮತ್ತು ಭವಿಷ್ಯವನ್ನು ಕಸಿಯುತ್ತಿದ್ದಾರೆ ಎಂಬ ತಪ್ಪು ಕಲ್ಪನೆಯಲ್ಲ, ಬದಲಾಗಿ ಲಾಭವೊಂದನ್ನೇ ತಮ್ಮ ಗುರಿಯಾಗಿಸಿಕೊಂಡಿರುವ ಬಂಡವಾಳಶಾಹಿಗಳು ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಈ ದೇಶದ ಎಲ್ಲಾ ಜನರ ವೈರಿಗಳಾಗಿದ್ದಾರೆ ಎಂಬ ಅರಿವು...."

ಇಂತಹ ಮಾತುಗಳನ್ನಾಡಿದ್ದು ನಮ್ಮ ದೇಶದ ಯಾವ ರಾಜಕಾರಣಿಯೂ ಅಲ್ಲ, ಬದಲಾಗಿ ಅಮೆರಿಕದ ಅಧ್ಯಕ್ಷ ಪದವಿಯ ಆಕಾಂಕ್ಷಿಯಾಗಿರುವ ಬರಾಕ್ ಒಬಾಮಾ. ನಿಮ್ಮೆಲ್ಲರಿಗೆ ಗೊತ್ತಿರುವಂತೆ ಈತ ಆಫ್ರಿಕನ್ ಮೂಲದ ಕಪ್ಪು ಬಣ್ಣದವ. ಆದರೆ ಇತರೆ ಕಪ್ಪು ಬಣ್ಣದವರಿಗಿಂತ ಉತ್ತಮ ಸೌಲಭ್ಯಗಳೊಂದಿಗೆ ಬೆಳೆದ ಒಬಾಮಾ ಉನ್ನತ ಶಿಕ್ಷಣ ಮತ್ತು ಸವಲತ್ತುಗಳನ್ನು ಪಡೆದವ. ಆದರೆ ತನ್ನ ಚರ್ಮದ ಬಣ್ಣದ ಕಾರಣದಿಂದಾಗಿ ಇತರೆ ಕರಿಯರಂತೆ ದಬ್ಬಾಳಿಕೆಗೆ, ಶೋಷಣೆಗೆ ಗುರಿಯಾದವ. ಇತ್ತೀಚೆಗೆ ಒಬಾಮಾನ ಪಾದ್ರಿ ಅಮೆರಿಕದ ಆಂತರಿಕ ಮತ್ತು ವಿದೇಶಿ ನೀತಿಗಳನ್ನು ಖಂಡಿಸಿದ್ದನ್ನೇ ನೆಪಮಾಡಿಕೊಂಡು ಒಬಾಮಾನ ವಿರುದ್ಧ ವಾಕ್ ಸಮರ ನಡೆದಿತ್ತು, ಆಗ ಆತ ತನ್ನ ಕಲ್ಪನೆಯ ಮತ್ತು ಆಶೆಯ ಅಮೆರಿಕ ಹೇಗಿರಬೇಕೆಂದು, ಅದರ ಆಳದಲ್ಲಿ ಅಡಗಿರುವ ಅಸಮಾನತೆಯನ್ನು ಕುರಿತು ಒಂದು ಭಾಷಣ ಮಾಡಿದ. ಅದು 'Youtube' ಎಂಬ ವೆಬ್‌ಸೈಟನಲ್ಲಿ ಲಭ್ಯವಿದ್ದು, ಅದನ್ನು ನೋಡಿದೆ. ಆ ಭಾಷಣದಲ್ಲಿ ಆತ ಇಸ್ರೇಲ್ ಮತ್ತು ಮುಸ್ಲಿಂ ಸಮುದಾಯಗಳ ಬಗ್ಗೆ ಹೇಳಿರುವ ಹಲವು ಮಾತುಗಳನ್ನು ಒಪ್ಪಲಾಗುವುದಿಲ್ಲ, ಆದರೆ ಆತ ಅಲ್ಲಿನ ಆಫ್ರಿಕನ್ ಮೂಲದವರ, ಬಿಳಿ ಬಣ್ಣದ ಬಡವರ, ಇತರೆ ದೇಶಗಳಿಂದ ವಲಸೆ ಬಂದವರ ಬದುಕಿನ ಬಗ್ಗೆ ಕುರಿತು ಮಾತನಾಡಿರುವುದು ನಮ್ಮ ದೇಶದ ಜನರ ಬಗ್ಗೆಯೇ ಮಾತನಾಡಿದಂತಿತ್ತು, ಆದ್ದರಿಂದ ಒಬಾಮಾನ ಭಾಷಣವನ್ನು ನಮ್ಮ ದೇಶದ ಪ್ರಸ್ತುತ ಪರಿಸ್ಥಿತಿಗೆ ಹೊಂದುವಂತೆ ಭಾವಾನುವಾದ ಮಾಡಿದ್ದೇನೆ.

ಈಗ ಹೇಳಿ ಒಬಾಮಾ ತರಹ ಇಲ್ಲಿನ ಜನರ ಬಗ್ಗೆ ಅಷ್ಟೇ ಕಾಳಜಿಯನ್ನು ಹೊಂದಿದ್ದು ಆತನಷ್ಟು ಸ್ಪಷ್ಟವಾಗಿ, ಪ್ರಬುದ್ಧವಾಗಿ ನಮ್ಮ ಯಾವ ನಾಯಕನಾದರೂ ಇತ್ತೀಚೆಗೆ ಮಾತನಾಡಿದ್ದನ್ನು ಕೇಳಿದ್ದೀರ?

ಇವರೆಲ್ಲರಿಗೆ ಅದೆಂತಹ ಗರ ಬಡಿದಿರಬಹುದು?

■ ಗೌರಿ ಲಂಕೇಶ್

ಬಿಡಿ ಚಿತ್ರಗಳು



ಮಲ್ಯನಿಗೆ 20 ಪೈಸೆ ದಾನ

IPL ನ ಟ್ವೆಂಟಿ 20 ಟೂರ್ನಿಯಲ್ಲಿ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ಟೀಂ ಹಿಗ್ಗಾಮುಗ್ಗಾ ಒದೆ ತಿಂದ ಮೇಲೆ ವಿಜಯ್ ಮಲ್ಯ ಬಗ್ಗೆ ಒಂದು ಹೊಸ SMS ಜೋಕ್ ಹುಟ್ಟಿಕೊಂಡಿದೆ.

"I am Mallya, My team has lost IPL. I have invested 400 crores. I do not know you, but if u send this sms I will get 20 paisa from company. If you have heart please forward this to atleast 10 persons."

ಟ್ವೆಂಟಿ 20 ಮ್ಯಾಚ್‌ನಲ್ಲಿ ಫೋರ್ ಸಿಕ್ಸರ್ ಬಾರಿಸಿದಾಗ ಸಿಗುವಷ್ಟೇ ಮಜಾ ಈ SMS ನಲ್ಲಿದೆ. ಇನ್ನು ಮಲ್ಯನಿಗೆ 20 ಪೈಸೆ ದಾನ ಮಾಡುವ ಬದಲು ಆತನ ಕಂಪನಿ ತಯಾರಿಸುವ ಬೀರ್ ಮತ್ತು ವಿಸ್ಕಿಯನ್ನು ಹೆಚ್ಚು ಕುಡಿದು ಆತನ ಲಾಭ ಹೆಚ್ಚಾಗುವಂತೆ ಮಾಡುವುದರಲ್ಲಿ ಖಂಡಿತಾ ಜಾಸ್ತಿ ಮಜ ಇದೆ ಎಂಬುದು ನಮ್ಮ ಅನಿಸಿಕೆ. ಏನಂತಿರಾ?

ಬೆಂಗಳೂರು ವಿ.ವಿ.ಯ ಚೆಡ್ಡಿ ಬುದ್ದಿ



ಎಸ್.ವಿ. ರಂಗನಾಥ್ ಬೆಂಗಳೂರು ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಆಗಿ ಬಂದ ಮೇಲೆ ಅಸಂಬದ್ಧ ಕೆಲಸಗಳಲ್ಲೇ ಮುಳುಗಿಹೋಗಿದ್ದಾರೆ.

ಮೊನ್ನೆ ಹೀಗಾಗಿದೆ.

ಬೆಂಗಳೂರು ವಿ.ವಿ. ತನ್ನ ಕ್ಯಾಂಪಸ್‌ನೊಳಗೆ ಒಂದು ದೊಡ್ಡ ಗೆಸ್ಟ್ ಹೌಸ್ ನಿರ್ಮಾಣ ಮಾಡಿದೆ. ಮೊದಲಾದರೆ ಯಾರೋ ಅತಿಥಿ ಬಂದು ಕಟ್ಟಡ ಉದ್ಘಾಟಿಸಿ ಹೋಗಿರುತ್ತಿದ್ದರು. ಆದರೆ ಈ ಬಾರಿ ಹೊಸ ಕಟ್ಟಡದೊಳಗೆ ಒಂದು ಭರ್ಜರಿ ಹೋಮ, ಹಾಲುಕ್ಕಿಸಿ ಪೂಜೆ, ಕೊನೆಗೆ ಒಂದು ಹಸುವನ್ನೂ ಎಳೆತಂದು ಪೂಜೆ ಮಾಡಿ ಪುರೋಹಿತರ ಸಮ್ಮುಖದಲ್ಲೇ ಗೃಹಪ್ರವೇಶ ಮಾಡಿದ್ದಾರೆ.

ಸ್ವಾಯತ್ತ ಸಂಸ್ಥೆಯಾಗಿರುವ ವಿವಿಯೊಳಗಡೆ ಇಂಥ ಅವಿವೇಕದ ಕಾರ್ಯಕ್ರಮ ನಡೆದಿದ್ದರೂ ವಿವಿಯ ಯಾರೊಬ್ಬರೂ ಪ್ರತಿಭಟಿಸದಿರುವುದು ಆಶ್ಚರ್ಯಕರವಾಗಿದೆ.

ಅಂದಹಾಗೆ ಅವತ್ತಿನ ಮುಖ್ಯ ಅತಿಥಿ ಲೋಕಾಯುಕ್ತ ಸಂತೋಷ್ ಹೆಗ್ಡೆಯಾದರೆ, ವಿವಿ ರಿಜಿಸ್ಟ್ರಾರ್ ಐಎಎಸ್ ಅಧಿಕಾರಿ ಸಂಜಯ್ ವೀರ್ ಸಿಂಗ್ ವೈಯಾರಿ ಹೆಂಗಸಿನಂತೆ ಹಾಲುಕ್ಕಿಸಿ ತಮ್ಮ ಜನ್ಮ ಪಾವನಗೊಳಿಸಿಕೊಂಡಿದ್ದಾರೆ.

ಬೆಂಗಳೂರು ವಿವಿಗೆ ಈ ಅವಿವೇಕಿಗಳಿಂದ ಬಿಡುಗಡೆ ಯಾವಾಗ?

ನಟಿ ರಮ್ಯಾಳ ದಾಂಪತ್ಯ ಗೀತೆ

ನಟಿ ರಮ್ಯಾ ಮೊನ್ನೆ ಪ್ರಜಾವಾಣಿಯೊಂದಿಗೆ ಮಾತಾಡುತ್ತಾ ತನ್ನ ಮದುವೆ ಬಗ್ಗೆ ಹೇಳಿ ಕೊಂಡಿದ್ದಾಳೆ. ಅದನ್ನು ಯಥಾವತ್ತಾಗಿ ಇಲ್ಲಿ ಕೊಡುತ್ತಿದ್ದೇವೆ.



ಪ್ರಜಾವಾಣಿ: ಮದುವೆ ಯಾವಾಗ?

ರಮ್ಯಾ: ಇನ್ನು ಮೂರು ವರ್ಷ ಕಳೆದು 2011 ರಲ್ಲಿ ಮದುವೆ. ಆಗ ಗುರುಬಲ ಇದೆಯಂತೆ. ಮದುವೆಯಾದ ಮೇಲೆ ನಟಿಸುವುದಿಲ್ಲ, ಮಕ್ಕಳೊಂದಿಗೆ, ನಾಯಿಗಳೊಂದಿಗೆ ಇರುತ್ತೇನೆ.

ಇಲ್ಲಿ ನಮ್ಮ ಡೌಟು ಒಂದೇ.....

ಯಾಕೆ ರಮ್ಯಾ ಗಂಡನ ಜೊತೆ ಇರಲ್ಲಾ ಅಂತ.

ಲಂಕೇಶ್ ನೆನಪು

ಮಯೂರ ದಾಖಲಿಸಿದ 'ಉರಿದ ಉಲ್ಕೆ'

ಜೂನ್ ತಿಂಗಳ 'ಮಯೂರ' ಮಾಸಿಕ ಪಿ. ಲಂಕೇಶ್ ಕುರಿತ ಬರಹಗಳ ವಿಶೇಷ ಸಂಚಿಕೆಯಾಗಿ ಪ್ರಕಟವಾಗಿದೆ.

ಮಯೂರ ರೂಪಿಸುವ ಜಿ.ಪಿ. ಬಸವರಾಜ್ ಇದನ್ನೊಂದು ಸಂಗ್ರಹಯೋಗ್ಯ ಸಂಚಿಕೆಯನ್ನಾಗಿ ತಂದಿದ್ದಾರೆ. ಅವರಿಗೆ ಅಭಿನಂದನೆಗಳು.



ಲಂಕೇಶ್ ನಿರ್ಗಮಿಸಿ ಇಲ್ಲಿಗೆ ಎಂಟು ವರ್ಷಗಳಾದರೂ ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಜಗತ್ತು ಲಂಕೇಶ್ ಕುರಿತು ಮತ್ತೆಮತ್ತೆ ಧ್ಯಾನಿಸುವುದು, ಸಮಕಾಲೀನ ಸಂದರ್ಭಗಳನ್ನು ಲಂಕೇಶ್ ಇದ್ದಾಗಿನ ಸಂದರ್ಭಗಳೊಂದಿಗೆ ಹೋಲಿಸಿ ವಿಶ್ಲೇಷಿಸುವುದೆಲ್ಲಾ ಲಂಕೇಶರ ಪ್ರತಿಭೆ, ಪ್ರಭಾವಗಳಿಗೆ ಸಾಕ್ಷಿಯಾಗಿವೆ.

ಮಯೂರಾದ ಬರಹಗಳ ವೈಶಿಷ್ಟತೆ ಏನೆಂದರೆ ಲಂಕೇಶರ ಬಗ್ಗೆ ಅಭಿಮಾನ, ಮೆಚ್ಚುಗೆಯಿಂದ, ನಿರ್ವ್ಯಾಮೋಹದಿಂದ ದಾಖಲಾಗಿರುವ ವಿಷಯಗಳೊಂದಿಗೇ ಅವರ ಬಗೆಗಿನ ನಿಷ್ಠೂರತೆ, ಟೀಕೆ-ವಿಮರ್ಶೆಯ ಬರಹಗಳೂ ಇವೆ. ಜೊತೆಗೆ ಇಂದಿರಾ ಲಂಕೇಶರ ಬಹುಶ ಅವರ ನೆನಪುಗಳ ಮೊಟ್ಟಮೊದಲ ಚೇತೋಹಾರಿ ಬರಹವೂ ಇದರಲ್ಲಿದೆ.

ಅಂದಹಾಗೆ ಮಯೂರ ಈ ಲಂಕೇಶ್ ನೆನಪಿನ ಸಂಚಿಕೆಗೆ 'ಉರಿದ ಉಲ್ಕೆ' ಎಂದು ಹೆಸರಿಸಿದೆ.

ಲಂಕೇಶರ ಒಟ್ಟಾರೆ ವ್ಯಕ್ತಿತ್ವ, ಬರಹ, ವೇಗದ ಬದುಕುಗಳನ್ನು ಇದಕ್ಕಿಂತ ಅರ್ಥಪೂರ್ಣವಾಗಿ ಹೇಳಲು ಸಾಧ್ಯವಿರಲಿಲ್ಲ. ನೀವೂ ಕೊಂಚ ಬಿಡುವು ಮಾಡಿಕೊಂಡು ಈ 'ಉರಿದ ಉಲ್ಕೆ'ಯನ್ನೊಮ್ಮೆ ಸ್ಪರ್ಶಿಸಿ ನೋಡಿ. ●



ವರ್ತೂರು ಪ್ರಕಾಶ್ ಮುಂದೇನು

ಸ್ಪಷ್ಟ ಬಹುಮತವಿರದ ಬಿಜೆಪಿ ಸರ್ಕಾರವನ್ನು ಬೆಂಬಲಿಸುತ್ತಿರುವ ಆರು ಮಂದಿ ಪಕ್ಷೇತರರ ಪೈಕಿ ಕೋಲಾರದ ಶಾಸಕ ವರ್ತೂರು ಪ್ರಕಾಶ್‌ಗೆ ಈಗ ಸಂದಿಗ್ಧ ಸ್ಥಿತಿ. ಯಡ್ಡಿ ಬಳಗ ಇನ್ನುಳಿದ ಐವರು ಪಕ್ಷೇತರರಿಗೂ ಕ್ಯಾಬಿನೆಟ್ ದರ್ಜೆ ಮಂತ್ರಿ ಹುದ್ದೆ ಕೊಟ್ಟಿದ್ದರೂ ಕೂಡ ವರ್ತೂರು ಪ್ರಕಾಶ್ ಮಂತ್ರಿ ಸ್ಥಾನ ಈಗಲೂ ಪೆಂಡಿಂಗ್ ಆಗಿ ಉಳಿದುಕೊಂಡಿದೆ. 2 ನೇ ಕಂತಿನ ಸಂಪುಟ ವಿಸ್ತರಣೆಯಲ್ಲಿ ಪ್ರಕಾಶ್‌ಗೆ ಸಚಿವ ಪದವಿ ಕೊಡಿಸುವುದಾಗಿ ಸೂಪರ್ ಸಿಎಂ ಜನಾರ್ದನ್ ರೆಡ್ಡಿ ಭರವಸೆ ಕೊಟ್ಟಿದ್ದಾರಂತೆ.

ಆದರೂ ಮೊದಲ ಕಂತಿನಲ್ಲೇ ಪ್ರಕಾಶ್‌ಗೇಕೆ ಮಂತ್ರಿ ಸ್ಥಾನ ಸಿಗಲಿಲ್ಲವೆಂಬುದು ಯಕ್ಷ ಪ್ರಶ್ನೆ?

ಪ್ರಕಾಶ್ ಬೆಂಬಲ ಇರದಿದ್ದರೂ ಬಿಜೆಪಿ ಸರಳ ಬಹುಮತ ಸಾಬೀತುಮಾಡುವ ಸುಸ್ಥಿತಿಯಲ್ಲಿರುವಾಗ ವಿನಾಕಾರಣ ಪ್ರಕಾಶ್ ಬೆಂಬಲ ಯಾಚಿಸಿ ಒಂದು ಮಂತ್ರಿ ಪದವಿಯನ್ನೇಕೆ ಖರ್ಚು ಮಾಡಿಕೊಳ್ಳಬೇಕೆಂದು ಬಿಜೆಪಿ ಯೋಚಿಸುತ್ತಿದೆ ಎಂಬುದು ಒಂದು ತರ್ಕವಾಗಿದೆ. ಆದರೆ ವಿಷಯ ಅಷ್ಟು ಸರಳವಾಗಿಲ್ಲ.

'ನಾನೇ ಸಿಎಂ ಕ್ಯಾಂಡಿಡೇಟ್' ಅಂತ ಪ್ರಕಾಶ್ ಹೇಳಿಕೊಂಡರೆಂದು ವಿಜಯ ಕರ್ನಾಟಕ ಒಂದು ಸುಳ್ಳು ವರದಿಯನ್ನು ಪ್ರಕಟಿಸಿದ್ದನ್ನು ನೀವೂ ಗಮನಿರಬಹುದು.

ಇದರ ಹಿಂದೆ ಒಂದು ವ್ಯವಸ್ಥಿತ ಪಿತೂರಿ ನಡೆದಿರುವ ಸಾಧ್ಯತೆ ಕಾಣಿಸುತ್ತಿದೆ.

ಯಾಕೆಂದರೆ ಈಗಿರುವ ಆರು ಪಕ್ಷೇತರರಲ್ಲಿ ಸ್ವಲ್ಪ ಸ್ವಂತಿಕೆ, ಛಲ, ಧೈರ್ಯವಿರುವ ಒಬ್ಬರೇ ಶಾಸಕರೆಂದರೆ ಅದು ವರ್ತೂರು ಪ್ರಕಾಶ್ ಮಾತ್ರ. ಜೊತೆಗೆ ಈ ಪ್ರಕಾಶ್ ಎಲೆಕ್ಷನ್ ಗೆದ್ದ ನಂತರ ನೇರ ಹೋಗಿ ಭೇಟಿಯಾಗಿದ್ದು ಕಾಂಗ್ರೆಸ್ ನಾಯಕ ಸಿದ್ಧರಾಮಯ್ಯನವರನ್ನು! ಅಷ್ಟೇ ಅಲ್ಲ ಸಿದ್ಧರಾಮಯ್ಯ ಸಿಎಂ ಆಗುತ್ತಾರೆಂದರೆ ಕಾಂಗ್ರೆಸ್-ಜೆಡಿಎಸ್ ಮೈತ್ರಿಕೂಟಕ್ಕೆ ತನ್ನ ಬೆಂಬಲವಿದೆ ಎಂತಲೂ ಪ್ರಕಾಶ್ ಬಹಿರಂಗವಾಗೇ ಘೋಷಿಸಿದ್ದರು. ಅವತ್ತು ಮಳವಳ್ಳಿಯ ಪಕ್ಷೇತರ ಶಾಸಕ ನರೇಂದ್ರ ಸ್ವಾಮಿಯೂ ಜೊತೆಗಿದ್ದರಾದರೂ ಅವರ ಧ್ವನಿ ಪ್ರಕಾಶ್‌ರಷ್ಟು ದೃಢವಾಗಿರಲಿಲ್ಲ.

ಆದರೆ ಯಾವಾಗ ಸಿಎಂ ಸ್ಥಾನಕ್ಕೆ ಸಿದ್ದು ಹೆಸರು ತೇಲಿಬಂತೋ ಎಸ್.ಎಂ. ಕೃಷ್ಣ ತಟಸ್ಥರಾಗಿಬಿಟ್ಟರು. ಹಾಗೆ ನೋಡಿದರೆ ರಾಜ್ಯ ಕಾಂಗ್ರೆಸ್ ಲೀಡರುಗಳು ಗಟ್ಟಿ ನಿರ್ಧಾರ ಮಾಡಿದಿದ್ದರೆ ಪಕ್ಷೇತರರು ಇಷ್ಟು ಸುಲಭವಾಗಿ ಬಿಜೆಪಿ ಕ್ಯಾಂಪ್ ಸೇರುತ್ತಿರಲಿಲ್ಲ. ಏಕೆಂದರೆ ಗೆದ್ದ ಆರರಲ್ಲಿ ನಾಲ್ವರು ಬಂಡಾಯ ಕಾಂಗ್ರೆಸ್ಸಿಗರಾಗಿದ್ದರು. ಅವರಲ್ಲಿ ವರ್ತೂರು ಪ್ರಕಾಶ್, ನರೇಂದ್ರ ಸ್ವಾಮಿ ಸಿದ್ಧರಾಮಯ್ಯನವರ ಹಿಂಬಾಲಕರಾಗಿದ್ದರು. ಇನ್ನು ಹಿರಿಯೂರಿನ ಡಿ. ಸುಧಾಕರ್ ಅಂತೂ ಡಿ.ಕೆ. ಶಿವಕುಮಾರ್‌ನ ಖಾಸಾ ದೋಸ್ತ್ ಹಾಗೂ ಬ್ಯುಸಿನೆಸ್ ಪಾರ್ಟ್‌ನರ್ ಕೂಡಾ ಆಗಿರುವಾತ. ಪಾವಗಡದ ವೆಂಕಟರವಣಪ್ಪ ಹೇಳಿಕೇಳಿ ಕಾಂಗ್ರೆಸ್ಸಿಗನೇ ವಿನಃ ಬಿಜೆಪಿಯೇನಾಗಿರಲಿಲ್ಲ. ಇನ್ನುಳಿಯುವ ಹೊಸದುರ್ಗದ ಗೂಳಿಹಟ್ಟಿ ಶೇಖರ್ ಬಂಡಾಯ ಜೆಡಿಎಸ್‌ನಿಂದ ಗೆದ್ದಿದ್ದನಾದ್ದರಿಂದ ಕುಮಾರಸ್ವಾಮಿ ಆತನನ್ನು ತಮ್ಮ ಕ್ಯಾಂಪಿಗೆ ಎಳೆತರಬಹುದಿತ್ತು. ಆತ ಒಪ್ಪದೆ ಬಿಜೆಪಿ ಪರ ತತ್ಕಾಲಿಕವಾಗಿ ನಿಂತಿದ್ದರೂ ಸಮಸ್ಯೆ ಇರುತ್ತಿರಲಿಲ್ಲ. ಹೀಗಾಗಿ ಬಿಟ್ಟದಿದ್ದರೆ ಬಿಜೆಪಿಗೆ 110+2 ಹಾಗೂ ಕಾಂಗ್ರೆಸ್ ದಳದ 80+28 ಮತ್ತು ನಾಲ್ವರು ಪಕ್ಷೇತರರು ಸೇರಿ ಈ ಕ್ಯಾಂಪಿನಿಂದಲೂ 112 ಸದಸ್ಯರಿರುತ್ತಿದ್ದರು. ಆಗ ಯಾವ ಕ್ಯಾಂಪ್‌ನವರು ಎಷ್ಟು ದೃಢವಾಗಿ ನಿಂತು ಮುನ್ನುಗ್ಗುತ್ತಿದ್ದರೋ ಅಧಿಕಾರ ಅವರದಾಗಿರುತ್ತಿತ್ತು. ಕಾಂಗ್ರೆಸ್‌ಗೆ ನಿಸ್ಸಂಶಯವಾಗಿ ಆ ಅವಕಾಶವಿತ್ತು. ಆದರೆ ಸಿದ್ಧರಾಮಯ್ಯ ನಾಯಕತ್ವದಲ್ಲಿ ಇಂಥ ಒಂದು ಸಮ್ಮಿಶ್ರ ಸರ್ಕಾರ ಆಗುವುದು ಕೃಷ್ಣ, ಖರ್ಗೆ, ಡಿಕೆಶಿ ಹಾಗೂ ಜಿ. ಪರಮೇಶ್ವರ್‌ಗೆ ಸುತಾರಾಂ ಬೇಕಿರಲಿಲ್ಲ. ಹಾಗಾಗಿ ಕಾಂಗ್ರೆಸ್ ಹೈಕಮಾಂಡಿಗೆ ಇದೇ ಸುದ್ದಿ ರವಾನೆಯಾಗುವಂತೆ ಕೃಷ್ಣ ಏರ್ಪಾಡು ಮಾಡಿಬಿಟ್ಟರು.

ಈ ನಡುವೆ ಏನಾಯಿತೆಂದರೆ ಈ ಎಲ್ಲಾ ಬೆಳವಣಿಗೆಗಳ ವಾಸನೆಯನ್ನು ಹೇಗೋ ಪತ್ತೆಹಚ್ಚಿದ ನರೇಂದ್ರ ಸ್ವಾಮಿ ದಿಢೀರೆಂದು ತಾವೊಬ್ಬರೆ ಹೋಗಿ ಯಡ್ಡಿ ಭೇಟಿ ಮಾಡಿ ಬೆಂಬಲ ಘೋಷಿಸಿ ಸಹಿ ಮಾಡಿಬಂದುಬಿಟ್ಟರು. ಅಷ್ಟರಲ್ಲಿ ವೆಂಕಟರವಣಪ್ಪ, ಶೇಖರ್, ಸುಧಾಕರ್‌ರನ್ನು ಮಾತಾಡಿಸುವ ತೊಂದರೆಯನ್ನು ಯಾವ ಕಾಂಗ್ರೆಸ್ ನಾಯಕರು ತೆಗೆದುಕೊಳ್ಳದ ಕಾರಣ ಅವರೂ ಬಿಜೆಪಿ ಕ್ಯಾಂಪಿನತ್ತ ಒಲ್ಲದ ಮನಸ್ಸಿನಿಂದಲೇ ಹೋದರು. ಹಾಗೇ ಹೋಗಿ ಬಿಜೆಪಿ ಬೆಂಬಲದ ಕ್ಯಾಂಪಿಗೆ ಸೇರಿಕೊಂಡವರ ಪೈಕಿ ಕೊನೆಯ ಸದಸ್ಯನೇ ಈ ವರ್ತೂರು ಪ್ರಕಾಶ್. ಅಷ್ಟರಲ್ಲಿ ಬಿಜೆಪಿಗೂ ಐವರು ಪಕ್ಷೇತರರ ಬೆಂಬಲವಿದ್ದರೆ ಸರಳ ಬಹುಮತ ಸಾಬೀತು ಮಾಡಲು ಸಾಕು ಎನಿಸಿತ್ತು. ಹಾಗಾಗಿ ಅವರಿಗೆಲ್ಲಾ ಮಂತ್ರಿಗಿರಿ ನೀಡಿ ಈಗ ಪ್ರಕಾಶರ ವಿಚಾರ ಪೆಂಡಿಂಗ್ ಇಟ್ಟಿದ್ದಾರೆ. ವರ್ತೂರ್ ಪ್ರಕಾಶ್ ಬಗ್ಗೆ ಬಹುಶಃ ಬಿಜೆಪಿಗಿರುವ ಆತಂಕ ಏನೆಂದರೆ ಮುಂದೆಂದಾದರೂ ಈ ಪ್ರಕಾಶ್ ಇತರ ಪಕ್ಷೇತರರ ಮನ ಒಲಿಸಿ ಕಾಂಗ್ರೆಸ್ ಕ್ಯಾಂಪಿಗೆ ಹಾರಿಬಿಟ್ಟರೆ ಸರ್ಕಾರ ಉಳಿಯದು ಎಂದಿರಬಹುದು. ಆದರೆ ಈ ಪ್ರಕಾಶ್ ಸ್ವಭಾವ ಕಂಡಿರುವ ಜನ ಹೇಳುವುದೇನೆಂದರೆ 'ಈತ ಆಡಿದ ಮಾತಿಗೆ ತಪ್ಪುವವನಲ್ಲ, ಬಿಜೆಪಿಗೆ ಬೆಂಬಲ ಅಂದರೆ ಅದಕ್ಕೆ ಅಂಟಿಕೊಳ್ಳುವ ಮನುಷ್ಯ' ಎಂದು.

ನೇರ ಮಾತಿನ ಪ್ರಕಾಶ್‌ಗೆ ರಾಜಕೀಯ ಪಿತೂರಿ, ತಂತ್ರಗಾರಿಕೆಗಳೇನು ಗೊತ್ತಿಲ್ಲ. ಈಗ ಬಿಜೆಪಿಗಳು ಪ್ರಕಾಶ್‌ಗೆ ಮಂತ್ರಿ ಪದವಿ ನೀಡಿ ಜೊತೆಯಲ್ಲಿಟ್ಟುಕೊಂಡರೆ ಒಂದರ್ಥದಲ್ಲಿ ಕ್ಷೇಮ. ಇಲ್ಲದಿದ್ದರೆ ವಿನಾಃಕಾರಣ ಒಬ್ಬರನ್ನು ದೂರ ಮಾಡಿಕೊಂಡಂತಗುವುದಲ್ಲದೆ ನಾಳೆ ಬಿಜೆಪಿ ಸಂಖ್ಯಾಬಲದಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಆಗ ಬಿಕ್ಕಟ್ಟು ಎದುರಾಗದೆ ಇರದು.

ವರ್ತೂರು ಪ್ರಕಾಶ್ ಮಾತ್ರ "ಕೋಲಾರದ ಜನ ನನ್ನ ಗೆಲ್ಲಿಸಿದ್ದಾರೆ, ಸಚಿವ ಸ್ಥಾನ ಸಿಗಲಿ ಬಿಡಲಿ ನಾನು ಈಗ ಬಿಜೆಪಿ ಜೊತೆಗೇ ಇದ್ದು ಕ್ಷೇತ್ರದ ಅಭ್ಯರ್ಥಿಗೆ ದುಡಿಯುತ್ತೇನೆ" ಎಂದು ತೀರ್ಮಾನ ಮಾಡಿದ್ದಾರೆ.

ಸದ್ಯಕ್ಕಂತೂ ಬಿಜೆಪಿಗಳಿಗೆ ಪ್ರಕಾಶ್‌ರಿಂದ ಯಾವುದೇ ತೊಂದರೆ ಇದ್ದಂತಿಲ್ಲ.

■ ಬಿಳಿದಾಳೆ ಪಾರ್ವತೀಶ

ಕಟ್ಟಾ ಬಯಸಿದ್ದೇ ಒಂದು ವಿಧಿ ಬಗೆದದ್ದೇ ಮತ್ತೊಂದು




ಕೆಲವೊಮ್ಮೆ ಸಂತಸ ಕೊಡುವ ಅದೇ ಸುದ್ದಿ ನೋವನ್ನೂ ತರುತ್ತದೆ.

ಸಂತೋಷದ ಸುದ್ದಿಯೆಂದರೆ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡುವಿಗೆ ಮಂತ್ರಿಗಿರಿ ತಪ್ಪಿದ್ದು ಮತ್ತು ದುಃಖದ ಸಂಗತಿಯೇನೆಂದರೆ ಕಟ್ಟಾ ಕ್ಯಾನ್ಸರ್‌ಗೆ ತುತ್ತಾಗಿ ಹಾಸಿಗೆ ಹಿಡಿದಿದ್ದು! (ಕಟ್ಟಾಗೆ ಬೆನ್ನುನೋವು ಎಂದು ಹೇಳಲಾಗುತ್ತಿದೆಯಾದರೂ ಅವರಿಗೆ ಬೋನ್‌ಮ್ಯಾರೊ ಕ್ಯಾನ್ಸರ್ ಆಗಿದೆ ಎಂದು ಹಲವು ಮೂಲಗಳು ಹೇಳುತ್ತಿವೆ)

ಯಡ್ಡಿ ಪ್ರಮಾಣವಚನದ ಮುನ್ನಾ ದಿನದ ಸಂಭಾವ್ಯ ಮಂತ್ರಿಗಳ ಪಟ್ಟಿಯಲ್ಲಿ ಕಟ್ಟಾ ಹೆಸರೇ ನಾಪತ್ತೆಯಾಗಿತ್ತು. ಅದಕ್ಕೆ ಸಮತಾ ಸೈನಿಕ ದಳದ ನಾಯಕ ವೆಂಕಟಸ್ವಾಮಿ ಹಾಕಿದ ಧಮಕಿಯೇ ಕಾರಣವೆಂದು ಅನೇಕರು ಭಾವಿಸಿದ್ದು ಕೂಡ ತಪ್ಪಾಗಿತ್ತು. ಒಂದೆಡೆ ಯಡ್ಡಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದರೆ ಮತ್ತೊಂದೆಡೆ ದಲಿತರ ಭೂಮಿ ಕಬಳಿಸಿದ ಕಟ್ಟಾನನ್ನು ಮಂತ್ರಿ ಮಾಡಕೂಡದೆಂದು ಸಮತಾ ಸೈನಿಕ ದಳ ಪ್ರತಿಭಟನೆ ನಡೆಸಿತ್ತು. ಕೊನೆಗೂ ಕಟ್ಟಾ ಮಂತ್ರಿಯಾಗಲಿಲ್ಲ. ಅಷ್ಟೇ ಏಕೆ ಯಡ್ಡಿಯ ಪ್ರಮಾಣ ವಚನದುದ್ದಕ್ಕೂ ಕಟ್ಟಾ ಮುಖವೇ ಪತ್ತೆಯಿರಲಿಲ್ಲ.

ಅದು ಕ್ಯಾನ್ಸರ್



ಹೆಬ್ಬಾಳದಲ್ಲಿ ಸರಿಸುಮಾರು ಮೂರು ಸಾವಿರ ಮತಗಳಿಂದ ಕಾಂಗ್ರೆಸ್ ನಾಯಕ ರೇವಣ್ಣನವರನ್ನು ಸೋಲಿಸಿದ್ದ ಕಟ್ಟಾ ಚುನಾವಣೆಯ ಫಲಿತಾಂಶ ಬರುವ ಮುನ್ನವೇ ಕೇರಳದ ಕೊಟಕ್ಕಲ್‌ನ ಆಸ್ಪತ್ರೆಯೊಂದರಲ್ಲಿ ಕ್ಯಾನ್ಸರ್ ಉಲ್ಬಣಿಸಿ ಹಾಸಿಗೆ ಹಿಡಿದಿದ್ದರು. ಇನ್ನೇನು ಫಲಿತಾಂಶ ಹೊರಬಿದ್ದು ಯಡ್ಡಿ ಮುಖ್ಯಮಂತ್ರಿಯಾಗೇಬಿಟ್ಟರು ಎನ್ನುವಾಗ ಕಟ್ಟಾರನ್ನು ಚಿಕಿತ್ಸೆಗೆಂದು ಆಸ್ಟ್ರೇಲಿಯಾಕ್ಕೆ ಸಾಗಿಸಲಾಗಿತ್ತು. ಹಾಗಿದ್ದೂ ಮಂತ್ರಿಯಾಗುವ ಹುಚ್ಚು ಬಿಡದೇ ಪ್ರಮಾಣವಚನದ ಹಿಂದಿನ ರಾತ್ರಿಯಷ್ಟೇ ಕಟ್ಟಾ ಬೆಂಗಳೂರಿಗೆ ಬಂದುಬಿಟ್ಟರು. ಒಮ್ಮೆ ಮಂತ್ರಿ ಅಂತ ಪ್ರಮಾಣವಚನ ಸ್ವೀಕರಿಸಿಬಿಟ್ಟರೆ ಇಡೀ ಚಿಕಿತ್ಸೆಯ ಖರ್ಚೆಲ್ಲ ಸರ್ಕಾರಿ ಬೊಕ್ಕಸದಿಂದ ನೆರವೇರುತ್ತದೆ. ಜೊತೆಗೆ ಮಂತ್ರಿಗಿರಿಯೂ ದಕ್ಕುತ್ತದೆ. ಇಂಥ ಲೆಕ್ಕ ಹಾಕಿಯೇ ತನ್ನ ಪಾರ್ಟ್‌ನರ್ ವೆಂಕಯ್ಯ ನಾಯ್ಡುವನ್ನು ಛೂಬಿಟ್ಟು ಯಡ್ಡಿಯ ಮೇಲೆ ಒತ್ತಡ ಹಾಕಿಸಿದ ಕಟ್ಟಾ ಯಾವುದಕ್ಕೂ ಇರಲೆಂದು ಹತ್ತು ಸಾವಿರ ಜನರನ್ನು ಸೇರಿಸಿ ವಿಧಾನಸೌಧಕ್ಕೆ ಮೆರವಣಿಗೆ ತೆಗೆಯಲು ಎಲ್ಲ ಸಿದ್ಧತೆ ನಡೆಸಿದ್ದರು.


ಗ್ರಹಚಾರ ಕೈಕೊಟ್ಟರೆ ಯಾರು ತಾನೇ ಏನು ಮಾಡಲು ಸಾಧ್ಯ?

ಕಟ್ಟಾ ಹಾಸಿಗೆ ಹಿಡಿದಿದ್ದನ್ನು ಮೊದಲೇ ಅರಿತಿದ್ದ ಯಡ್ಡಿ ಒಂದೇ ಮಾತಲ್ಲಿ 'ನಾನು ಅಡ್ವಾಣೀಜಿ ಹತ್ರ ಮಾತಾಡಿದ್ದೀನಿ, ಬೇಕಿದ್ದರೆ ನೀವು ಅವರನ್ನೇ ಕೇಳಿಕೊಳ್ಳಿ' ಎಂದು ವೆಂಕಯ್ಯ ನಾಯ್ಡು ಬಾಯಿ ಮುಚ್ಚಿಸಿಬಿಟ್ಟರು. ಇನ್ನು ಮನೆಮುಂದೆ ಸೇರಿದ್ದ ಹತ್ತು ಸಾವಿರ ಬೆಂಬಲಿಗರು ಕಟ್ಟಾಗೆ ಮಂತ್ರಿಗಿರಿ ಕೊಡುವಂತೆ ವಿಧಾನಸೌಧಕ್ಕೆ ಮೆರವಣಿಗೆ ಬಂದರೆ ಅಲ್ಲಾಗಲೇ ಮೂರು ಲಕ್ಷಕ್ಕೂ ಅಧಿಕ ಬಿಜೆಪಿ ಬೆಂಬಲಿಗರು ಪ್ರಮಾಣವಚನಕ್ಕೆಂದು ಸೇರಿದ್ದರು. ವಿಧಾನಸೌಧದ ಸುತ್ತಾ ಆ ಜನಸಾಗರದಲ್ಲಿ ಕಟ್ಟಾ ಬೆಂಬಲಿಗರೇ ಕಳೆದುಹೋದರು. ಅದೇ ಹೊತ್ತಿಗೆ ವೆಂಕಯ್ಯ ನಾಯ್ಡುವೂ ಕೈಚೆಲ್ಲಿಬಿಟ್ಟಿದ್ದ. ಬಂದ ದಾರಿಗೆ ಸುಂಕವಿಲ್ಲದಂತೆ ಮತ್ತೆ ಆಸ್ಟ್ರೇಲಿಯಾದ ಆಸ್ಪತ್ರೆಗೆ ವಾಪಸ್ಸಾದ ಕಟ್ಟಾನ ಟೈಮೇ ಕೆಟ್ಟಿರಬೇಕು.

ರೋಷನ್‌ಬೇಗ್ ಜೊತೆ ಕೈಜೋಡಿಸಿ ಹೆಬ್ಬಾಳಕ್ಕೆ ಟಿಕೆಟ್ ಪಡೆದದ್ದು, ಹತ್ತು ಕೋಟಿಯಷ್ಟು ಸುರಿದು ಹತ್ತಾರು ಸ್ಲಮ್ಮುಗಳನ್ನು ಕ್ಯಾಪ್ಚರ್ ಮಾಡಿದ್ದು, ಆಂಧ್ರದಿಂದ ಕರೆಸಿದ ಕಳ್ಳ ಓಟರುಗಳೆಲ್ಲ ಪೊಲೀಸರಿಗೆ ಸಿಕ್ಕಿಬಿದ್ದಿದ್ದು, ಕೊನೆಗೆ ಕಾಂಗ್ರೆಸ್ಸಿಗೆ ಓಟು ಹಾಕದಂತೆ ಮುಸ್ಲಿಮರ ಗುರುತಿನ ಚೀಟಿಗಳನ್ನು ತಲಾ ಎರಡು ಸಾವಿರದಿಂದ ಐದು ಸಾವಿರದವರೆಗೂ ತೆತ್ತು ಖರೀದಿಸಿದ್ದು ಗೆಲ್ಲಲು ಕಟ್ಟಾ ಮಾಡಿದ ಹಾವಳಿಗಳು ಒಂದಾ ಎರಡಾ? ಭಾರೀ ಕೈಗಾರಿಕಾ ಮಂತ್ರಿಯಾಗಿ ನಕಲಿ ಕಂಪೆನಿಗಳ ಹೆಸರಲ್ಲಿ ದಲಿತರ ಭೂಮಿ ದೋಚಿದ್ದು, ತನ್ನ ಛೇಲಾಗಳಿಗೆಲ್ಲ ಒಂದೊಂದು ಕಳ್ಳ ಕಂಪೆನಿಯ ಹೆಸರಲ್ಲಿ ರೈತರ ಭೂಮಿ ಕಿತ್ತುಕೊಟ್ಟದ್ದು, ಚಿಕ್ಕನಾಗಮಂಗಲದ ಕೆರೆ ಭೂಮಿ ನುಂಗಿದ್ದು, ದೊಡ್ಡ ನಾಗಮಂಗಲದಲ್ಲಿ ಅರಣ್ಯ ಭೂಮಿ ಕಬಳಿಸಿದ್ದು, ಪ್ರಶ್ನಿಸಿದ ಕಂದಾಯ ಅಧಿಕಾರಿಯ ಮೇಲೆ ಮಗ ಜಗ್ಗನನ್ನು ಬಿಟ್ಟು ಗೂಂಡಾಗಿರಿ ನಡೆಸಿದ್ದು; ಇಷ್ಟೆಲ್ಲವನ್ನೂ ದಕ್ಕಿಸಿಕೊಂಡು ಹೆಬ್ಬಾಳದಿಂದ ಗೆದ್ದಿದ್ದು; ಇತ್ಯಾದಿ ಏನೆಲ್ಲಾ ಕಟ್ಟಾ ಕಬಳಿಸುತ್ತಲೇ ಬಂದರೋ ಅದೇ ವಿಷವಾಗಿ ಉಲ್ಟಾ ಹೊಡೆದಿದೆ.

ತಾನೊಂದು ಬಗೆದರೆ ವಿಧಿಯೇ ಮತ್ತೊಂದು ಬಗೆದಿದೆ. ಇದೇನೇ ಇರಲಿ, ಕಟ್ಟಾ ಆದಷ್ಟು ಬೇಗ ಗುಣಮುಖರಾಗಲಿ.

■ ರಾ.ಸೋ.



ಸಂದರ್ಶನ

ನಾನು ಕೊಲೆ ಮಾಡಿಲ್ಲ

ರಾಜ್ಯ ರಾಜಕೀಯದಲ್ಲಿ ಮೈಸೂರು ಜಿಲ್ಲೆ ಪ್ರಮುಖ ಸ್ಥಾನ ವಹಿಸುತ್ತಾ ಬಂದಿದೆ. ಈ ಬಾರಿ ರಚನೆಗೊಂಡಿರುವ ಬಿಜೆಪಿ ಸರ್ಕಾರ ಮೈಸೂರು ಜಿಲ್ಲೆಗೆ ಯಾವುದೇ ಸ್ಥಾನಮಾನ ನೀಡಿಲ್ಲ. ಈ ಹಿನ್ನೆಲೆಯಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಆಯ್ಕೆಗೊಂಡು ಸಚಿವ ಸ್ಥಾನದಿಂದ ವಂಚಿತರಾದ ಎಚ್.ಎಸ್. ಶಂಕರಲಿಂಗೇಗೌಡರನ್ನು ಪತ್ರಿಕೆ ಸಂದರ್ಶಿಸಲಾಯಿತು.

* *ನಿಮಗೆ ಸಚಿವ ಸ್ಥಾನ ಕೈತಪ್ಪಲು ಕಾರಣ ಏನು?*

ನನ್ನ ಏಳಿಗೆಯನ್ನು ಸಹಿಸದ ನಮ್ಮವರೇ ಕೆಲವರು ನನ್ನ ವಿರುದ್ಧ ಪಿತೂರಿ ನಡೆಸಿ, ನನ್ನ ವಿರುದ್ಧ ಯಡಿಯೂರಪ್ಪ ಹಾಗೂ ಪಕ್ಷದ ವರಿಷ್ಠರಿಗೆ ಇಲ್ಲ ಸಲ್ಲದ್ದು ಹೇಳಿ ನನಗೆ ಸಚಿವ ಸ್ಥಾನ ತಪ್ಪಿಸಿದರು.

* *ನಿಮಗೆ ಸಚಿವ ಸ್ಥಾನ ನೀಡಲು ಕೆಲವು ಸಮಸ್ಯೆಗಳಿವೆ ಎಂದು ಜಿಲ್ಲಾಧ್ಯಕ್ಷರು ಹೇಳಿದ್ದಾರಲ್ಲ?*

ಏನು ಸಮಸ್ಯೆ? ನಾನೇನು ಇಸ್ಪೀಟ್ ಆಡಲ್ಲ, ಕ್ಲಬ್‌ಗೆ ಹೋಗಲ್ಲ, ಬಾರ್‌ಗೆ ಹೋಗಲ್ಲ, ಸಿಗರೇಟ್ ಸೇದಲ್ಲ, ಕಳ್ಳ ಅಲ್ಲ, ಸುಳ್ಳ ಅಲ್ಲ, ಗಾಂಜ ಮಾರಲ್ಲ, ಕೊಲೆಗಡುಕರಿಗೆ ಬೆಂಬಲ ನೀಡಲ್ಲ, ಭೂ ಮಾಫಿಯಾ ನಡೆಸಲ್ಲ, ನನ್ನಲ್ಲಿ ನ್ಯೂನತೆ ಏನಿದೆ?

ನನ್ನಲ್ಲಿ ಹಣಬಲ ತೋಳ್ಬಲ ಇಲ್ಲ, ನನ್ನಲ್ಲಿರುವುದು ಜನ ಬೆಂಬಲ ಮಾತ್ರ. ನಾನು ಈ ಕ್ಷೇತ್ರದ watch dog ಇದ್ದಂಗೆ.

* *ಯಡಿಯೂರಪ್ಪ ಏನಂದ್ರು?*

ಅವರು ದೇವಸ್ಥಾನ ಪೂಜೆಗೆ ಹೋಗಿ ಬಂದಿದ್ರು. ನಾನು ಅವರನ್ನು ಸಚಿವರನ್ನಾಗಿ ಮಾಡಲು ವಿನಂತಿಸಿದೆ. ಅವರು ಆಕ್ರೋಶ ಹಾಗು ಕೋಪದಿಂದ "ಒಳ್ಳೆಯ ಕೆಲಸಕ್ಕೆ ಹೋಗುತ್ತಿದ್ದೇವೆ. ವಿಘ್ನ ತರ ಬೇಡ" ಎಂದರು. ಇದರಿಂದ ನಾನು ಕೋಪಗೊಂಡೆ. ಅನ್ಯಾಯದ ವಿರುದ್ಧ ಸಿಡಿದೇಳುವುದು ನನ್ನ ಸಹಜ ಗುಣ.

* *ಪ್ರಥಮ ಬಾರಿ ಆರಿಸಿ ಬಂದವರಿಗೆ, ಭೂ ಮಾಫಿಯಾದವರಿಗೆ ಸ್ಥಾನ ನೀಡಲಾಗಿದೆ. ಆದರೆ.....*

ಯಡಿಯೂರಪ್ಪ ಯಾರಿಗೆ ನೀಡಿದ್ದರೂ ನನ್ನ ಆಕ್ಷೇಪವಿಲ್ಲ, ಆದರೆ ನಾನು ಹೇಳಿರುವುದು ನಾನು ಕೊಲೆಗಡುಕ ಅಲ್ಲ, ಗಾಂಜ ಮಾರಲ್ಲ, ಭೂ ಮಾಫಿಯಾ ಅಲ್ಲ ಅಷ್ಟೆ. ನಾನು ಯಾವ ಅನ್ಯಾಯ ಮಾರ್ಗ ಹಿಡಿದಿಲ್ಲ, ಯಾರಿಗೂ ಮೋಸ ಮಾಡಿಲ್ಲ, ಸತ್ಯ ನ್ಯಾಯಕ್ಕೆ ಸಂದಿರುವ ಪ್ರತಿಫಲ ಇಷ್ಟೆ.

* ***RSS ಜೊತೆಗಿನ ನಿಮ್ಮ ಸಂಬಂಧ ಚೆನ್ನಾಗಿಲ್ಲ, ಆ ಕಾರಣ....***

ಇಲ್ಲ ಇಲ್ಲ RSS ನ ಬಹಳ ಪ್ರಮುಖರು ನನಗೆ ಟಿಕೆಟ್ ನೀಡಲು ಸಹಾಯ ಮಾಡಿದ್ದಾರೆ. RSS ಒಂದು ದೇಶ ಕಟ್ಟುವ ಸಂಘ. ಈ ಸಂಘಟನೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ನಾನು ನನ್ನ ಮಗ ಭಾಗವಹಿಸಿದ್ದೇವೆ. ಅನೇಕ ಬಾರಿ ನನ್ನ ವಿರುದ್ಧ ಹಲವರು ಚಾಡಿ ಹೇಳಿದಾಗ RSS ನನ್ನ ಸಹಾಯಕ್ಕೆ ಬಂದಿದೆ.

* *ನೀವು ಯಾರ ಬಣ, ಅನಂತಕುಮಾರ್ ಅಥವಾ ಯಡಿಯೂರಪ್ಪ?*

ನಾನು ಯಾರ ಬಣವೂ ಅಲ್ಲ, ನಾನು ಬಿಜೆಪಿ ಪಕ್ಷದ ಶಿಸ್ತಿನ ಸಿಪಾಯಿ. ಬಿಜೆಪಿ ಬಯಸುವವರೆಗೆ ಪಕ್ಷದಲ್ಲಿ ಇರುತ್ತೇನೆ. ಬೇಡ ಅಂದ್ರೆ ಮನೆಯಲ್ಲೇ ಇರ್ತೇನೆ. ನಾನು ರಾಜ್ಯ ಮಟ್ಟದಲ್ಲಿ ಹಾಗು ದೆಹಲಿ ಮಟ್ಟದಲ್ಲಿ ಯಾರ ಬಳಿಯೂ ಲಾಬಿ ಮಾಡಿಲ್ಲ, ಯಡಿಯೂರಪ್ಪನವರೇ ನನ್ನನ್ನು ಪಕ್ಷಕ್ಕೆ ತಂದ್ರು. ಸೀಟು ಕೊಟ್ರು. ಪ್ರತಿಬಾರಿ ಟಿಕೆಟ್ ಪಡೆಯಲು ಸಹಾಯ ಮಾಡಿದ್ದಾರೆ. ಆದರೆ ಈಗ ಅವರಿವರ ಮಾತು ಕೇಳಿ ನನಗೆ ಅನ್ಯಾಯ ಮಾಡಿದ್ದಾರೆ.

* *ಹಿಂದಿನಿಂದಲೂ ಮೈಸೂರು ಜಿಲ್ಲೆಯ ಆಡಳಿತ ಪಕ್ಷದ ಶಾಸಕರಿಗೆ ಪ್ರಮುಖ ಸ್ಥಾನ ನೀಡಲಾಗುತ್ತಿತ್ತು, ಈಗ ಹೇಗೆ?*

ಹೌದು. ಎಲ್ಲಾ ಪಕ್ಷಗಳಿಂದಲೂ ಮೈಸೂರು ಜಿಲ್ಲೆಯ ಶಾಸಕರಿಗೆ ಸಚಿವ ಸಂಪುಟದಲ್ಲಿ ಪ್ರಮುಖ ಸ್ಥಾನ ನೀಡಲಾಗುತ್ತಿತ್ತು, ಆದರೆ ಈಗ ನಮ್ಮನ್ನು ನಿರ್ಲಕ್ಷಿಸಿದ್ದಾರೆ. ಆದ್ದರಿಂದಲೇ ಮೈಸೂರಿನ ಜನತೆ ಪ್ರತಿಭಟನೆಗೆ ಇಳಿದಿದ್ದಾರೆ. ನಾನು ಸಾರ್ವಜನಿಕರ ಆಸ್ತಿಪಾಸ್ತಿಗೆ ತೊಂದರೆ ಮಾಡಬೇಡಿ ಎಂದು ವಿನಂತಿಸಿಕೊಂಡಿದ್ದೇನೆ.

ಅದರಲ್ಲೂ ವಿಶೇಷವಾಗಿ ಈ ಪ್ರಾಂತ್ಯದ ಒಕ್ಕಲಿಗ ಜನಾಂಗದ ಪ್ರತಿನಿಧಿಯಾದ ನನ್ನನ್ನು ನಿರ್ಲಕ್ಷಿಸಿರುವುದರಿಂದ ಸಹಜವಾಗಿ ನನ್ನ ಜನಾಂಗದವರು ಆಕ್ರೋಶಗೊಂಡಿದ್ದಾರೆ.

* *ಪಕ್ಷ ಬಿಡ್ತೀರಾ ಅಥವಾ ಬಂಡಾಯವೇಳ್ತೀರಾ?*

ಇಲ್ಲ ಇಲ್ಲ, ಪಕ್ಷ ಬಿಡೋಲ್ಲ, ಬಿಜೆಪಿ ಬಯಸುವವರೆಗೂ ಇಲ್ಲೇ ಇರ್ತೀನಿ. ನನಗೆ ಆದ ಅನ್ಯಾಯದ ವಿರುದ್ಧ ಪ್ರತಿಭಟಿಸಿದ್ದೀನಿ ಅಷ್ಟೆ. ಯಡಿಯೂರಪ್ಪ ಐದು ವರ್ಷ ಆಡಳಿತ ಸಂಪೂರ್ಣ ಮಾಡಲಿ. ಅವರಿಗೆ ನನ್ನ ಬೆಂಬಲವಿದೆ. ಸಚಿವ ಸ್ಥಾನ ಸಿಗದಿದ್ದರೆ ಇಲ್ಲಿ ಶಾಸಕನಾಗಿ ಮುಂದುವರೆಯುತ್ತೇನೆ. ಆದರೆ ಹೊರಗಿನವರನ್ನು ತಂದು ಕೂರಿಸಿದರೆ ಪ್ರತಿಭಟಿಸುತ್ತೇನೆ.

ನಂದಿನಿ ಪೇಡ ತಿಂದು ಹಾಲು ಕುಡುದು ಹೋಗ್ರಿ

ಥೂತ್ತೇರಿ

ಯಾಹೂ

ದೇವೇಗೌಡರಿಗೆ ಮಾತ್ರ ಬೇಕಿದ್ದ ಈ ಚುನಾವಣೆಯಲ್ಲಿ ಜೆಡಿಎಸ್‌ನವರೆಲ್ಲಾ ಉದುರುತ್ತಿದ್ದರೂ ಬೇಸರಗೊಳ್ಳದ ಗೌಡರು ಕಾಂಗ್ರೆ ಕ್ಯಾಂಡಿಡೇಟ್‌ಗಳ ಗತಿಯೇನಾಯ್ತೆಂದು ತೀರ ತಲೆ ಕೆಡಿಸಿಕೊಂಡಿದ್ದರಂತಲ್ಲಾ, ಆಗ ಅವರ ಪರಮ ವೈರಿಗಳಾಗಿದ್ದ ಶ್ರೀಕಂಠಯ್ಯ, ರಮೇಶ್‌ಕುಮಾರ್, ಎಂ.ಪಿ. ಪ್ರಕಾಶ್, ಜಿ.ಟಿ. ದೇವೇಗೌಡರೆಲ್ಲಾ ಉರುಳಿ ಹೋದರು ಎಂಬುದು ಗೊತ್ತಾದ ಕೂಡಲೇ, ಒಮ್ಮೆ ತಲೆ ಸವರಿಕೊಂಡು, ತಮ್ಮ ಪಾರ್ಟಿ ಸೋಲಿನ ಆಘಾತವನ್ನು ವಿರೋಧಿಗಳ ಸೋಲಿನಲ್ಲಿ ಶಮನ ಮಾಡಿಕೊಂಡರಂತಲ್ಲಾ, ಇಷ್ಟಾದರೂ ತಾವು ಎರಡು ಬಾರಿ ಊರೂರು ಸುತ್ತಿ, ಬಿಜೆಪಿ ರೇವಣ್ಣಸಿದ್ದಯ್ಯನ ಪರ ಮಾರ್ಮಿಕವಾಗಿ ಪ್ರಚಾರ ಮಾಡಿಬಂದರೂ, ಸಿದ್ದರಾಮಯ್ಯ ಗೆದ್ದು ಬಂದಿದ್ದು ಅವರ ನಿದ್ದೆ ಕೆಡಿಸಿದೆಯಂತಲ್ಲಾ, ಥೂತ್ತೇರಿ!!

*****

ಗೌಡರು ಹೀಗೆ ನೀತಿಗೆಟ್ಟರೂ ಸುಖಪಡಬೇಕೆಂಬ ವ್ಯಸನದಲ್ಲಿ ಮುಳುಗಿರುವಾಗಲೇ ಮಾಜಿ ಸಾರಿಗೆ ಸಚಿವ ಚಲುವರಾಯಸ್ವಾಮಿ ಕ್ಷೇತ್ರದ ಕೆಲ ಹೈದರು ರೇವಣ್ಣನ ಮನೆಗೆ ಹೋಗಿ ಅಳುಕಿನಿಂದಲೇ ಇಣುಕಿ ನೋಡಿ "ಸಾರ್, ಚಲುವರಾಯಸ್ವಾಮಿ ಹೋಗಿಬುಟ್ರು" ಎಂದವಂತಲ್ಲಾ, ಕೂಡಲೇ ರೇವಣ್ಣ ಶಕುನಿಯ ಮೊಮ್ಮಗನಂತೆ ನಗುತ್ತಾ "ಏನ್ರಿ ನೀವು ಎಂಥಾ ನಾಯಕನ್ನ ಸೋಲಿಸಿದ್ದೀರಿ. ಹಿಂಗೇನ್ರಿ ಮಾಡದು. ನಮ್ಮ ಜೆಡಿಎಸ್ ಪಾರ್ಟೀಲಿ ಚಲುವರಾಯಸ್ವಾಮಿ ಒಳ್ಳೆ ಮುಖಂಡರಾಗಿದ್ರು, ಕಂದ್ರೀ. ಮುಖಂಡರನ್ನೆ ಸೋಲಿಸಿ ಮುಖ ತೋರಕ್ಕೆ ಬಂದಿದ್ದಿರಾ" ಎಂದು ಗದರಿದರಂತಲ್ಲಾ, ಕಕ್ಕಾಬಿಕ್ಕಿಯಾದ ಕಾರ್ಯಕರ್ತರು, ಈ ರಣಬಿಸಿಲಲ್ಲಿ ಕುಳಿತು ಸುದರಾಯಿಸಿಕೊಳ್ಳಲೆಂದು ಬಂದರೆ ಈ ಪಯ್ಯ ಹಿಂಗೆ ಬೈತನಲ್ಲಾ ಎಂದು ಹೊರಡುವುದರಲ್ಲಿದ್ದಾಗ, "ಕೂತುಗೊಳಿ" ಎಂದ ರೇವಣ್ಣ ನಂದಿನಿ ಪೇಡಾದ ಪ್ಯಾಕೆಟ್‌ಗಳನ್ನು ತಂದು,

"ತೊಗ್ರಿ, ವಟ್ಟೆ ತುಂಬ ತಿಂದು ಹಾಲು ಕುಡುದು ಹೋಗ್ರಿ" ಎಂದು ಕಾರ್ಯಕರ್ತರಿಗೆ ಪೇಡಾ ಹಂಚಿದರಂತಲ್ಲಾ,

"ದನ ತನ್ನೋರಿಗೆ ಅಪ್ಪಳ ಈಡೆ" ಎಂಬಂತಿದ್ದ ಸದರಿ ಕಾರ್ಯಕರ್ತರು, ಒಂದೊಂದೇ ಗುಕ್ಕಿಗೆ ಪೇಡಾ ಎಸೆದುಕೊಂಡು ತಣ್ಣನೆ ಹಾಲು ಕುದಿದಾಗ, ದೇವೇಗೌಡರ ಮಕ್ಕಳ ತಣ್ಣಗಿನ ಕ್ರೂರ ನಡವಳಿಕೆ ಅರ್ಥವಾಗಿ ದಂಗುಬಡಿದು ಹೋದವಂತಲ್ಲಾ, ಥೂತ್ತೇರಿ!!

******

ಇತ್ತ ತನ್ನ ಸೋಲಿನಿಂದ ರೇವಣ್ಣ ಮತ್ತು ದೇವೇಗೌಡರು ಸಮಾಧಾನಗೊಂಡಿರುವ ಸಂಗತಿ ತಿಳಿದ ಚಲುವರಾಯಸ್ವಾಮಿ, "ಒಂದು ಹತ್ತು ಜನ ಜೆಡಿಎಸ್ ಶಾಸಕರನ್ನು ಎಳೆದುಕೊಂಡು ಬರುತ್ತೇನೆ. ನನ್ನನ್ನು ಎಮ್ಮೆಲ್ಸಿ ಮಾಡಿ ಮಂತ್ರಿ ಮಾಡುತ್ತೀರ?" ಎಂದು ಅಶೋಕ್ ಎಂಬ ನೆಲಗಳ್ಳನಿಗೆ ಕೇಳಲಾಗಿ ಅತ ಕಿವಿ ಕೇಳಿಸದಂತಿದ್ದನಂತಲ್ಲಾ, ಆದರೆ ಪಟ್ಟು ಬಿಡದ ಚಲುವ ಪುನಃ ಪುನಃ ಕೇಳಲಾಗಿ "ಸದ್ಯಕ್ಕೆ ನಮಗೆ ದಕ್ಕಿರುವ ಆರು ಜನರನ್ನು ನಿಭಾಯಿಸಿಕೊಂಡು ಹೋದರೆ ಸಾಕಾಗಿದೆ" ಎಂದರಂತಲ್ಲಾ, ಇದರಿಂದ ತೀರಾ ನಿರಾಶೆಗೊಂಡ ಚಲುವಣ್ಣ, "ನಾನಾಗಲೇ ಬಿಜೆಪಿ ಸೇರಿದ್ದರೆ ಇಂತಹ ಸ್ಥಿತಿಯೇ ಬರುತ್ತಿರಲಿಲ್ಲ, ಕುಮಾರಣ್ಣನ ವಿಶ್ವಾಸಕ್ಕೆ ಗಂಟುಬಿದ್ದು ನನ್ನ ಗಂಟೆಲ್ಲಾ ಕರಗಿಹೋಯ್ತು" ಎಂದು ಹಲುಬಿದರಂತಲ್ಲಾ, ಥೂತ್ತೇರಿ!!

*****

ಮುಖ್ಯಮಂತ್ರಿಯಾದ ಉಮೇದಿನಲ್ಲಿ ನಾನು ಸೇಡಿನ ರಾಜಕಾರಣ ಮಾಡುವುದಿಲ್ಲ, ಎಂದು ಘೋಷಿಸಿದ ಎಡೂರಪ್ಪ, ಶಿವಮೊಗ್ಗದಲ್ಲಿ ಕೊಟ್ಟಿರುವ ಈಶ್ವರಪ್ಪನೆಂಬ ಟಗರನ್ನು ನಿಯಂತ್ರಿಸಲು ಹರಸಾಹಸ ಪಡುತ್ತಿದ್ದರೂ ಹಾಲಪ್ಪನನ್ನು ಮಂತ್ರಿ ಮಾಡಿಬಿಟ್ಟರಂತಲ್ಲಾ, ಇತ್ತ ಹುಬ್ಬಳ್ಳಿ ಶೆಟ್ಟರ್ ಆ ಭಾಗದ ಎರಡನೇ ಎಡೂರಪ್ಪನಾಗಲು ಯತ್ನಿಸಿದ್ದನ್ನು ಪತ್ತೆಹಚ್ಚಿ ಅವರನ್ನು ಮಂತ್ರಿಗಿರಿಯಿಂದ ದೂರದೂರವಿಟ್ಟರಂತಲ್ಲಾ, ಅನಂತರ ಇತ್ತ ಮೈಸೂರು ಕಡೆ ದೂದನವರಾದ ಶಂಕರಲಿಂಗೇಗೌಡರದು ನಿಜಕ್ಕೂ ಬಿಜೆಪಿ ರಾಜಕಾರಣವೋ ಅಥವಾ ಗೌಡ ರಾಜಕಾರಣವೋ ಎಂದು ಗೊಂದಲಕ್ಕೆ ಬಿದ್ದ ಎಡೂರಪ್ಪ "ನಿನ್ನ ಮುಖ ತೋರಬೇಡ ಹೋಗು" ಎಂದರಂತಲ್ಲಾ, ಕಂಗಾಲಾದ ಶಂಕರಲಿಂಗೇಗೌಡ "ಎಡೂರಪ್ಪ ನನ್ನ ಮುಖ ನೋಡದಿದ್ದರೆ ಹೆಲ್ಮೆಟ್ ಹಾಕಿಕೊಂಡು ತಿರುಗುತ್ತೇನೆಯೇ ಹೊರತು, ಬಿಜೆಪಿ ಬಿಡುವುದಿಲ್ಲ" ಎಂದುಕೊಂಡು ಮನೆಗೆ ಹೋದರೆ ಕೆಂಡಮಂಡಲವಾದ ಗೌಡರ ಸೊಸೆ, "ಏನೊ ಮೂರು ಕಾಸಿನ ಮಾವ? ಆ ಮಿಟಕಲಾಡಿ ಸೋಬಾ ಕಾರಂಜೆ ಗದ್ದೇಟಗೆ ಮಂತ್ರಿ ಆಯ್ತಳೆ. ನೀನು ನಾಕಸತಿ ಗೆದ್ರು ನಾಮಹಚ್ಗಂಡು ಬಂದಿದ್ದೀಯಲ್ಲಾ, ಸದಿ ಆಚಗೆ" ಎಂದಳಂತಲ್ಲಾ, ಥೂತ್ತೇರಿ!!

*****

ಎಡೂರಪ್ಪನವರ ನವನೂತನ ಸಚಿವ ಸಂಪುಟದ ಮಂತ್ರಿಯೊಬ್ಬರಿಗೆ ಫೋನ್ ಬಂತು; ರಿಂಗ್ ಟೋನ್:

"ಈ ಸಂಜೆ ಯಾಕಾಗಿದೆ. ನೀನಿಲ್ಲದೆ ಈ ಸಂಜೆ...."

"ಹಲೋ ಯಾರು?"

"ನಾನು ಸಾರ್."

"ನಾನು ಅಂದ್ರೆ ಯಾರು, ಹೆಸರೇಳ್ರಿ?"

"ನೀವು ಗೂಳಿಹಟ್ಟಿ ಶೇಖರ್ ಅಲ್ಲವ ಸಾರ್?"

"ಹೌದು."

"ನಾನು ಸಾರ್, ಗೋಪಾಲ್ ರೆಡ್ಡಿ, ಈ ಬಾರಿ ಮಾರ್ಕ್ಸ್‌ಕಾರ್ಡ್ ಕೆಲಸದಲ್ಲಿ ಆಗ್ಲೆ ಅಡ್ವಾನ್ಸ್ ಕಲೆಕ್ಟ್ ಮಾಡಿದ್ದಿನಿ ಸಾರ್. ನನ್ನ ಕಮಿಷನ್ ಮುರಕೊಂಡು ಉಳದದ್ದ ಎಲ್ಲಿಗೆ ಮುಟ್ಟಿಸಲಿ ಸಾರ್?"

"ರೀ ನಾನೀಗ ಮಂತ್ರಿ ಕಂದ್ರಿ, ಆ ದಂಧೆ ವಿಷಯದಲ್ಲಿ ಫೋನ್ ಮಾಡಬೇಡಿ."

"ಮಂತ್ರಿಯಾಗಿ ಬುಟ್ರ ಸಾರ್?"

"ಹೌದು ಕಂದ್ರಿ, ಚುನಾವಣೆಗೆ ನಿಂತೆ, ಗೆದ್ದೆ, ಮಂತ್ರಿಯಾದೆ. ಇದೆಲ್ಲಾನು ನನಿಗೇ ನಂಬಕ್ಕಾಗ್ತಯಿಲ್ಲ."


"ಹಾಗಾದ್ರೆ ಡೂಪ್ಲಿಕೇಟ್ ಮಾರ್ಕ್ಸ್‌ಕಾರ್ಡ್ ದಂಧೆನ ನಿಮ್ಮೆಸರಲ್ಲಿ ನಾನು ಮುಂದವರುಸ್ಲ ಸಾರ್?"

"ಅದೆಲ್ಲಾ ಮುಗದೋದ ಕತೆ. ನಾನೀಗ ಮಂತ್ರಿ. ನೀವೇನಾದ್ರು ಪುನಃ ಆ ದಂಧೆಗೆ ಕೈಹಾಕಿದ್ರೆ ಅರೆಸ್ಟು ಮಾಡಿಸಿ ಜೈಲಿಗಾಕುಸ್ತಿನಿ."


"ಆಗ ನಾವು ನಿಮ್ಮೆಸರೇಳ್ತಿವಿ!"

ಥೂತ್ತೇರಿ!!!





ಯಾರು ಗಣಿ ಲೂಟಿಯನ್ನು ತಡೆಗಟ್ಟಿ ಕನ್ನಡಿಗರ ಪಾಲಿನ ಭೂಸಂಪತ್ತನ್ನು ಅರಣ್ಯವನ್ನು ರಕ್ಷಿಸಬೇಕಿತ್ತೋ ಅಂಥ ಜಾಗಕ್ಕೆ ಗಣಿಕಳ್ಳರೇ ಬಂದು ಕೂತರೆಂದರೆ ಏನರ್ಥ? ಗಣಿ ಡಕಾಯಿತರೇ ಅರಣ್ಯ ಮಂತ್ರಿ ಮತ್ತು ಗಣಿಮಂತ್ರಿಗಳಾಗಿಬಿಟ್ಟರೆ ಇನ್ನಷ್ಟು ಭೂನಿಧಿಯನ್ನು ಕೊಳ್ಳೆ ಹೊಡೆಯಲಾರರು ಎಂಬುದಕ್ಕೆ ಏನು ಗ್ಯಾರಂಟಿ? ಹೀಗೆ ದೋಚಿದ ಸಂಪತ್ತಿನಲ್ಲೇ ನಾಳೆ ದಿನ ಯಡ್ಡಿಯನ್ನು ಹೊರದಬ್ಬಿ ತಾವೇ ಮುಖ್ಯಮಂತ್ರಿಯಾದರೆ ಗತಿಯೇನು?



ರಾ. ಸೋಮನಾಥ್

ರೆಡ್ಡಿ ಕಪಿಮುಷ್ಟಿಯಲ್ಲಿ ಯಡ್ಡಿ

ಗಣಿಕಳ್ಳರ ದಾಕ್ಷಿಣ್ಯಕ್ಕೆ ಬಸಿರಾದ ತಪ್ಪಿಗೆ ಬಿಜೆಪಿ ಮತ್ತು ಮುಖ್ಯಮಂತ್ರಿ ಯಡಿಯೂರಪ್ಪ ಒಟ್ಟೊಟ್ಟಿಗೆ ದಂಡ ಕಟ್ಟಬೇಕಾಗಿದೆ.

ಮಂತ್ರಿಗಿರಿ ಸಿಗದೇ ಬಂಡೆದ್ದ ಜಗದೀಶ್ ಶೆಟ್ಟರ್, ಶಂಕರಲಿಂಗೇಗೌಡ, ಆನೇಕಲ್ ನಾರಾಯಣಸ್ವಾಮಿ, ವಿಮಲಾಗೌಡ ಇತ್ಯಾದಿ ಬಿಜೆಪಿ ನಾಯಕರ ದಾವಾನಿಲಕ್ಕೆ ಬೇರೇನೇ ಕಾರಣಗಳಿದ್ದರೂ ಇಷ್ಟೊಂದು ಅನಿರೀಕ್ಷಿತವಾಗಿ ಇಷ್ಟು ಬೇಗನೇ ಅದು ಸ್ಫೋಟಿಸಿದ್ದು ಮಾತ್ರ ಗಣಿ ರೆಡ್ಡಿಗಳ ಕಾರಣಕ್ಕೇ-

ಇಂತಿಂಥದ್ದೇ ಜಾತಿಗೆ, ಇಂತಿಂಥದ್ದೇ ಪ್ರದೇಶಕ್ಕೆ, ಇಂತಿಂಥದ್ದೇ ಸೇವೆಗೆ, ಇಷ್ಟಿಷ್ಟೇ ಮಂತ್ರಿಗಳೆಂದು ಪಟ್ಟಿಕೊಡುವ ಯಡಿಯೂರಪ್ಪ ಯಾವ ಕಾರಣಕ್ಕೆಂದು ಒಂದೇ ಮನೆಯಿಂದ ಮೂವರನ್ನು ಕ್ಯಾಬಿನೆಟ್ ದರ್ಜೆಯ ಮಂತ್ರಿಗಳನ್ನಾಗಿ ಮಾಡಿದ್ದಾರೆಂಬುದು ಮಾತ್ರ ಚಿದಂಬರ ರಹಸ್ಯವೇ. ಮೊದಲು ಕರುಣಾಕರ ರೆಡ್ಡಿ ಆನಂತರ ಶ್ರೀರಾಮುಲು ಅದೂ ಸಾಲದೆಂಬಂತೆ ಜನಾರ್ದನ್ ರೆಡ್ಡಿ, ಹೀಗೇ ಒಂದೇ ಮನೆಯ ಮೂವರನ್ನು ಮೊದಲ ಕಂತಿನಲ್ಲೇ ಕ್ಯಾಬಿನೆಟ್ ಮಂತ್ರಿಗಳನ್ನಾಗಿ ನೇಮಿಸಬಹುದಾದರೆ; ಜಗದೀಶ್ ಶೆಟ್ಟರ್‌ರಂಥ ಮುತ್ಸದ್ದಿ ಮಾಡಿದ ತಪ್ಪಾದರೂ ಏನು?

ಇಡೀ ರಾಜ್ಯದಲ್ಲಿ ಬಿಜೆಪಿಯ ಒಬ್ಬೇ ಒಬ್ಬ ಶಾಸಕ ನಿಲ್ಲದಿದ್ದಾಗ್ಯೂ ಪಕ್ಷಕ್ಕಾಗಿ ಜೀವ ತೇದದ್ದು ವಿಮಲಾಗೌಡ. ಸತತ ನಾಲ್ಕನೇ ಬಾರಿಗೂ ಗೆದ್ದು ಮೈಸೂರಿನಂಥ ಪ್ರದೇಶದಲ್ಲಿ ಒಕ್ಕಲಿಗರನ್ನು ಬಿಜೆಪಿಗೆ ಸೆಳೆತಂದಿದ್ದು ಶಂಕರಲಿಂಗೇಗೌಡ. ದಲಿತರ ಪಾಲಿಗೆ ಅಸ್ಪೃಶ್ಯವಾಗಿದ್ದ ಬಿಜೆಪಿಯನ್ನು ಆನೇಕಲ್‌ನಂಥ ಮೀಸಲು ಕ್ಷೇತ್ರದಲ್ಲಿ ಸತತ ನಾಲ್ಕನೇ ಬಾರಿಗೂ ಗೆಲ್ಲಿಸಿ ತಂದದ್ದು ನಾರಾಯಣಸ್ವಾಮಿ. ಕಷ್ಟ ಕಾಲದಲ್ಲಿ ಪಕ್ಷ ಕಟ್ಟಿ ಬೆಳೆಸಿದ್ದ ಇಂಥವರನ್ನೆಲ್ಲ ವಂಚಿಸಿ ಬಳ್ಳಾರಿಯ ಗಣಿಕಳ್ಳ ಕರುಣಾಕರ ರೆಡ್ಡಿ, ಆತನ ಪಾಖಂಡಿ ತಮ್ಮ ಗಾಲಿ ಜನಾರ್ದನ್ ರೆಡ್ಡಿ ಮತ್ತು ಇವರ ಮನೆಯಾಳು ಶ್ರೀರಾಮುಲು ಎಂಬ ಗಲ್ಲೀ ರೌಡಿಯನ್ನು ಒಂದೇ ವೇದಿಕೆಯಲ್ಲಿ ನಿಲ್ಲಿಸಿ ಒಟ್ಟೊಟ್ಟಿಗೆ ಮಂತ್ರಿ ಮಾಡಿದ್ದಕ್ಕೆ ಬಿಜೆಪಿ ವರಿಷ್ಠರಲ್ಲಿ ಯಾವ ಸಮರ್ಥನೆಯುಂಟು?

ಹಾಗಂತ ಯಾರೇ ಪಕ್ಷನಿಷ್ಠ ಬಿಜೆಪಿ ಕಾರ್ಯಕರ್ತನಷ್ಟೇ ಅಲ್ಲ, ಕರ್ನಾಟಕದ ಪ್ರತಿ ಪ್ರಜ್ಞಾವಂತನೂ ಕೇಳುವ ಪ್ರಶ್ನೆಯಿದು. ಬಳ್ಳಾರಿಗೆ ಪ್ರಾತಿನಿಧ್ಯವೆಂದೋ ಅಥವಾ ಗಣಿ ರೆಡ್ಡಿಗಳ ರೊಕ್ಕದ ಋಣಕ್ಕೆಂದೋ ಮಂತ್ರಿಗಿರಿಯ ಕಾಣಿಕೆ ಕೊಡುವುದೇ ಆಗಿದ್ದರೆ ರೆಡ್ಡಿ ಬ್ರದರ್‌ಗಳ ಪೈಕಿ ಯಾರಾದರೂ ಒಬ್ಬನಿಗೆ ಕೊಟ್ಟಿದ್ದರೆ ಅದೇ ಹೆಚ್ಚಾಗುತ್ತಿತ್ತು. ಅಷ್ಟಕ್ಕೂ ಈ ರೆಡ್ಡಿಗಳು ಪಕ್ಷಕ್ಕಾಗಿ ಕಕ್ಕಿದ ದುಡ್ಡೇನೂ ಅವರಪ್ಪನ ಮನೆಯ ಸೊತ್ತಲ್ಲ. ಕರ್ನಾಟಕದ ಭೂಸಂಪತ್ತನ್ನು ದೋಚಿ ಅದೇ ದುಡ್ಡನ್ನು ಓಟಿನ ಕೊಳ್ಳೆಗೆ ಚೆಲ್ಲಿ ಈಗ ಅದನ್ನೇ ಪರಮತ್ಯಾಗವೆಂಬಂತೆ ಫೋಜು ಕೊಡುವ ಗಣಿಕಳ್ಳರ ಕೈಗೆ ಒಮ್ಮೆಗೇ ಮೂರು ಕ್ಯಾಬಿನೆಟ್ ಮಂತ್ರಿ ಸ್ಥಾನಗಳನ್ನು ಕೊಡಬಹುದಾದರೆ ಬಿಜೆಪಿಯಲ್ಲಿ ಪ್ರತಿಯೊಂದನ್ನೂ ರೊಕ್ಕದ ಲೆಕ್ಕಾಚಾರದಲ್ಲಿ ತೂಗಬೇಕಾಗುತ್ತದೆ.

ಧಾರವಾಡ ಜಿಲ್ಲೆಯ ಏಳು ಸ್ಥಾನಗಳಲ್ಲಿ ಆರನ್ನು ಗೆದ್ದ ಬಿಜೆಪಿಯಲ್ಲಿ ಜಗದೀಶ್ ಶೆಟ್ಟರ್ ಮತ್ತು ಚಂದ್ರಕಾಂತ್ ಬೆಲ್ಲದ್‌ರಂಥ ಸತತ ನಾಲ್ಕನೇ ಬಾರಿಗೆ ಗೆದ್ದ ಹಿರಿಯ ನಾಯಕರಿದ್ದೂ ಒಂದೇ ಒಂದು ಮಂತ್ರಿಗಿರಿಯಿಲ್ಲ, ಚಿಕ್ಕಮಗಳೂರು ಜಿಲ್ಲೆಯೊಂದರಿಂದಲೇ ನಾಲ್ವರು ಬಿಜೆಪಿ ಎಮ್ಮೆಲ್ಲೆಗಳಲ್ಲಿ ಒಬ್ಬೇ ಒಬ್ಬ ಮಂತ್ರಿಯಿಲ್ಲ. ಚಿತ್ರದುರ್ಗ, ರಾಯಚೂರು, ಬೀದರ್, ತುಮಕೂರು, ರಾಮನಗರ, ಚಾಮರಾಜನಗರ, ಹಾಸನ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ಹಾಸನದಂಥ ಜಿಲ್ಲೆಗಳಿಗೆ ಪ್ರಾತಿನಿಧ್ಯವಿಲ್ಲದೇ ಹೋದರೆ ಜನಾರ್ದನ್ ರೆಡ್ಡಿ ಮಾತ್ರ ಮೂರು ಮಂತ್ರಿಗಿರಿ ಕರುಣಿಸಿದ್ದು ಯಡ್ಡಿಯ ದೌರ್ಬಲ್ಯವಾ ಅಥವಾ ಬಿಜೆಪಿಯ ಪೇಚಾಟವಾ.

ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗಿನಿಂದಲೂ ಒಂದಲ್ಲಾ ಒಂದು ರೀತಿಯಿಂದ ಬಿಜೆಪಿಯನ್ನು ನಿಯಂತ್ರಿಸುತ್ತಲೇ ಬಂದವನು ಗಾಲಿ ಜನಾರ್ದನ ರೆಡ್ಡಿ. ಈತನ ಅಣ್ಣ ಕರುಣಾಕರ ರೆಡ್ಡಿ ಬಳ್ಳಾರಿಗೆ ಸಂಸದನಾಗಿ ಗೆದ್ದದ್ದು, ಮತ್ತೊಬ್ಬ ಅಣ್ಣ ಸೋಮಶೇಖರ ರೆಡ್ಡಿ ಮೇಯರ್ ಆಗಿದ್ದು, ಇವರ ಬಾಡಿಗೆ ಬಂಟನಂತಿದ್ದ ರೌಡಿ ಶ್ರೀರಾಮುಲುವೇ ಎಮ್ಮೆಲ್ಲೆಯಾಗಿ ಮಂತ್ರಿಯಾದದ್ದು ಇತ್ಯಾದಿಗಳೆಲ್ಲಕ್ಕೂ ಮೂಲಕಾರಣವೇ ಗಣಿ ಲೂಟಿ. ಮೂಲತಃ ಆಂಧ್ರದಿಂದ ಹೊಟ್ಟೆಪಾಡಿಗೆ ಬಂದವನೊಬ್ಬ ಅರಣ್ಯ ಭೂಮಿಯನ್ನೇ ಆಕ್ರಮಿಸಿ, ಅಲ್ಲಿನ ಭೂಗರ್ಭವನ್ನು ರಾಜಾರೋಷವಾಗಿ ದೋಚಿ, ಅದೇ ದುಡ್ಡಲ್ಲಿ ನಾಡನ್ನೇ ಆಳಲು ಹೊರಟಿದ್ದಾನೆಂದರೆ ಅದರ ಉದ್ದೇಶ ಕೂಡ ಮತ್ತಷ್ಟು ದೊಡ್ಡಮಟ್ಟದ ಹಗಲು ದರೋಡೆಯಾಗಿರುತ್ತದೆಯೇ ಹೊರತು ಆತ ಯಾವತ್ತಿಗೂ ಕರ್ನಾಟಕದ ಹಿತರಕ್ಷಕನಾಗಲಾರ.



ಸುಷ್ಮಾ ಸ್ವರಾಜೋ ಅಥವಾ ಕರಂದ್ಲಾಜೆಯೋ?

ಜ್ಯೋತಿಷಿಯೊಬ್ಬರ ಪ್ರಕಾರ ಯಡ್ಡಿಯ ಮುಖ್ಯಮಂತ್ರಿಗಿರಿಯೇನಿದ್ದರೂ ಅದು ಒಂದು ವರ್ಷ ಮಾತ್ರ. ಹೆಂಗಸೊಬ್ಬಳಿಂದಾಗಿಯೇ ಯಡ್ಡಿ ಅಧಿಕಾರ ಕಳೆದುಕೊಳ್ಳುತ್ತಾರಂತೆ. ಅದು ಶೋಭಾ ಕರಂದ್ಲಾಜೆಯೇ ಅಥವಾ ಸುಷ್ಮಾ ಸ್ವರಾಜ್‌ರೇ ಎಂಬುದನ್ನು ಕಾಲವೇ ನಿರ್ಧರಿಸಲಿದೆ.

ಏಕೆಂದರೆ ಸಂಡೂರಿನ ಗದಿಯ ಮಲ್ಪಂಗುಡಿ ಅರಣ್ಯ ಪ್ರದೇಶದಲ್ಲಿ ದಿನವೊಂದಕ್ಕೆ ಮೂವತ್ತು ಲಕ್ಷ ರೂಪಾಯಿ ಆದಾಯ ತರುವ ಗಣಿಯೊಂದನ್ನು ಸುಷ್ಮಾ ಸ್ವರಾಜ್‌ಗೆ ಗಣಿ ರೆಡ್ಡಿಗಳು ಗಿಫ್ಟಾಗಿ ಕೊಟ್ಟಿದ್ದಾರೆ. ಆ ಕಾರಣಕ್ಕೇ ಸುಷ್ಮಾ ತನ್ನಿಬ್ಬರು ಮಕ್ಕಳಂತೆ ಶ್ರೀರಾಮುಲು ಮತ್ತು ಜನಾರ್ದನ ರೆಡ್ಡಿಯನ್ನು ಅಕ್ಕಪಕ್ಕ ಕೂಡ್ರಿಸಿಕೊಂಡು ತಲೆ ಮೇಲೆ ಕೈಯಿಕ್ಕಿದ್ದು!



ಮತ್ತು ಕರುಣಾಕರ ರೆಡ್ಡಿಯನ್ನೇ ಉಪಮುಖ್ಯಮಂತ್ರಿ ಮಾಡುವಂತೆ ಯಡ್ಡಿಯ ಮೇಲೆ ಠರಾವು ಹಾಕಿದ್ದು!

ಇವತ್ತಲ್ಲ ನಾಳೆ ಯಡ್ಡಿಯ ಪಾಲಿಗೆ ಗಣಿರೆಡ್ಡಿಗಳು ತಲೆನೋವಾಗುವುದು ಶತಸ್ಸಿದ್ಧ. ಬಹುಶಃ ಗಣಿರೆಡ್ಡಿಗಳ ಕಾರಣಕ್ಕೇ ಬಿಜೆಪಿಯಲ್ಲಿ ಭಿನ್ನರು ಹುಟ್ಟಿಕೊಂಡರೂ ಅಚ್ಚರಿಯಿಲ್ಲ.

ಮುಂದಿನ ಟಾರ್ಗೆಟ್ ಜೆಡಿಎಸ್!



ಬಾಲಕೃಷ್ಣ


ಸದ್ಯ ಐದು ಮಂದಿ ಪಕ್ಷೇತರರನ್ನು ಹಿಡಿದು ಹಾಕಿ ಯಡ್ಡಿಯನ್ನು ಮುಖ್ಯಮಂತ್ರಿ ಮಾಡಿದ ಜನಾರ್ದನ ರೆಡ್ಡಿಯ ಅಂತಿಮಗುರಿ ಏನು ಗೊತ್ತೆ?

ಜೆಡಿಎಸ್ ಒಡೆಯುವುದು ಮತ್ತು ತಾನೇ ಮುಖ್ಯಮಂತ್ರಿಯಾಗುವುದು!



ಗೌರಿಶಂಕರ್

ಬಹುಶಃ ಚಲುವರಾಯಸ್ವಾಮಿ ಗೆದ್ದುಬಿಟ್ಟಿದ್ದರೆ ರೆಡ್ಡಿಯ ದಾರಿ ಸಲೀಸಾಗುತ್ತಿತ್ತೋ ಏನೋ. ಈಗ ರೆಡ್ಡಿಯ ಕಣ್ಣು ಮಾಗಡಿ ಶಾಸಕ ಬಾಲು ಮೇಲೆ ಬಿದ್ದಿದೆ. ಹೇಗಾದರೂ ಮಾಡಿ ಬಾಲಕೃಷ್ಣರನ್ನು ಕುಮಾರಸ್ವಾಮಿ ವಿರುದ್ಧ ಎತ್ತಿಕಟ್ಟಿ ಮಂಡ್ಯದ ಶ್ರೀನಿವಾಸ್, ಮದ್ದೂರಿನ ಸಿದ್ಧರಾಜು, ಚೆನ್ನಿಗಪ್ಪನ ಮಗ ಗೌರಿಶಂಕ್ರ ಮುಂತಾದವರ ನೇತೃತ್ವದಲ್ಲಿ ಒಂದು ಡಜನ್ ಜೆಡಿಎಸ್ ಶಾಸಕರನ್ನು ಬಿಜೆಪಿಗೆ ಸೆಳೆಯುವುದು ಜನಾರ್ದನ್ ರೆಡ್ಡಿಯ ಮುಂದಿನ ಗುರಿ.



ನಿಜಕ್ಕೂ ಇದು ಸಾಧ್ಯವಾಗುತ್ತಾ? ಮುಂದೊಮ್ಮೆ ತಾನೇ ಮುಖ್ಯಮಂತ್ರಿಯಾಗಬೇಕಾಗಿ ಬಂದರೆ ಮಾಗಡಿ ಬಾಲುವಿಗೇ ಉಪಮುಖ್ಯಮಂತ್ರಿಯ ಆಮಿಷ ತೋರಲು ರೆಡ್ಡಿ ಹೇಸಲಾರ. ಕರಂದ್ಲಾಜೆ ಮತ್ತು ರಾಮಚಂದ್ರಗೌಡರ ಹೊರತಾಗಿ ಯಡ್ಡಿಯ ಬೆನ್ನಿಗೆ ಗಟ್ಟಿಯಾಗಿ ನಿಲ್ಲುವವರಿಲ್ಲ. ಯಡ್ಡಿ ಅಂಥ ಚಾಣಾಕ್ಷನೂ ಅಲ್ಲ. ದುಡ್ಡು ಮತ್ತು ಅಧಿಕಾರದ ಮುಂದೆ ಯಾವುದೂ ದುಸ್ಸಾಧ್ಯವಲ್ಲ.

ಯಾವುದಕ್ಕೂ ಕುಮಾರಸ್ವಾಮಿ ಹುಷಾರಾಗಿರಬೇಕು!

ಸುವಿನಲ್ಲಿ ಕಾಂಗ್ರೆಸ್‌ನ ಕೊಡುವುದು, ಧರ್ಮಸಿಂಗ್ ...ರು ಭೂ ವಿಗಾಚನ ಲಂಚಕ್ಕೆ ಕೈಚಾಚಿ ಗಣಿಕೂಳ್ಗೆ ...ಮೂವಿಕೂಟ್ಟಿದ್ದು ಕಾಲಕ್ರಮೇಣ ಬಳ್ಳಾರಿಯ ...ಲ್ಲಿ ಕಾಂಗ್ರೆಸ್ಸಿಗೇ ಮುಳುವಾಯಿತು. ಗಣಿ ...ಯ ನಿರ್ದೇಶಕನಾಗಿದ್ದ ಬಸವರೆಡ್ಡಿಯಂಥ ...ರ 'ಬ್ರೋಕರ್'ನಿಂದ ಕಾಣಿಕೆ ಪಡೆದ ಪಾಪಕ್ಕೆ ...ಿ ದೇವೇಗೌಡರೇ ತಲೆ ಕೊಡಬೇಕಾಯಿತು. ...ರಸ್ವಾಮಿ ವಿರುದ್ಧ ಜನಾರ್ದನ ರೆಡ್ಡಿ ಅಷ್ಟೆಲ್ಲಾ ...ಬಿದ ನಂತರವಾದರೂ ಸರ್ಕಾರ ಬಳ್ಳಾರಿ, ...ರು ಭಾಗದಲ್ಲಿ ನಡೆಯುತ್ತಿದ್ದ ಗಣಿಲೂಟಿಯನ್ನು ...ತೆಂದೇ ತಾನೇ ಎಲ್ಲರೂ ಭಾವಿಸಿದ್ದು?

...ಸ್ತವವೇನೆಂದರೆ ಕುಮಾರಸ್ವಾಮಿ ಸರ್ಕಾರ ಗಣಿ ...ರು ವಿರುದ್ಧ ಅದೆಷ್ಟೇ ಕಟ್ಟುನಿಟ್ಟಾಗಿದ್ದರೂ ...ನ ರೆಡ್ಡಿಯ ಗಣಿಲೂಟಿ ಮಾತ್ರ ನಿಂತಿರಲೇ ...ವತ್ತಿಗೂ ನಿಂತಿಲ್ಲ, ತನ್ನ ಗಣಿ ದಕಾಯಿತಿಗೆಂದು ಗಡಿಯನ್ನೇ ಬದಲಾಯಿಸಿಕೊಂಡು, ರಾಜ್ಯದ ...ಮನ್ನೇ ತಿದ್ದಿದ್ದು ಜನಾರ್ದನ ರೆಡ್ಡಿ ರಾಜ್ಯಕ್ಕೆ ಬಗೆದ ...ೊಡ್ಡ ದ್ರೋಹವಾಗಿತ್ತು, ಸಂಡೂರು ತಾಲ್ಲೂಕಿನ ...ಿ ಮತ್ತು ವಿಠಲಾಪುರಗಳ ಮಧ್ಯದ ಸರಿಸುಮಾರು ...ರೆ ಭೂ ಪ್ರದೇಶದ ನಕಾಶೆಯನ್ನೇ ತಿದ್ದಿ ಅದನ್ನು ...ರ ಭೂಭಾಗವೆಂದು ಜಬರ್‌ದಸ್ತಿಯಲ್ಲೇ ಗಣಿ ...ತ್ತಿರುವ ಜನಾರ್ದನ ರೆಡ್ಡಿ ಈ ಕ್ಷಣಕ್ಕೂ ಅಲ್ಲಿಂದ ...ಂದಕ್ಕೆ ಮೂರು ಸಾವಿರ ಟನ್ ಅದಿರು ...ತ್ತಿದ್ದಾನೆ. ಇನ್ನೊಂದೆಡೆ ಬಳ್ಳಾರಿ ತಾಲ್ಲೂಕಿನ ...ರ ಗಡಿಯಗುಂಟ ಬೆಳಗಲ್, ಅಲಕುಂದಿ ಮತ್ತು ...ಳ್ಳಿಯ ಗಡಿಯುದ್ದಕ್ಕೂ ಒಂದೂವರೆ ಕಿ.ಮೀ. ...ಕರ್ನಾಟಕದ ನೆಲವನ್ನು ನಕಾಶೆ ತಿದ್ದಿ ಆಂಧ್ರಕ್ಕೆ ಈ ಭಾಗದಿಂದಲೂ ದಿನಂಪ್ರತಿ ಮೂರು ...ಟನ್ ಕಬ್ಬಿಣದ ಅದಿರನ್ನು ದೋಚುತ್ತಿದ್ದಾನೆ.

...ದು ರಾಜ್ಯದ ನಕಾಶೆಯನ್ನೇ ಬದಲಾ... ಅದರ ಕಿಲೋಮೀಟರುಗಟ್ಟಲೇ ಭೂ...ನ್ನು ಮತ್ತೊಂದು ರಾಜ್ಯಕ್ಕೆ ಸೇರಿಸಿ ...ರ ಪ್ರತಿನಿತ್ಯ ಎರಡೂವರೆ ಕೋಟಿ ...ರ ಅದಿರು ಕಿತ್ತೊಯ್ಯುತ್ತಿದ್ದರೂ ಕರ್ನಾ...ಒಬ್ಬೇ ಒಬ್ಬ ಅರಣ್ಯಾಧಿಕಾರಿಗೆ ಅದನ್ನು ...ಟ್ಟುವ ತಾಕತ್ತಿಲ್ಲವೆಂದರೆ ಕನ್ನಡಿಗರ್‍ಯಾರೂ ...ಲ್ಲವೆಂದೇ ತಾನೇ ಅರ್ಥ?


...ೀಗೆ ರಾಜ್ಯದ ನಕಾಶೆಯನ್ನೇ ತಿದ್ದಿ ದೊಡ್ಡ ...ಗವೊಂದನ್ನು ಆಂಧ್ರಕ್ಕೆ ತುರುಕಿಸಿದ್ದು ...್ ನಾಯಕರಿಗೂ ಗೊತ್ತಿತ್ತು. ವಿರೋಧ...ಗಿದ್ದ ಬಜೆಪಿಗೆ ಗೊತ್ತಿದ್ದೂ ತೆಪ್ಪಗಿತ್ತು. ...ರೆ ದೋಚಿದ ದುಡ್ಡಲ್ಲೇ ಬಳ್ಳಾರಿ ಪಾಸಲೆ ...ಕಮಲ ಅರಳುತ್ತಿತ್ತು!

...ವತ್ತಲ್ಲ ನಾಳೆ ರೆಡ್ಡಿಯ ಈ ಕೃತ್ಯದ ...ಕನ್ನಡಿಗರು ರೊಚ್ಚಿಗೇಳುವುದು ಶತಸ್ಸಿದ್ಧ. ...ಹೊಗೇನಕಲ್‌ಗಿಂತಲೂ ದೊಡ್ಡ ...ೂಟವಾಗುವುದು ಖಂಡಿತ. ಆದರೆ ಗಣಿ ...ಗಾಗಲೇ ಕ್ಯಾನ್ಸರ್‌ನಂತೆ ಬಜೆಪಿಯನ್ನು

ಆಕ್ರಮಿಸಿಬಿಟ್ಟಿದ್ದಾನೆ. ಯಡ್ಡಿ ಮುಖ್ಯಮಂತ್ರಿಯಾಗುತ್ತಿದ್ದಂತೆ ರೆಡ್ಡಿ ಇಟ್ಟ ಮೊದಲ ಬೇಡಿಕೆಯೇ ತನ್ನ ಅಣ್ಣ ಕರುಣಾಕರ ರೆಡ್ಡಿಗೆ ಉಪಮುಖ್ಯಮಂತ್ರಿಗಿರಿ!


ಗಣಿ ರೆಡ್ಡಿಯೇನೂ ಸುಮ್ಮನೇ ಹಠಕ್ಕೆ ಬಿದ್ದಿರಲಿಲ್ಲ, ಐವರು ಪಕ್ಷೇತರರೂ ಸೇರಿದಂತೆ ಸರಿಸುಮಾರು ಮೂವತ್ತು ಮಂದಿ ಬಜೆಪಿಯ ಎಮ್ಮೆಲ್ಲೆಗಳು ತನ್ನ ಬೆನ್ನಿಗಿರುವುದನ್ನು ವರಿಷ್ಠರ ಮುಂದೆ ಸಾಬೀತುಮಾಡಿಯೇ ಉಪಮುಖ್ಯಮಂತ್ರಿಗಿರಿಗೆ ಡಿಮ್ಯಾಂಡ್ ಇಟ್ಟಿದ್ದ. ಬಳ್ಳಾರಿಯ ಹತ್ತು ಕ್ಷೇತ್ರಗಳ ಪೈಕಿ ಒಂಬತ್ತರಲ್ಲಿ ಬಜೆಪಿ ಗೆದ್ದಿದ್ದು ಗಣಿ ದುಡ್ಡಿನಿಂದಲೇ ಎಂಬುದು ಯಡ್ಡಿ ಸೇರಿದಂತೆ ಬಜೆಪಿಯ ವರಿಷ್ಠರಿಗೆ ಚೆನ್ನಾಗಿ ಗೊತ್ತಿತ್ತು. ಬಳ್ಳಾರಿಯಲ್ಲಿ ಅನಿಲ್ ಲಾಡ್‌ರನ್ನೂ ಸೋಲಿಸಿದ್ದ ಸೋಮಶೇಖರ್ ರೆಡ್ಡಿಯ ಖಾಸಾ ಅಣ್ಣ. ಪಕ್ಕದ ಬಳ್ಳಾರಿ ಗ್ರಾಮಾಂತರದಿಂದ ಗೆದ್ದಿದ್ದ ಶ್ರೀರಾಮುಲು ಬಲಗೈ ಬಂಟ. ಇದೇ ರಾಮುಲು ಅಕ್ಕನ ಗಂಡ ರೈಲ್ವೇ ಬಾಬು ಎಂಬ ರೌಡಿ ಎಂದೋ ಕೊಲೆಯಾಗಿದ್ದ. ಈ ರೈಲ್ವೇ ಬಾಬುವಿನ ಮಗ ಸುರೇಶ್ ಬಾಬು ಎಂಬ ಪುಡಿ ರೌಡಿಯನ್ನು ಕಂಪ್ಲಿಯಿಂದ ಗೆಲ್ಲಿಸಿದ್ದು, ರೆಡ್ಡಿ ಕದ್ದ ಕಬ್ಬಿಣದ ಅದಿರನ್ನು ಜಬರ್‌ದಸ್ತಿಯಿಂದ ಸಾಗಿಸುತ್ತಿದ್ದ ಗುಮ್ಮನೂರು ನಾಗೇಂದ್ರ ಎಂಬ ಮತ್ತೊಬ್ಬ ಪಾತಕಿಯನ್ನು ಕೂಡ್ಲಿಗಿಯಿಂದ ನಿಲ್ಲಿಸಿ ಗೆಲ್ಲಿಸಿದ್ದು, ಹಡಗಲಿಯ ಸೋಮಲಿಂಗಪ್ಪ, ಹಗರಿ ಬೊಮ್ಮನಹಳ್ಳಿಯ ನೇಮಿರಾಜ ನಾಯ್ಕ, ಹೊಸಪೇಟೆಯ ಗಣಿಕಳ್ಳ ಆನಂದ್ ಸಿಂಗ್–ಹೀಗೆ ಸಂಡೂರಿನ ಹೊರತಾಗಿ ಬಳ್ಳಾರಿಯ ಒಂಭತ್ತೂ ಕ್ಷೇತ್ರಗಳು ಗಣಿರೆಡ್ಡಿಯ ವಶವಾಗಿದ್ದವು.





ಹರಪನಹಳ್ಳಿಯಲ್ಲಿ ಅಣ್ಣ ಕರುಣಾಕರ ರೆಡ್ಡಿಯೇ ಗೆದ್ದರೆ ಪಕ್ಕದ ಗದಗದ ನಾಲ್ಕೂ ಕ್ಷೇತ್ರಗಳಲ್ಲಿ ರೆಡ್ಡಿಗಳು ಕಾಂಗ್ರೆಸ್‌ನ್ನು ನಾಮಾವಶೇಷ ಮಾಡಿಹಾಕಿದ್ದರು. ಅದೂ ಕಾಂಗ್ರೆಸ್ ನಾಯಕ ಎಚ್.ಕೆ. ಪಾಟೀಲರನ್ನು ಬಜೆಪಿಯ ಶ್ರೀಶೈಲಪ್ಪ ಬಿದರೂರು ನೆಲಕಚ್ಚಿಸಿದ್ದರಲ್ಲಿ ರೆಡ್ಡಿಗಳ ರೊಕ್ಕವೇ ಪ್ರಮುಖ ಪಾತ್ರ ವಹಿಸಿತ್ತು. ಶಿರಹಟ್ಟಿಯಲ್ಲಿ ಬಲಾಢ್ಯ ಆಲ್ಕೋಡ್ ಹನುಮಂತಪ್ಪನವರನ್ನು ರೆಡ್ಡಿಗಳ ಬಂಟ ರಾಮಣ್ಣ ಲಮಾಣಿ ಎಂಬ ಅನಾಮಧೇಯ ಸೋಲಿಸಿಬಿಟ್ಟ. ರೋಣದ ಕಳಕಪ್ಪ ಗುರುಶಾಂತಪ್ಪ ಬಂಡಿ, ನರಗುಂದದ ಸಿ.ಸಿ. ಪಾಟೀಲರಂಥ ಯಕಶ್ಚಿತ್ ಪುಢಾರಿಗಳೂ ಬಜೆಪಿಯ ಟಿಕೆಟ್ ಗಿಟ್ಟಿಸಿ ಗೆದ್ದದ್ದು ಗಣಿರೆಡ್ಡಿಗಳ ತಾಕತ್ತಿಗೆ ಸಾಕ್ಷಿಯಂತಿತ್ತು. ತಾವೇ ನಿಂತು ಗೆಲ್ಲಿಸಿದ ಹದಿನೆಂಟು ಮಂದಿ ಬಜೆಪಿ ಶಾಸಕರಲ್ಲದೇ ರಾಜ್ಯಾದ್ಯಂತ ಸರಿಸುಮಾರು ಹದಿನೈದು ಮಂದಿ ಬಜೆಪಿ ಅಭ್ಯರ್ಥಿಗಳು ಗೆಲ್ಲಲು ಪರೋಕ್ಷವಾಗಿ ಗಣಿ ರೆಡ್ಡಿಯೇ ಕಾರಣನಾಗಿದ್ದ.

ಹೊಳಲ್ಕೆರೆಯ ಚಂದ್ರಪ್ಪನಿಂದ ಹಿಡಿದು ಸಾಗರದಲ್ಲಿ ಗೆದ್ದ ಬೇಳೂರು ಗೋಪಾಲಕೃಷ್ಣನ ತನಕ ಕೊಪ್ಪಳ, ಕನಕಗಿರಿ, ಗಂಗಾವತಿ, ಯಲಬುರ್ಗಾ, ಹಿರಿಯೂರು ಕ್ಷೇತ್ರಗಳ ಬಜೆಪಿ ಅಭ್ಯರ್ಥಿಗಳನ್ನು ರೆಡ್ಡಿಗಳೇ ನಿಂತು ಗೆಲ್ಲಿಸಿದ್ದರು. ಚುನಾವಣಾ ಫಲಿತಾಂಶ ಹೊರಬೀಳುವ ಮೊದಲೇ ಕನಕಗಿರಿಯ ಶಿವರಾಜ್ ತಂಗಡಗಿ ಮತ್ತು ಹೊಸದುರ್ಗದ ಗೂಳಿಹಟ್ಟಿ ಶೇಖರ್‌ರಂಥ ಪಕ್ಷೇತರರನ್ನು ಹೊರತುಪಡಿಸಿ ಐವರೂ ಪಕ್ಷೇತರರನ್ನು ಮಿಂಚಿನ ವೇಗದಲ್ಲಿ ಹಿಡಿದು ತಂದ ರೆಡ್ಡಿಗಳ ಮಿಂಚಿನ ವೇಗಕ್ಕೆ ಸಾಕ್ಷಾತ್ ಯಡ್ಡಿಯೇ ಥಂಡಾ ಹೊಡೆದುಬಿಟ್ಟರು.



ಅದು ಗಾಲಿ ಜನಾರ್ದನರೆಡ್ಡಿಯ ಮಹತ್ವಾಕಾಂಕ್ಷೆ ಮತ್ತು ದುರಾಶೆ. ಇವತ್ತಲ್ಲ ನಾಳೆ, ಸಾಧ್ಯವಾದರೆ ಈ ಬಾರಿಯೇ ರಾಜ್ಯದ ಮುಖ್ಯಮಂತ್ರಿಯಾಗುವುದು ರೆಡ್ಡಿಯ ಹುನ್ನಾರ. ಇಂಥದೊಂದು ಗುರಿಯಿಟ್ಟುಕೊಂಡೇ ತನ್ನ ಅಣ್ಣ ಕರುಣಾಕರರೆಡ್ಡಿಯನ್ನು ಉಪಮುಖ್ಯಮಂತ್ರಿ ಮಾಡಲು ಹೊರಟಿದ್ದ ರೆಡ್ಡಿಯನ್ನು ನಿಯಂತ್ರಿಸಲು ಕೊನೆಕೊನೆಗೆ ಆರೆಸ್ಸೆಸ್ ನಾಯಕರೇ ಹೆಣಗಾಡಬೇಕಾಯಿತು. ಕರುಣಾಕರ ರೆಡ್ಡಿ ಮತ್ತು ಶ್ರೀರಾಮುಲು ಜೊತೆಗೆ ಜನಾರ್ದನ ರೆಡ್ಡಿಗೂ ... ಮಂತ್ರಿಗಿರಿಯನ್ನು ಕೊಟ್ಟ ನಂತರವಷ್ಟೇ ಉಪಮುಖ್ಯಮಂತ್ರಿ ಬೇಡಿಕೆಯನ್ನು ರೆಡ್ಡಿ ಕೈಬಿಟ್ಟಿದ್ದು.

ಉಪಮುಖ್ಯಮಂತ್ರಿ ಗಾದಿಗೆ ಬದಲಾಗಿ ಮೂರು ಕ್ಯಾಬಿನೆಟ್ ಖಾತೆಗಳನ್ನು ಗಿಟ್ಟಿಸಿದ ರೆಡ್ಡಿಗಳು ಯಡ್ಡಿಯನ್ನು ಇಕ್ಕಟ್ಟಿಗೆ ಬಿಟ್ಟಿದ್ದ. ಕರುಣಾಕರ ರೆಡ್ಡಿಗೇ ಅರಣ್ಯ ಖಾತೆ ಬೇಕಂತೆ. ಗಣಿ ಇಲಾಖೆಯನ್ನು ಶ್ರೀರಾಮುಲುವಿಗೇ ಮೀಸಲಿಡಬೇಕಂತೆ. ತಾನು ಮಾತ್ರ ಪ್ರವಾಸೋದ್ಯಮ ಮಂತ್ರಿಯಾಗುತ್ತಾನಂತೆ ಜನಾರ್ದನ ರೆಡ್ಡಿ. ಇದರರ್ಥ ಅಗಾಧ ಪ್ರಮಾಣದ ಗಣಿ ದೋಚುವುದು ರೆಡ್ಡಿಗಳ ಷಡ್ಯಂತ್ರ.

ಯಾರು ಗಣಿ ಲೂಟಿಯನ್ನು ತಡೆಗಟ್ಟಿ ಕನ್ನಡಿಗರ ಪಾಲಿನ ಭೂಸಂಪತ್ತನ್ನು ಅರಣ್ಯವನ್ನು ರಕ್ಷಿಸಬೇಕಿತ್ತೋ ಅಂಥ ಜಾಗಕ್ಕೆ ಗಣಿಕಳ್ಳರೇ ಬಂದು ಕೂತರೆಂದರೆ ಏನರ್ಥ? ಗಣಿ ದಕಾಯಿತರೇ ಅರಣ್ಯ ಮಂತ್ರಿ ಮತ್ತು ಗಣಿಮಂತ್ರಿಗಳಾಗಿಬಿಟ್ಟರೆ ಇನ್ನಷ್ಟು ಭೂನಿಧಿಯನ್ನು ಕೊಳ್ಳೆ ಹೊಡೆಯಲಾರರು ಎಂಬುದಕ್ಕೆ ಏನು ಗ್ಯಾರಂಟಿ? ಹೀಗೆ ದೋಚಿದ ಸಂಪತ್ತಿನಲ್ಲೇ ನಾಳೆ ದಿನ ಯಡ್ಡಿಯನ್ನು ಹೊರದಬ್ಬಿ ತಾವೇ ಮುಖ್ಯಮಂತ್ರಿಯಾದರೆ ಗತಿಯೇನು?

ಇದು ಖಂಡಿತ ಕನ್ನಡಿಗರ ಪಾಲಿನ ಅತೀ ದೊಡ್ಡ ದುರಂತ. ಬಜೆಪಿಯ ಗೆಲುವಿಗೆ ಗಣಿ ರೆಡ್ಡಿಗಳ ಕೊಡುಗೆ ಎಷ್ಟೇ ದೊಡ್ಡದಿದ್ದರೂ ವಾಸ್ತವವಾಗಿ ಅದು ಯಡ್ಡಿಯ ಗೆಲುವೇ ಹೊರತು ಗಣಿರೆಡ್ಡಿಗಳ ಗೆಲುವಲ್ಲ. ಲಿಂಗಾಯತರು ಸಾರಾಸಗಟಾಗಿ ಬಜೆಪಿಯನ್ನು ಬೆಂಬಲಿಸದೇ ಹೋಗಿದ್ದರೆ ರೆಡ್ಡಿಗಳು ಅದೆಷ್ಟೇ ಸುರಿದರೂ ಪ್ರಯೋಜನಕ್ಕೆ ಬರುತ್ತಿರಲಿಲ್ಲವೆಂಬುದು ಕೂಡ ಅಷ್ಟೇ ಸತ್ಯ. ಹಾಗಿದ್ದರೆ ಆರೆಸ್ಸೆಸ್ ಕರ್ಮಭೂಮಿಯಾದ ಕರಾವಳಿಯಲ್ಲಿ ಬಜೆಪಿ ಸೋಲುತ್ತಿರಲಿಲ್ಲ. ಕಾರ್ಕಳದ ಸುನೀಲ್ ಕುಮಾರ್ ಥರದ ಕಟ್ಟರ್ ಭಜರಂಗಿಯ ವಿರುದ್ಧ ಕಾಂಗ್ರೆಸ್ ಗೆಲ್ಲುತ್ತಿರಲಿಲ್ಲ. ಲಿಂಗಾಯತರು ಬೆಂಬಲಿಸಿದ್ದು ಯಡ್ಡಿಯನ್ನೇ ಹೊರತು ಬಜೆಪಿಯನ್ನಲ್ಲ. ಇದನ್ನೇ ತಮ್ಮ ಗೆಲುವೆಂದು ಪೋಜು ಕೊಡುತ್ತಿರುವ ಗಣಿ ರೆಡ್ಡಿಗಳ ಬ್ಲ್ಯಾಕ್‌ಮೇಲ್‌ಗೆ ಯಡ್ಡಿ ಮಣಿಯುವುದರಲ್ಲಿ ಯಾವುದೇ ಅರ್ಥವಿಲ್ಲ.

ನಿಜಕ್ಕೂ ಯಡ್ಡಿಗೆ ಹಿಮ್ಮತ್ತಿದ್ದರೆ ಮೊದಲು ಗಣಿಗಾರಿಕೆಯನ್ನು ನಿಷೇಧಿಸಲಿ. ಲೂಟಿಯಾಗುತ್ತಿರುವ ಗಣಿ ಸಂಪತ್ತನ್ನು ಕನ್ನಡಿಗರ ಭವಿಷ್ಯಕ್ಕೆಂದು ಮೀಸಲಿಡಲಿ. ಕನಿಷ್ಠ ಕರ್ನಾಟಕದ ರೈತರ, ಕನ್ನಡಪರ ಸಂಘಟನೆಗಳು ವಿದ್ಯಾರ್ಥಿಗಳಾದರೂ ಈ ನಿಟ್ಟಿನಲ್ಲಿ ಬೀದಿಗಿಳಿಯುವಂತಾಗಲಿ. ಏಕೆಂದರೆ ರೆಡ್ಡಿಗಳಿಗಾದರೆ ಆಂಧ್ರಪ್ರದೇಶವಿದೆ. ಕರ್ನಾಟಕ ಬಿಟ್ಟರೆ ಕನ್ನಡಿಗರಿಗೆ ಇನ್ಯಾವ ನೆಲೆಯಿದೆ? ■

...ಕಲಿ ಪರ್ಮಿಟ್ಟು

ಜಗನ್ ರೆಡ್ಡಿಯ ಕುಮ್ಮಕ್ಕು



...ಧಿಕಾರವಿಲ್ಲದೆಯೇ ಈಪಾಟಿ ಗಣಿದೋಚಿದ ರೆಡ್ಡಿ ಗ್ಯಾಂಗ್ ಇನ್ನು ಮುಂದೆ ಮಾಡಲಿರುವ ಹಾವಳಿಗಳು ...ಭಯಾನಕ.

...ಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ರೆಡ್ಡಿಗಳನ್ನು ಮಟ್ಟಾಹಾಕಲೆಂದೇ ರಾಜಶೇಖರ್ ಎಂಬ ...ಧಿಕಾರಿಯನ್ನು ನೇಮಿಸಿದರೆ ಉಪಾಯವಾಗಿ ಲೋಕಾಯುಕ್ತರನ್ನು ಛೂಬಿಟ್ಟು ಎತ್ತಂಗಡಿ ಮಾಡಿಸಿದ್ದು ...ನರೆಡ್ಡಿಯ ದುಷ್ಕೃತ್ಯಕ್ಕೊಂದು ನಿದರ್ಶನವಾಗಿತ್ತು. ಆನಂತರ ಯು.ಬಿ. ಸಿಂಗ್ ಎಂಬ ಮತ್ತೊಬ್ಬ ಖಡಕ್ ...ಯನ್ನು ಬಳ್ಳಾರಿಗೆ ಕಳುಹಿಸಿದ್ದರು ಕುಮಾರಸ್ವಾಮಿ. ಬಂದುಬಂದದ್ದೇ ಸಣ್ಣಪುಟ್ಟ ಗಣಿ ಮಾಲೀಕರನ್ನೆಲ್ಲ ...ಡಿಸಿದ ಯು.ಬಿ. ಸಿಂಗ್ ಯಾಕೋ ಗೊತ್ತಿಲ್ಲ ತಿಮಿಂಗಲದಂಥ ಗಣಿ ರೆಡ್ಡಿಗಳನ್ನು ಮುಟ್ಟಲೇ ಇಲ್ಲ. ...ಸಿಂಗ್ ಬಂದಿದ್ದು ಜನಾರ್ದನ ರೆಡ್ಡಿಗೇ ಲಾಭವಾಗಿತ್ತು, ಅದೇ ಹೊತ್ತಿಗೆ ಜೆಡಿಎಸ್-ಬಜೆಪಿ ಸರ್ಕಾರವೇ ...ಹೋಯಿತು.

...ಪ್ಪಾಲರ ಆಳ್ವಿಕೆಯಲ್ಲಿ ಕನ್ಸರ್ವೇಟರ್ ಆಫ್ ಫಾರೆಸ್ಟ್ ಆಗಿ ಬಂದ ವಿಜಯಕುಮಾರ್ ಗೋಗಿ ಮತ್ತು ...ಮಿಶ್ರಾ ಕೂಡ ಗಣಿರೆಡ್ಡಿಗಳು ಅದಿರು ದೋಚುತ್ತಿದ್ದ ಅರಣ್ಯ ಪ್ರದೇಶಕ್ಕೆ ಕಾಲಿಡಲೇ ಇಲ್ಲ. ಆ ಮಟ್ಟದ ...ನ್ನು ರೆಡ್ಡಿ ಗ್ಯಾಂಗ್ ಹುಟ್ಟು ಹಾಕಿತ್ತು. ಹಾಗೊಮ್ಮೆ ಅರಣ್ಯಾಧಿಕಾರಿಗಳು ರೇಡಿಗೆ ಸಜ್ಜಾದರೆ ಅದಕ್ಕೆ ...ಸರು ಸ್ಪಂದಿಸುತ್ತಿರಲಿಲ್ಲ. ಪೊಲೀಸರು ಅಣಿಯಾದರೆ ಅದಕ್ಕೆ ಅರಣ್ಯಾಧಿಕಾರಿಗಳು ಸಹಕರಿಸಲಿಲ್ಲ. ವ್ಯವಸ್ಥೆಯ ...ಭ್ರಷ್ಟತೆಯನ್ನು ರೆಡ್ಡಿ ಅದೆಷ್ಟು ಉಪಾಯವಾಗಿ ಬಳಸಿಕೊಂಡನೆಂದರೆ ಮಲ್ಲಂಗುಡಿ ಭಾಗದ ವಿಠಲಾಪುರಕ್ಕೆ ...ಕೊಂಡಂತೆ ಅದಿರು ತೆಗೆಯುತ್ತಿದ್ದ ಎಚ್.ಎಂ. ಟ್ರೈನ್ಸ್‌ನ ಸಂತೋಷ್ ಮೇಲೆ ಗೂಂಡಾಗಿರಿ ನಡೆಸಿ ಆತನ ಅದಿರನ್ನು ಕಿತ್ತೊಯ್ದು. ಪಕ್ಕದಲ್ಲೇ ಮತ್ತೊಂದು ಗಣಿ ನಡೆಸುತ್ತಿದ್ದ ಟಪಾಲ್ ರಾಮಪ್ಪನ ಮಗ ಗಣೇಶ್ ...ಆಂಧ್ರದ ಪೊಲೀಸರನ್ನೂ ಛೂಬಿಟ್ಟು ಜೈಲಿಗೆ ಹಾಕಿಸಿದ್ದೇ ಆತನ ಗಣಿಯನ್ನೂ ಕಬಳಿಸಿದ. ಸಿದ್ದಾಪುರದ ಮಹಾಬಲೇಶ್ವರನ ಗಣಿಯನ್ನೂ ಗೂಂಡಾಗಳನ್ನು ಬಿಟ್ಟು ಆಕ್ರಮಿಸಿಕೊಂಡು ಇಷ್ಟಕ್ಕೂ ತೃಪ್ತನಾಗದ ಜನಾರ್ದನ ರೆಡ್ಡಿ ಬಳ್ಳಾರಿ ಐರನ್‌ಓರ್ (BOB) ಮಾಲೀಕ ಮೋದಿಯನ್ನು ರೌಡಿಗಳನ್ನು ಬಿಟ್ಟು ಹೊಡೆಸಿದ್ದಾನೆ. ಆತನ ಗಣಿಗೇ ನುಗ್ಗಿ ಪ್ರತಿನಿತ್ಯ ಅದಿರು ಸಾಗಿಸುತ್ತಲೇ ಇದ್ದಾನೆ.


ಹೀಗೆ ಗೂಂಡಾಗಿರಿ ಮಾಡಿಯೇ ದೋಚಿದ ಅದಿರನ್ನು ಆಂಧ್ರದ ಚೆಕ್‌ಪೋಸ್ಟುಗಳ ಮೂಲಕ ಕೃಷ್ಣಪಟ್ಟಣಂ ಬಂದರಿಗೆ ರೆಡ್ಡಿ ಸಾಗಿಸುತ್ತಾನೆ. ಅದಕ್ಕೆಂದು ನಕಲಿ ಪರ್ಮಿಟ್ಟುಗಳನ್ನು ರೆಡ್ಡಿಯೇ ಪ್ರಿಂಟ್ ಹಾಕಿಸುತ್ತಾನೆ. ಕದ್ದ ಮಾಲನ್ನು ಆಂಧ್ರದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರರೆಡ್ಡಿಯ ಮಗ ಜಗನ್‌ರೆಡ್ಡಿ ಖರೀದಿಸುತ್ತಾನಾದ್ದರಿಂದ ಆಂಧ್ರದ ಯಾವೊಬ್ಬ ಅಧಿಕಾರಿಯೂ ಗಣಿ ಲೂಟಿಯನ್ನು ಪ್ರಶ್ನಿಸುವುದಿಲ್ಲ.

ಏಕೆಂದರೆ ಸಾಗಿಸುವುದು ಆಂಧ್ರದ ಮಾರ್ಗವಾದರೂ ದೋಚುವುದು ಮಾತ್ರ ಕರ್ನಾಟಕದ ನೆಲದಲ್ಲೇ. ಅದಕ್ಕೆ ಬ್ರಿಟಿಷರ ಕಾಲದಲ್ಲಿ ನೆಟ್ಟಿದ್ದ ಬೆಂಚ್ ಮಾರ್ಕುಗಳನ್ನು ಕಿತ್ತು ಕರ್ನಾಟಕದ ಭೂಭಾಗವನ್ನೇ ಆಂಧ್ರಕ್ಕೆ ಸೇರಿಸಿಬಿಟ್ಟಿದ್ದಾನೆ ಜನಾರ್ದನ್ ರೆಡ್ಡಿ.

ಅಧಿಕಾರವಿಲ್ಲದೆಯೇ ಇಷ್ಟೆಲ್ಲ ಅನಾಹುತ ಮಾಡಿದವನಿಗೆ ಈಗ ಅಧಿಕಾರ ... ಇನ್ನೆಂಥಾ ಅನಾಹುತ ಕಾದಿದೆಯೋ?

ಕೊನೆಗೂ ತೊಲಗಿದ ಶನಿಗಳು


ಡಸ್ಟ್‌ಬಿನ್‌ಗೆ ಧರ್ಮಸಿಂಗ್



ಕಲಬುರ್ಗಿ ಜಿಲ್ಲೆಯ ಚುನಾವಣೆ ಆಖಾಡದಲ್ಲಿ ತೊಡೆ ತಟ್ಟಿನಿಂತು ಒಂದೇ ಸಮ ಹೂಂಕರಿಸುತ್ತಿದ್ದ ಧ್ರಮ್‌ಸಿಂಗ್‌ರನ್ನು ಇಂದು ಜೇವರ್ಗಿಯ ಮತದಾರ ಪ್ರಭು ಗಟಾರಕ್ಕೆ ದೂಡಿದ್ದಾನೆ. ಸತತವಾಗಿ ಎಂಟುಸಲ ಆಯ್ಕೆಯಾಗಿ ಬಂದರೂ ಜೇವರ್ಗಿಯನ್ನು ಡಸ್ಟಬಿನ್ ಥರ ಧರ್ಮಸಿಂಗ್ ಮಾಡಿಕೊಂಡಿದ್ದೇ ಈ ಸೋಲಿಗೆ ಕಾರಣವಾಗಿದೆ.. ಆದರೊಂದಿಗೆ ತನ್ನ ಸುತ್ತಮುತ್ತ ತಿರುಗುತ್ತ ಧರ್ಮಸಿಂಗ್‌ರ ಶ್ರೇಯೋಭಿವೃದ್ಧಿಯೆ ತಮ್ಮ ಗುರಿ ಎಂದು ಬಗೆಯುತ್ತಿದ್ದ ಗೌನಳ್ಳಿ ಬಸ್ಸಣ್ಣನಂಥವರಿಗೆ ಚಂಬು ಕೊಟ್ಟು ಕಳಿಸಿದ್ದೂ ಇಲ್ಲಿನ ಜನರನ್ನು ಕೆರಳಿಸಿತ್ತು.

ಹಿಂದೆಲ್ಲಾ ಚುನಾವಣೆಗೆ ಒಂದೆರಡು ದಿನ ಇರುವಾಗ ಧರ್ಮಸಿಂಗ್ ಹಣವನ್ನು ಚೆಲ್ಲಾಪಿಲ್ಲಿಯಾಗಿ ಚೆಲ್ಲುತ್ತಿದ್ದರು. ಇದರಿಂದಾಗಿ ಮತಪೆಟ್ಟಿಗೆಗಳ ತುಂಬೆಲ್ಲ ಧರ್ಮಸಿಂಗ್ ತುಂಬಬಿಟ್ಟಿರುತ್ತಿದ್ದರು. ಆದರೆ ಆತ ಗೆದ್ದು ಬರುತ್ತಲೆ ಬೆಂಗಳೂರು-ಗುಲಬರ್ಗಾ ಅಂತ ಓಡಾಡಿಕೊಂಡಿರುತ್ತಿದ್ದರೆ ಹೊರತು ಅಪ್ಪಿತಪ್ಪಿಯೂ ಜೇವರ್ಗಿಯ ಕಡೆ ತಲೆ ಕೂಡ ಹಾಕದೆ ಹಾಯಾಗಿರುತ್ತಿದ್ದರು. ಎಲ್ಲಾ ಹಾಳಾದ ಮೇಲೆ ದಿಡ್ಡಿ ಬಾಗಿಲು ಹಾಕಿದರು ಎಂಬಂತೆ ಜೇವರ್ಗಿಯ ಮತದಾರ ತಮ್ಮ ಕ್ಷೇತ್ರವೆಲ್ಲ ಬರ್ಬಾದ ಆದ ಮೇಲೆ ದೊಡ್ಡಪ್ಪ ಗೌಡನನ್ನು ಗೆಲ್ಲಿಸುವ ಮೂಲಕ ಶಾಣ್ಯಾ ಆಗಿದ್ದಾನೆ.

ವೆಂಕಟೇಶ ನಾಯಕ ಈಗಲಾದರೂ ಪಾಠ ಕಲಿಯಬೇಕು



ರಾಯಚೂರು ಜಿಲ್ಲೆಯ ಹಾಲಿ ಸಂಸದನಾಗಿರುವ ದೇವದುರ್ಗ ಕ್ಷೇತ್ರದಿಂದ ಎಂಎಲ್‌ಎ ಸ್ಥಾನಕ್ಕೆ ನಿಂತು ಸೋತಿರುವ ವೆಂಕಟೇಶ ನಾಯಕ ಇನ್ನಾದರೂ ತಿಳಿವಳಿಕೆಯನ್ನು ತಂದುಕೊಳ್ಳಬೇಕು. ತಮ್ಮ ಪುತ್ರ ರತ್ನಗಳಾದ ರಾಜಶೇಖರ ನಾಯಕ ಹಾಗೂ ಭಗವಂತನಾಯಕರ ಕಾಮನ ಆಟಗಳಿಗೆ ತಡೆಹಾಕಬೇಕು.

ವೆಂಕಟೇಶನಾಯಕರ ಬಗ್ಗೆ ದೇವದುರ್ಗದ ಜನರಿಗೆ ಇನ್ನೂ ಸ್ವಲ್ಪ ಅಭಿಮಾನ ಉಳಿದಿದ್ದರೆ ಅದಕ್ಕೆ ಕಾರಣ ಅವರ ವಿನಮ್ರ ನಡವಳಿಕೆ. ಆದರೆ ಅದೇ ಮಾತನ್ನು ಅವರ ಪುತ್ರ ಮಹಾಶಯರ ಬಗ್ಗೆ ಹೇಳಲಾಗುವುದಿಲ್ಲ. ಪರಸ್ಪರ ಜಿದ್ದಿಗೆ ಬಿದ್ದವರಂತೆ ಅವರಿಬ್ಬರೂ ಕಂಡಕಂಡ ಹೆಣ್ಣುಮಕ್ಕಳ ಮೇಲೆ ಬೆದೆಬಂದವರಂತೆ ಎರಗುತ್ತ ಹೋದರಲ್ಲ! ಅದು ಇಲ್ಲಿನ ಜನರನ್ನು ತಲ್ಲಣಗೊಳಿಸಿತು. ತಮ್ಮ ತಂದೆಗಿರುವ ರಾಜಕೀಯ ಅಧಿಕಾರದಿಂದ ತಾವು ಏನನ್ನಾದರೂ ದಕ್ಕಿಸಿಕೊಳ್ಳಬಹುದು ಎಂಬ ಅವರಿಬ್ಬರ ಧೂರ್ತತನವನ್ನು ಕಂಡು ಜನ ಸುಮ್ಮನೆ ಕೂಡುತ್ತಾರಾದರೂ ಎಷ್ಟು ದಿನ?

ದೇವದುರ್ಗದ ಮತದಾರರು ವೆಂಕಟೇಶ ನಾಯಕ ಹಾಗೂ ಮಕ್ಕಳಿಗೆ ತಕ್ಕುದಾದ ಪಾಠವನ್ನೇ ಕಲಿಸಿದ್ದಾರೆ. ಈಗಲಾದರೂ ಪಾಠ ಕಲಿಯದೆ ಇದ್ದರೆ ಅವರನ್ನೆಲ್ಲ ರಾಜಕೀಯ ಗಟಾರಕ್ಕೆ ಅಲ್ಲಿನ ಜನ ದೂಡುವ ದಿನಗಳು ದೂರವಿಲ್ಲ.

ಜನರಿಲ್ಲದೆ ಜನನಾಯಕನಾಗುವುದು ಹೇಗೆ?



ಕೆಲವು ಸಲ ಸತ್ಯ ಬಹು ಕಠೋರವಾಗಿರುತ್ತದೆ. ಅದನ್ನು ಅನಿವಾರ್ಯವಾಗಿ ಹೇಳಲೇಬೇಕಾಗುತ್ತದೆ. ಆದರೆ ಈ ಸತ್ಯವನ್ನೆ ತಪ್ಪೆಂದು ವಾದಿಸುವವರಿಗೆ ಏನೂ ಹೇಳಲು ಬರುವುದಿಲ್ಲ. ಇದ್ದದ್ದು ಇದ್ದಂಗ್ಗ ಹೇಳಿದ್ರೆ ಸುರಪುರದ ವೆಂಕಟಪ್ಪನಾಯಕರಿಗೆ ಎಲ್ಲಿಲ್ಲದ ಸಿಟ್ಟು. ಈ ಸಿಟ್ಟು, ಸೆಡವು, ಬಿಗುವುಗಳೆಲ್ಲ ಅವರನ್ನು ಇಂದು ಮೂಲೆಗುಂಪು ಮಾಡಿವೆ. ಜನಸಾಮಾನ್ಯರೆಲ್ಲ ಇವರ ಕಣ್ಣಲ್ಲಿ ಯಕಶ್ಚಿತ ಪಶುಗಳು. ಅವರು ಬಂದರೆಷ್ಟು ಹೋದರೆಷ್ಟು? ಅವರೆಲ್ಲ ಇರುವುದು ತಮ್ಮ ಸೇವೆಗಾಗಿ. ನಾವಿರುವುದು ಅವರ ಮೇಲೆ ಅಧಿಕಾರ ಚಲಾಯಿಸುವುದಕ್ಕಾಗಿ ಎಂದು ವೆಂಕಟಪ್ಪ ನಾಯಕರು ತಿಳಿದುಕೊಂಡಿರುವುದರಿಂದಲೆ ಜನ ಇವರನ್ನು ತಿರಸ್ಕರಿಸಿದ್ದಾರೆ. ಜೊತೆಗೆ ಇವರ ಸಹೋದರರ ನಡವಳಿಕೆಗಳು ಇದಕ್ಕೆ ಕಾರಣವಾಗಿವೆ. ಈಗಲಾದರೂ ಜನನಾಯಕನಾಗಿ ಹೊರಹೊಮ್ಮಬೇಕಾದರೆ ಸಾಮಾನ್ಯರೊಂದಿಗೆ ಬೆರೆಯಬೇಕು. ಅವರ ಬೇಕು-ಬೇಡಗಳಿಗೆ ಸ್ಪಂದಿಸಬೇಕು. ಇದು ಇವರಿಂದ ಸಾಧ್ಯವೆ?

ಕೊನೆಗೂ ಡಾ. ಮುದ್ನಾಳನ ಚೆಡ್ಡಿ ಕಳಚಿತು



ಹಾಗೇ ನೋಡಿದರೆ ಡಾ. ವೀರಬಸವಂತರೆಡ್ಡಿ ಮುದ್ನಾಳ ವೈಯಕ್ತಿಕವಾಗಿ ತುಂಬಾ ಸಭ್ಯ ಮನುಷ್ಯ. ಸಾದಾ-ಸೀದಾ ಕೂಡ. ಈತನನ್ನು ನೋಡಿದಾಕ್ಷಣ ಯಾವುದಾದರೂ ಕಾಲೇಜಿನ ಉಪನ್ಯಾಸಕನಾಗಿ ಕಳಿಸುವುದು ಮೇಲು ಎಂಬ ಭಾವನೆ ಬರದೆ ಇರಲಾರದು. ಆದರೂ ಯಾದಗಿರಿಯ ಜನ ಈತನನ್ನು ಈಗ ತಿರಸ್ಕರಿಸಿದ್ದಾರೆ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ.

ಡಾ.ಮುದ್ನಾಳರ ಆತ್ಮಾವಲೋಕನೆಗೆ ಇದೊಂದು ಸದಾವಕಾಶ. ಕಳೆದ ಬಾರಿ ಈತ ಗೆದ್ದು ಬಂದಾಗ ಈತನ ಬಗ್ಗೆ ಜನರಲ್ಲಿ ಇನ್ನಿಲ್ಲದ ಭರವಸೆಗಳಿದ್ದವು. ಯಾದಗಿರಿಯ ಮತಕ್ಷೇತ್ರಕ್ಕೆ ಈತನಿಂದ ಬಹುದೊಡ್ಡ ಲಾಭವಾಗಲಿಕ್ಕಿಲ್ಲವಾದರೂ ಕಿರಿಕಿರಿಯಂತೂ ಇರಲಾರದು ಎಂದೇ ಭಾವಿಸಿದ್ದರು.


ಆದರೆ ನಿಜಕ್ಕೂ ನಾಲ್ಕು ವರ್ಷಗಳ ಅವಧಿಯಲ್ಲಿ ನಡೆದದ್ದೇನು? ಎಂದು ನೋಡಿದರೆ ವಿಷಾದವಾಗುತ್ತದೆ. ಗೋದಾಮಿನ ಹಂಗು ತೊರೆದು - ಅಂದರೆ ವಿಶ್ವನಾಥರೆಡ್ಡಿ ಮುದ್ನಾಳನ ಪರಲು ಹರಕೊಂಡು -ಬಂದಿದ್ದೇನೆ ಎಂದು ಹೇಳಿದ್ದ ಡಾ.ಮುದ್ನಾಳ ಗೆದ್ದು ಬರುತ್ತಲೆ ಗೋದಾಮಿನ ದಾರಿ ತುಳಿದಿದ್ದರು. ಅಲ್ಲದೆ ಗೋದಾಮಿನ ಹುಕುಮ್ಮಗಳೇ ತಾಲೂಕನ್ನು ಆಳತೊಡಗಿದಾಗ ಜನ ಒಂದು ನಿರ್ಧಾರಕ್ಕೆ ಬಂದಿದ್ದರು.


ಇದಕ್ಕಿಂತ ಮಿಗಿಲಾಗಿ ಈತನ ಸಹೋದರ ಮಹಾಶಯರೆಲ್ಲ ತಾವೂ ಶಾಸಕರೆಂಬಂತೆ ಅಧಿಕಾರವನ್ನು ಚಲಾಯಿಸತೊಡಗಿದಾಗ ಸಾಮಾನ್ಯ ಜನ ಕಿರಿಕಿರಿಯನ್ನು ಅನುಭವಿಸಿದರು. ಅವರನ್ನು ಸಂಭಾಳಿಸಬೇಕಿದ್ದ ಮುದ್ನಾಳ ಅವರ ಮುಂದೆ ಅಸಹಾಯಕನಾಗಿದ್ದ. ಇದರ ಹಿಂದಿನ ಮರ್ಮ ಏನಿರಬಹುದು? ಎಂದು ಅರಿಯದಷ್ಟು ಮತದಾರರು ಮೂರ್ಖರಾಗಿರಲಿಲ್ಲ.

ಯಾದಗಿರಿ-ಶಹಾಪುರ ರಸ್ತೆ ಕಾಮಗಾರಿಗಾಗಿ ಬಂದ ಸುಮಾರು 1.30 ಕೋಟಿ ರೂಪಾಯಿಗಳು ಏನಾದವು? ಎಂದು ಅರಿಯದಷ್ಟು ಜನ ದಡ್ಡರಾಗಿರಲಿಲ್ಲ. ಮುದ್ನಾಳರ ಫ್ಯಾಮಿಲಿ ಸದಸ್ಯರನ್ನು ನೋಡುತ್ತಲೇ ತಾಲೂಕಾ ಪಂಚಾಯತಿ, ಸಿಡಿಪಿಓ ಕಚೇರಿ, ಪಿಡಬ್ಲೂಡಿ ಮತ್ತು ತಹಶೀಲ ಕಾರ್ಯಾಲಯಗಳ ನೌಕರರ ಕೈಗಳು ಜೇಬಿನೊಳಗೆ ನೋಟು ಎಣಿಸುತ್ತಿದ್ದ ಸಂಗತಿ ಎಲ್ಲರೂ ಬಲ್ಲಂಥದ್ದು.

ಈ ಎಲ್ಲಾ ಕಾರಣಗಳಿಂದಾಗಿ ಡಾ.ಮುದ್ನಾಳ ಯಾದಗಿರ ಜನ ನೀಡಿದ ಕಿಕ್‌ನಿಂದ ನೇರ ಭೀಮಾ ನದಿಗೆ ಬಂದು ಬಿದ್ದಿದ್ದಾರೆ. ಅಲ್ಲಿಂದ ಅವರು ಎದ್ದು

ಶರಣಬಸಪ್ಪ ದರ್ಶನಾಪುರ ಗೆದ್ದದ್ದು ಹೇಗೆ?


ದರ್ಶನಾಪುರ


ಶಿವ[illegible]ರಪ್ಪ ಪಾಟೀಲ

ಈ ಬಾರಿ ಶಹಾಪುರದಿಂದ ಗೇಟ್ ಪಾಸ್ ಪಡೆಯಬೇಕಿದ್ದ ಶರಣಬಸಪ್ಪ ದರ್ಶನಾಪುರ ಫಿನಿಕ್ಸ್ ಪಕ್ಷಿಯಂತೆ ಗೆದ್ದುಬಂದಿದ್ದಾನೆ. ಆದರೆ ಗೆಲ್ಲುವ ಉಮೇದಿನಲ್ಲಿದ್ದ ಶಿವಶೇಖರಪ್ಪ ಪಾಟೀಲ ಶಿರವಾಳ ಮಕಾಡೆ ಮಲಗಿಬಿಟ್ಟದ್ದಾನೆ. ಇದಕ್ಕೆ ಕಾರಣವೇನಿರಬಹುದು? ಪಾಟೀಲನ ಬೆನ್ನಿಗೆ ಚೂರಿ ಇರಿದವರ್‍ಯಾರು?

ಶಿರವಾಳ ನಿಜಕ್ಕೂ 'ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆ ಒದೆಯಬೇಡಿ' ತರಹದ ಸಂಭಾವಿತ. ಕಳೆದ ಬಾರಿ ದರ್ಶನಾಪುರನ ವಿರುದ್ಧ ನಿಂತು 20 ಸಾವಿರ ಮತಗಳ ಅಂತರದಿಂದ ಸೋತಾಗಲೇ ಈತ ಮುಂದಿನ ಬಾರಿಯ ಚುನಾವಣೆಯಲ್ಲಿ ಗೆಲ್ಲುವ ತಯ್ಯಾರಿ ಮಾಡಬೇಕಿತ್ತು. ಹೇಗಿದ್ದರೂ ದರ್ಶನಾಪುರ ಶಹಾಪುರದ ಪುರಸಭೆಯಲ್ಲಿ, ತಾಲೂಕಾ ಪಂಚಾಯತಿಗಳಲ್ಲಿ, ಕೆಬಿಜೆಎನ್‌ಎಲ್‌ನಲ್ಲಿ, ಪಿಡಬ್ಲೂಡಿಯಲ್ಲಿ ಇತರೆ ಸರಕಾರಿ ಕಚೇರಿಗಳಲ್ಲಿ ಮಾಡಿದ ಗೋಲ್‌ಮಾಲ್‌ಗಳಿಗೆ ಲೆಕ್ಕವಿಲ್ಲ. ಅವನ್ನೆಲ್ಲಾ ಜನಸಾಮಾನ್ಯರಿಗೆ ತೋರಿಸುವ ಮೂಲಕ ಶಿರವಾಳ ರಾಜಕೀಯವಾಗಿ ತನ್ನ ಮರುಹುಟ್ಟು ಪಡೆಯಬೇಕಿತ್ತು. ಆದರೆ ದುರಾದೃಷ್ಟವಶಾತ್ ಶಿರವಾಳ ಅಂಥದ್ದನ್ನೆಲ್ಲಾ ಮಾಡಲೇ ಇಲ್ಲ.


ಹಾಲಿ ಶಾಸಕರ ದುಂಡಾವರ್ತನೆ ಪ್ರಶ್ನಿಸುವುದು ಶಿರವಾಳರಿಗೆ ಇರುಸು ಮುರುಸಾಗುತ್ತದೆ. ಇದರಿಂದಾಗಿಯೆ ಆತ ಚುನಾವಣೆಯಲ್ಲಿ ಸೋತ ನಂತರ ಐದು ವರ್ಷಗಳ ಕಾಲ ಮನೆ ಸೇರಿಬಿಡುತ್ತಾರೆ. ಇದರಿಂದಾಗಿ ಮತಕ್ಷೇತ್ರ ಲೂಟಿಯಾಗುತ್ತದೆ. ವಿರೋಧಿ ನಾಯಕನಿಲ್ಲದೆ ಜನ ಕೂಡ ಅನಿವಾರ್ಯವಾಗಿ ಸಹಿಸಿಕೊಂಡು ಸುಮ್ಮನಿರುತ್ತಾರೆ. ಅದಷ್ಟೇ ಅಲ್ಲದೆ ಮೊನ್ನಿನ ಚುನಾವಣೆಯಲ್ಲಿ ಶಿರವಾಳರೊಂದಿಗೇ ಇದ್ದು ಅವರು ಕುಳಿತಿದ್ದ ದೋಣಿಗೇ ತೂತು ಕೊರೆದವರೂ ಇದ್ದಾರೆ. ಇದು ಶಿರವಾಳರಿಗೂ ಗೊತ್ತು. ಇಂದು ನಡೆದಿರುವುದೇ ಜಾತಿ ರಾಜಕೀಯ. ಇದನ್ನು ಪಣವಾಗಿ ಮುಂದಿಟ್ಟುಕೊಂಡು ಆಟ ಆಡಿ ಗೆದ್ದು ಬಂದವನು ದರ್ಶನಾಪುರ. ಇದನ್ನೆಲ್ಲ ಶಿರವಾಳ ಅರಿಯುವುದು ಯಾವಾಗ?

ಶಹಾಪುರ ಪಟ್ಟಣದ ಮಲ್ಲಣ್ಣ ಮಡ್ಡಿ ಹೇಗಿದ್ದರೂ ದರ್ಶನಾಪುರನ ವಿರುದ್ಧ ಬಹಿರಂಗ ಸಮರಕ್ಕೆ ರೆಡಿಯಾಗಿದ್ದಾನೆ. ದರ್ಶನಾಪುರನೊಂದಿಗೆ ಮೂರು ದಶಕಗಳಿಗೂ ಹೆಚ್ಚು ಕಾಲ ಸಂಬಂಧ ಇಟ್ಟುಕೊಂಡಿದ್ದ ಮಡ್ಡಿಗೆ ಆತನ ನೀರಿನ ಆಳ ಎಷ್ಟು? ಅವರ ಹರವು ಇನ್ನೆಷ್ಟು? ಎಂಬುದೆಲ್ಲ ಚೆನ್ನಾಗಿ ಗೊತ್ತಿದೆ. ಆತನನ್ನು ತನ್ನ ಜೊತೆಯಲ್ಲಿ ಇಟ್ಟುಕೊಂಡು ಶಹಾಪುರ ತಾಲೂಕಿನಾದ್ಯಂತ ಮಿಂಚಿನಂತೆ ಸಂಚರಿಸಬೇಕು. ಹೊಸ ಮನ್ವಂತರವನ್ನು ಹುಟ್ಟುಹಾಕಬೇಕು. ತನಗೆ ಮತಕೊಟ್ಟ, ತನ್ನ ವ್ಯಕ್ತಿತ್ವದಲ್ಲಿ ನಂಬಿಕೆ ಇಟ್ಟ 36 ಸಾವಿರಕ್ಕೂ ಹೆಚ್ಚು ಜನರ ದನಿಗೆ ಧ್ವನಿಯಾಗಬೇಕು.

ಒಟ್ಟಿನಲ್ಲಿ ಶಿರವಾಳ ಮತ್ತೆ ತಾಲೂಕಿನಾದ್ಯಂತ ಜನಜನಿತನಾಗಬೇಕು. ಆವಾಗಲೆ ಜನ ಈತನ ಹಿಂದೆ ಬರುತ್ತಾರಲ್ಲದೆ ಹೇಡಿಯಂತೆ ಮನೆಯಲ್ಲಿ ಕುಳಿತುಕೊಳ್ಳುವ ಉತ್ತರಕುಮಾರನ ಹಿಂದೆ ಯಾರೂ ಬರಲಾರರು. ಶಿರವಾಳ ನಿಜವಾದ ವಿರೋಧ ಪಕ್ಷವಾಗಿ ಕೆಲಸಮಾಡಿದರೆ ಮಾತ್ರ ದರ್ಶನಾಪುರನ ಬೇರುಗಳು ಅವು ಎಷ್ಟೇ ಆಳವಾಗಿದ್ದರೂ ಉಳಿಯಲಾರವು.

ಆದರೆ ಅಂತಹ ತಾಕತ್ತು ಶಿರವಾಳರಿಗೆ ಇವೆಯೇ?

■ ವಿಶ್ವಾರಾಧ್ಯ ಸತ್ಯಂಪೇಟೆ


ಗೋವಿಂದಪ್ಪ ಶಿರವಾಳ್ಕರ್

ಸೇಡಂ: ಸಿಡಿಪಿಓ ಕಚೇರಿಯಲ್ಲಿ

ಗೋವಿಂದಪ್ಪನ ಗುದುಮುರುಗಿ!

ಕರ್ನಾಟಕದಾದ್ಯಂತ ಇರುವ ಸಿಡಿಪಿಓ ಕಚೇರಿಗಳನ್ನು ಹಲವರು ತಮಾಷೆಗಾಗಿ ರಸಿಕರ ಕಚೇರಿ ಎಂದು ಕರೆಯುತ್ತಾರೆ. ಈ ಮಾತಿಗೆ ಅಪವಾದ ಎಂಬಂತೆ ಅಲ್ಲಲ್ಲಿ ಕೆಲವು ಕಚೇರಿಗಳು ಇರಬಹುದಾದರೂ ಸೇಡಂ ತಾಲೂಕಿನ ಸಿಡಿಪಿಓ ಕಚೇರಿಗಂತೂ ಈ ಮಾತು ನೂರಕ್ಕೆ ನೂರು ಒಪ್ಪುತ್ತದೆ.

ಈ ಕಚೇರಿಯ ಮುಖ್ಯಾಧಿಕಾರಿ ಗೋವಿಂದಪ್ಪ ಟ.ಶಿರವಾಳ್ಕರ ಎಂತಹ ಸ್ತ್ರೀ ಲೋಲನೆಂದರೆ ಆತನಿಗೆ ಪುರುಷರನ್ನು ಕಂಡರೆ ಒಂಥರಾ ಅಲರ್ಜಿ. ಹಾಗಂತಲೆ ತನ್ನ ಕಚೇರಿಯ ತುಂಬೆಲ್ಲ ಗಲ್‌ಗಲ್ ಬಳೆ ಸದ್ದು ಮಾಡುವ ಮಹಿಳೆಯರೆ ತುಂಬಿರಬೇಕೆಂಬುದು ಇತನ ಅಭೀಪ್ಸೆ.


ಅನುರಾಧ

ಈ ಗೋವಿಂದಪ್ಪ ಎಂಬ ಖನಾತಿ ಆಸಾಮಿ ತನ್ನ ಕೆಲಸ ಬೊಗಸೆ ಬಿಟ್ಟು ಹೆಣ್ಣುಮಕ್ಕಳ ಹಿಂದೆ ತಿರುಗುವುದನ್ನು ಆಕ್ಷೇಪಿಸಿದ್ದಕ್ಕೆ ಕಚೇರಿಯ ಸೀನಿಯರ್ ಎಫ್‌ಡಿಸಿ ಸದಾಶಿವ ಎಂಬಾತ ಎತ್ತಂಗಡಿಯಾದ. ತೀರಾ ಇತ್ತೀಚೆಗೆ ಗೋವಿಂದಪ್ಪನ ಜೊಲ್ಲು ಸುರಿಸುವ ಚಟಕ್ಕೆ ಅಡಚಣೆ ಮಾಡಿದ ಎಂಬ ಕಾರಣಕ್ಕೆ ಶಿವಶರಣಪ್ಪ ಎಂಬ ಎಸ್‌ಡಿಸಿಯನ್ನು ಡೆಪ್ಯುಟೇಷನ್ ಮೇಲೆ ಬೇರೆಕಡೆ ವರ್ಗಾಯಿಸಿದ್ದಾನೆ.

ಇದಕ್ಕೆಲ್ಲ ಮುಖ್ಯ ಕಾರಣ ಇದೇ ಕಚೇರಿಯಲ್ಲಿ ಮಹಿಳಾ ಮೇಲ್ವಿಚಾರಕಿಯಾಗಿ ಕೆಲಸ ಮಾಡುವ ಅನುರಾಧ ಎಂಬಾಕೆ ಎಂಬುದನ್ನು ಕಚೇರಿಯ ಟೇಬಲ್-ಕುರ್ಚಿಗಳೇ ಸಾರಿ ಹೇಳುತ್ತಿವೆ. ಹೆಸರಿಗೆ ಮಾತ್ರ ಗೋವಿಂದಪ್ಪ ಸಿಡಿಪಿಓ ಆಗಿದ್ದರೂ ಕಚೇರಿಯ ಕಾರುಬಾರೆಲ್ಲ ಈ ಅನುರಾಧಳದ್ದೇ ಎಂದರೆ ತಪ್ಪಾಗಲಿಕ್ಕಿಲ್ಲ. ಇದು ಒಂದೊಂದು ಸಲ ಎಷ್ಟು ಅತಿರೇಕಕ್ಕೆ ಹೋಗುತ್ತದೆಂದರೆ ಉಪನಿರ್ದೇಶಕರು ಕರೆದ ಮೀಟಿಂಗ್‌ಗಳಿಗೂ ಈ ಅನುರಾಧಳೇ ಹಾಜರಾಗುತ್ತಾಳೆ. ಇದನ್ನು ಚೆನ್ನಾಗಿ ಅರಿತುಕೊಂಡಿರುವ ಉಪನಿರ್ದೇಶಕ ರಾಧಾಕೃಷ್ಣ ಒಂದು ಸಲ ಮೀಟಿಂಗ್‌ನಲ್ಲಿ ಅನುರಾಧಾ ಏನೇನೋ ಉತ್ತರಿಸುತ್ತಿದ್ದಾಗ ಆಕೆಯನ್ನು ತಡೆದು, "ಹಿಂಗ್ಯ ಮಾಡೇ ಆ ಗೋವಿಂದಪ್ಪ ಶಿರವಾಳ್ಕರ್‌ಗೆ ಹುಚ್ಚು ಮಾಡಿರಿ, ಸುಮ್ನೆ ಕೂಡ್ರಿ" ಅಂದಿದ್ದಾರೆ. ಹೀಗೆ ಛೀಮಾರಿ ಹಾಕಿಸಿಕೊಂಡರೂ ಕಚೇರಿಯ ಎಲ್ಲ ಕೆಲಸಗಳಲ್ಲೂ ಈಕೆ ತನ್ನ ಕೈ ಹಾಕದೆ ಇದ್ದವಳೇ ಅಲ್ಲ. ಇದಕ್ಕೆಲ್ಲ ಗೋವಿಂದಪ್ಪನ ಅನುರಕ್ತತನವೆ ಕಾರಣವಾಗಿದೆ ಎಂದು ಗುಲ್ಲೆದ್ದಿದೆ.

ತಾಲೂಕಿನಾದ್ಯಂತ ಇರುವ ಸ್ತ್ರೀ ಶಕ್ತಿ ಗುಂಪುಗಳಿಗೆ 5,000 ಸಾವಿರ ರೂಪಾಯಿ ಕೊಡುವುದಕ್ಕೆ ಅವರಿಂದ 500 ರೂ.ಗಳ ಭಕ್ಷೀಸು ಪಡೆಯುತ್ತಾನೆ ಗೋವಿಂದಪ್ಪ. ಭಾಗ್ಯಲಕ್ಷ್ಮಿ ಎಂಬ ಸರಕಾರದ ಉಚಿತ ಫಾರಂಗೆ 60 ರೂ.ಗಳಂತೆ ವಸೂಲಿ ಮಾಡುತ್ತಾನೆ. ತಾಲ್ಲೂಕಿನ ಪ್ರತಿ ಅಂಗನವಾಡಿ ಕೇಂದ್ರಗಳಿಗೆ ಮಂಜೂರಾದ ಆಹಾರದಲ್ಲಿ 25% ಕಡಿಮೆ ಮಾಡಿ ಕಳಿಸುತ್ತಾನೆ. ತೀರಾ ಇತ್ತೀಚೆಗೆ ನಡೆದ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಯಲ್ಲೂ ಗೋವಿಂದಪ್ಪ ತನ್ನ ಕೈ ಬೆಚ್ಚಗೆ ಮಾಡಿಕೊಂಡ ನಂತರವೇ ಅವರ ಮನೆ ಬಾಗಿಲಿಗೆ ನೇಮಕಾತಿಯ ಪತ್ರಗಳು ತಲುಪಿಸಿದ್ದಾನೆ.

ಸಿಡಿಪಿಓ ಕಚೇರಿಯನ್ನು ತನ್ನ ಖಾಸಗಿ ಕೊಠಡಿಯನ್ನಾಗಿ ಪರಿವರ್ತಿಸಿರುವ, ತನ್ನ ತೆವಲಿಗಾಗಿ ಕಚೇರಿಯ ಸಿಬ್ಬಂದಿಗಳನ್ನು ಬಳಸಿಕೊಳ್ಳುವ ಗೋವಿಂದಪ್ಪನನ್ನು ಕಲಬುರ್ಗಿ ಜಿಲ್ಲಾ ಪಂಚಾಯತಿಯ ಕಾರ್ಯದರ್ಶಿ ಸಿ.ಎಸ್.ಜಾಫರ್ ವಿಚಾರಿಸಿಕೊಳ್ಳುತ್ತಾರೋ? ಅಥವಾ ಗೋವಿಂದಪ್ಪನ ಗುದುಮುರುಗಿ ಕಂಡ ಜನಗಳೆ ವಿಚಾರಿಸಿಕೊಳ್ಳುತ್ತಾರೋ? ಕಾದು ನೋಡಬೇಕು.

■ ವರದಿಗಾರ



ಪಾಪರ್ 'ಬಂ' ಸೋತು ಮಲಗಿದರು

ಶಿವಮೊಗ್ಗದಲ್ಲಿ 'ಬಂ' ಮುಗುಚಿ ಬಿದ್ದಿದ್ದಾರೆ. ಜೊತೆಗೆ ಇಬ್ಬರು ಮಕ್ಕಳ ಭವಿಷ್ಯವನ್ನೂ ಮಣ್ಣುಪಾಲು ಮಾಡಿದ್ದಾರೆ. ಅವರ ಅತಿಯಾದ ಆತ್ಮವಿಶ್ವಾಸ ಇಳಿವಯಸ್ಸಿನಲ್ಲಿ ಅವರಿಗೆ ಕೈಕೊಟ್ಟಿದೆ. ಎಲ್ಲರಿಗೂ 'ಬಂ' ಬುದ್ಧಿ ಕಲಿಸುತ್ತಾರೆ ಎಂದು ಕಾಗುತ್ತಿದ್ದ ಬೆಂಬಲಿಗರೀಗ 'ಸಾಹೇಬ್ರು ಕಾಲ ಮುಗೀತು' ಎಂದು ಮಾತನಾಡಿಕೊಳ್ಳಲಾರಂಭಿಸಿದ್ದಾರೆ.

ಒಂದು ಕಾಲದಲ್ಲಿ 'ಸೋಲಿಲ್ಲದ ಸರದಾರ' ಎನಿಸಿಕೊಂಡಿದ್ದ 'ಬಂ' ಸೋತು ಸುಣ್ಣವಾಗುತ್ತಿದ್ದಂತೆಯೇ ಈಗ ಎಲ್ಲರಿಗೂ ಬೇಡವಾಗಿದ್ದಾರೆ. "ಸಾಹೇಬ್ರ ಜೊತೆಗಿದ್ರೆ ಏನಾದರೂ ಅಧಿಕಾರ ಸಿಗುತ್ತೆ" ಎಂದು ಹಿಂದೆ-ಮುಂದೆ ಓಡಾಡಿಕೊಂಡಿದ್ದವರೆಲ್ಲಾ ಈಗ ದೂರವಾಗುತ್ತಿದ್ದಾರೆ. ಯಾಕೆಂದರೆ 'ಬಂ' ಈಗ ನಂಬಿಕಸ್ಥ ಮತದಾರರನ್ನು ಮಾತ್ರ ದೂರಮಾಡಿಕೊಂಡಿಲ್ಲ, ಜೊತೆಗೆ ಜೇಬನ್ನೂ ಖಾಲಿ ಮಾಡಿಕೊಂಡಿದ್ದಾರೆ.

ಹೌದು, ಬಂಗಾರಪ್ಪರ ಬಳಿ ಹಣ ಇಲ್ಲ, ಇದು ಅವರು ಶಿಕಾರಿಪುರದಲ್ಲಿ ಮಕಾಡೆ ಮಲಗಲು ಕಾರಣ ಎಂಬುದು ಅವರ ಬೆಂಬಲಿಗರ ಆಂಬೋಣ.

ಚುನಾವಣೆಗೂ ಮುನ್ನವೇ ಸೋತಿದ್ದರು!

ಒಂದು ಕಾಲದ ಸಮಾಜವಾದಿ ಹುಲಿ, ಈ ಇಳಿವಯಸ್ಸಿನಲ್ಲಿ ಅದು ಹೇಗೆ ಲೆಕ್ಕತಪ್ಪಿದರೋ ಗೊತ್ತಿಲ್ಲ, ಯಾಕೆಂದರೆ ಚುನಾವಣೆಗೂ ಮುನ್ನವೇ ಅವರು ಸೋತಿದ್ದರು! ಆದರೆ ಧೈರ್ಯ, ಉಡಾಫೆತನ ಮಾತ್ರ ಕಮ್ಮಿಯಾಗಿರಲಿಲ್ಲ, ಇತ್ತೀಚೆಗೆ ಅವರ ಹಣದ ಮೂಲ ಎಲ್ಲಾ ಬತ್ತಿಹೋಗಿದ್ದು ತಮ್ಮ ಹುಟ್ಟು ಹಬ್ಬ ಆಚರಿಸಿಕೊಳ್ಳಲೂ ಕಾಸಿರಲಿಲ್ಲ, ಆಗ ಜೊತೆಗಿದ್ದ ಬೆಂಬಲಿಗರೇ ಹಣ ಕೊಡಬೇಕಾಗಿ ಬಂದಿತ್ತು, 'ಬಂ' ಎಂದಾದರೂ ಕೈ ಹಿಡಿಯುತ್ತಾರೆ ಎಂದು ನಂಬಿಕೊಂಡಿದ್ದ ಹಾಲಪ್ಪ, ಒಕ್ಕಲಿಗರ ಸಂಘದ ನಿರ್ದೇಶಕ ಕಡೂರು ದಿನೇಶ್ ಇತ್ಯಾದಿತರರು ದುಡ್ಡು ಕೊಟ್ಟು ಕೊಟ್ಟು ಸುಸ್ತಾಗಿದ್ದರು.

'ಬಂ' ಕಾಂಗ್ರೆಸ್ ಬಿಟ್ಟು, ಬಿಜೆಪಿಗೆ ಹಾರಿ ಅಲ್ಲಿಂದ ಕರ್ನಾಟಕದಲ್ಲಿ ನೆಲೆಯೇ ಇಲ್ಲದ ಸಮಾಜವಾದಿ ಪಕ್ಷ ಸೇರುತ್ತಿದ್ದಂತೆಯೇ ಅವರು ಕೇಳಿದರೆ ಕಣ್ಣುಮುಚ್ಚಿ ಸೂಟ್‌ಕೇಸ್ ತಂದಿಡುತ್ತಿದ್ದವರೆಲ್ಲಾ ದೂರವಾಗಿದ್ದರು. "ಅವರಿನ್ನು ಪಕ್ಷಕಟ್ಟಿ, ಅಧಿಕಾರ ಹಿಡಿದು ನಾವು ಹೇಳೋ ಕೆಲಸ ಮಾಡೋಹೊತ್ತಿಗೆ ದುಡ್ಡು ಕೊಟ್ಟ ನಾವು ಹಳ್ಳಾ ಹಿಡಿದಿರ್ತೀವಿ" ಎಂದು ಹಣ ನೀಡುತ್ತಿದ್ದವರೆಲ್ಲಾ ಮಾತನಾಡಿಕೊಳ್ಳತೊಡಗಿದರು.

ಸಾಹೇಬ್ರ ಕೈಯಲ್ಲಿ ಕಾಸಿಲ್ಲ ಎಂಬುದು ಗೊತ್ತಾಗುತ್ತಿದ್ದಂತೆಯೇ ಅವರೇ ಬೆನ್ನುತಟ್ಟಿ ಬೆಳೆಸಿದ್ದ ಹಾಲಪ್ಪ ಗೋಪಾಲಕೃಷ್ಣ ದೂರವಾಗುವ ಸುಳಿವು ನೀಡಿದರು. ಇವರಿಬ್ಬರು ಹೀಗೆ ಕೈಕೊಡುತ್ತಾರೆ ಎಂದು ಗೊತ್ತಾಗುತ್ತಿದ್ದಂತೆಯೇ ಒಂದಿಷ್ಟು ದುಡ್ಡಿರುವ ಹಾಲಪ್ಪನ್ನಾದರೂ ಉಳಿಸಿಕೊಳ್ಳೋಣ ಎಂದು ಗೋಪಾಲಕೃಷ್ಣನ ವಿರುದ್ಧ ಈ ಹರತಾಳು ಹಾಲಪ್ಪನನ್ನು ಎತ್ತಿಕಟ್ಟಿದರು. ಅದು ಹೇಗೆ ಹಾಲಪ್ಪನಿಗೆ ಜ್ಞಾನೋದಯವಾಯಿತೋ ಚುನಾವಣೆಗೂ ಮುನ್ನ ಯಡ್ಡಿ ಕಾಲಿಗೆ ಬಿದ್ದು 'ಶರಣು ಶರಣು' ಎಂದೇ ಬಿಟ್ಟರು. ಈಗ ಮಂತ್ರಿಯೂ ಆಗಿದ್ದಾರೆ.



ಇಳಿವಯಸ್ಸಿನಲ್ಲಿ ಹೀಗೆಲ್ಲಾ ಆಗುತ್ತದೆಯೆಂದು ಲೆಕ್ಕಹಾಕಿರದ 'ಬಂ' ಸೀದಾ ಸೋನಿಯಾರ 'ಕೈ' ಹಿಡಿಯಲು ಮುಂದಾದರು. ಇದಕ್ಕೆ ಸಮಾಜವಾದಿ ಪಕ್ಷದ ನಾಯಕ ಮುಲಾಯಂ ಒಪ್ಪಿಗೆ ಪಡೆಯಲೆಂದು ದೆಹಲಿಗೆ ಹೋದರೆ, ಅವರು 'ಕಾಲ ಪಕ್ವವಾಗಿಲ್ಲ' ಎಂದು ಹೇಳಿ ಕಳಿಸಿದರು. ಒಂದಿಷ್ಟು ದುಡ್ಡು ಕೇಳಿದ್ದರೆ ಮುಲಾಯಂ ಇಲ್ಲ ಎನ್ನುತ್ತಿರಲಿಲ್ಲವೇನೋ, ಅದಕ್ಕೆ 'ಬಂ' ಅಹಂ ಅಡ್ಡಿ ಬಂದಿತ್ತು, ಇತ್ತ ಕಾಂಗ್ರೆಸ್ ನಾಯಕರೂ ಬಾಯಿಗೆ ಬಂದಂತೆ ಮಾತನಾಡಲಾರಂಭಿಸಿದರು.

ಇನ್ನು ತನ್ನನ್ನು ಎಂದೂ ಟೀಕಿಸದ ದೇವೇಗೌಡರ ಜೊತೆ ಹೋಗೋಣ ಎಂದರೆ, ಅವರು ತಮ್ಮ ಮಗನ ದಾರಿಗೆ ಇವರೆಲ್ಲಿ ಅಡ್ಡ ಆಗುತ್ತಾನೋ ಎಂಬ ಕಾರಣಕ್ಕೆ ಗೌಡರು ಸಿಂಡರಿಸಿದ ಮುಖ ಸಡಲಿಸಲೇ ಇಲ್ಲ, ಒಟ್ಟಾರೆಯಾಗಿ ಸೋತ 'ಬಂ'ಯಾರಿಗೂ ಬೇಡವಾಗಿದ್ದರು.

ಎದೆಗುಂದದೆ ಕಣಕ್ಕೆ

'ಬಿದ್ದರೂ ಮೂಗು ಮೇಲೆ' ಎನ್ನುತ್ತಲೇ ರಾಜಕೀಯ ಮಾಡಿಕೊಂಡು ಬಂದಿದ್ದ 'ಬಂ' ಇಷ್ಟೆಲ್ಲಾ ಆದರೂ ಚುನಾವಣೆಯಲ್ಲಿ ನಿಲ್ಲುವ ತಮ್ಮ ನಿಲುವಿನಿಂದ ಹಿಂದೆ ಸರಿಯಲಿಲ್ಲ, "ತಮ್ಮ ಆರೋಗ್ಯ ಬೇರೆ ಸರಿ ಇಲ್ಲ ಯಾಕೆ ಸುಮ್ನೆ ರಿಸ್ಕು, ಆರೋಗ್ಯದ ಕಾರಣ ನೀಡಿ ಸುಮ್ಮನಿದ್ದು ಬಿಡಿ" ಎಂದು ಆಪ್ತರು ಹೇಳಿದ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ, "ನಾನು ಈಗಾಗಲೇ ವಿಧಾನಸಭೆ ಪ್ರವೇಶಿಸುತ್ತೇನೆ ಎಂದು ಹೇಳಿಯಾಗಿದೆ, ಈಗ ಹಿಂದೆ ಸರಿಯುವ ಮಾತೇ ಇಲ್ಲ" ಎಂದು ಮತ್ತೆ ತಮ್ಮ ಹುಂಬುತನ ತೋರಿದರು.

ಆಶ್ಚರ್ಯವೆಂದರೆ ಈ ಬಾರಿ ಯಾವ ಕ್ಷೇತ್ರದಿಂದ ಸ್ಪರ್ಧಿಸಬೇಕೆಂಬ ಬಗ್ಗೆ 'ಬಂ' ಚುನಾವಣೆಯ ದಿನಾಂಕ ಪ್ರಕಟವಾಗುವವರೆಗೂ ನಿರ್ಧರಿಸಿರಲಿಲ್ಲ, ತಾವೇ ತಮ್ಮ ರಾಜಕೀಯ ನಡೆ ನಿರ್ಧರಿಸಿ, ನಂತರ ಅಭಿಮಾನಿಗಳ ಒತ್ತಡಕ್ಕೆ ಮಣಿದು ಈ ತೀರ್ಮಾನ ತೆಗೆದುಕೊಂಡೆ ಎಂದು ಹೇಳಿಕೊಂಡು ರಾಜಕಾರಣ ಮಾಡುತ್ತಿದ್ದ 'ಬಂ' ಈ ಬಾರಿ ಗೊಂದಲಕ್ಕೆ ಸಿಕ್ಕಿಕೊಂಡಿದ್ದರು.

ತಾವು ಸುಲಭವಾಗಿ ಗೆದ್ದು ಬರುತ್ತಿದ್ದ ಸೊರಬವನ್ನು ಮಂಗ ಮಧುಗೆ ಬಿಟ್ಟುಕೊಟ್ಟಾಗಿತ್ತು, ಸಾಗರದಲ್ಲಿ ನಿಲ್ಲುವ ಯೋಚನೆ ಮಾಡುತ್ತಿದ್ದಂತೆಯೇ 'ಬಂ' ಎಂದರೆ ಕನಸಿನಲ್ಲಿಯೂ ಬೆಚ್ಚಿ ಬೀಳುವ ಕಾಗೋಡು ತಿಮ್ಮಪ್ಪ ಬಂದು ಕಾಲಿಗೆ ಬಿದ್ದಾಗಿತ್ತು, ಇನ್ನು ಉಳಿದಿದ್ದು ಶಿಕಾರಿಪುರವೊಂದೇ. ಹೇಗೂ ಯಡಿಯೂರಪ್ಪ ಇದ್ದರೂ ಲೋಕಸಭಾ ಚುನಾವಣೆಯಲ್ಲಿ ಈ ಕ್ಷೇತ್ರದ ಜನ ಲೀಡ್ ತಂದುಕೊಟ್ಟಿದ್ದಾರೆ ಎಂಬ ಲೆಕ್ಕಾಚಾರಕ್ಕೆ ಬಂದ 'ಬಂ' ಶಿಕಾರಿಪುರದ ಕಣಕ್ಕೆ ಜಿಗಿದೇ ಬಿಟ್ಟರು.

ತಪ್ಪು ಲೆಕ್ಕಾಚಾರ

ದುಡ್ಡಿಲ್ಲದೆ ಹೈರಾಣರಾಗಿದ್ದ 'ಬಂ', ಯಡ್ಡಿ ವಿರುದ್ಧ ನಿಂತರೆ ಸಾರಾಯಿ ಲಾಬಿ ಕೆಲಸ ಮಾಡಿ, ಚುನಾವಣೆಗೆ ಬೇಕಾಗುವಷ್ಟು ಹಣ ಹರಿದು ಬರುತ್ತದೆ ಎಂದು ಮತ್ತೊಂದು ತಪ್ಪು ಲೆಕ್ಕಾಚಾರ ಹಾಕಿದರು. ಪಕ್ಕದ ಮನೆಯವರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡಿದ ಹಾಗೆ ಕಾಂಗ್ರೆಸ್ ಮತ್ತು ಜೆಡಿಎಸ್ 'ಬಂ' ಸಾಮರ್ಥ್ಯವನ್ನು ಅಳೆದ ಹಾಗೂ ಆಯಿತು, ಅವರು ಗೆದ್ದರೆ ತಾವೇ ಕ್ರೆಡಿಟ್ ಪಡೆದರಾಯಿತು ಎಂದು 'ಬಂ'ಗೆ ಬೆಂಬಲ ಘೋಷಿಸಿಯೇ ಬಿಟ್ಟವು. ಇದು 'ಬಂ'ರ ಪಿತ್ತವನ್ನು ಮತ್ತಷ್ಟು ನೆತ್ತಿಗೇರಿಸಿತು.

ಆದರೆ ತಮ್ಮ ಪರವಾಗಿ ಪ್ರಾಮಾಣಿಕವಾಗಿ ಕೆಲಸಮಾಡುವ ಒಬ್ಬ ನಾಯಕ, ಕಾರ್ಯಕರ್ತ ಶಿಕಾರಿಪುರದಲ್ಲಿಲ್ಲ ಎಂಬುದು 'ಬಂ' ತಲೆಗೆ ಹೋಗಲೇ ಇಲ್ಲ, 'ಬಂ' ರಂಗ ಪ್ರವೇಶದಿಂದ ಒಂದು ರೀತಿಯ ಥ್ರಿಲ್ ಆದ ಶಿಕಾರಿಪುರದ ಜನ 'ಬಂ' ನಾಮಪತ್ರ ಸಲ್ಲಿಸಿದ ದಿನದಂದು ಸಾವಿರಾರು ಸಂಖ್ಯೆಯಲ್ಲಿ ಸೇರಿಬಿಟ್ಟರು. 'ಬಂ' ಹಿಂದಿನಂತೆಯೇ ಹಣ ನೀಡಬಹುದು ಎಂಬ ಲೆಕ್ಕಾಚಾರಕ್ಕೆ ಜೋತು ಬಿದ್ದು ಅಷ್ಟೊಂದು ಸಂಖ್ಯೆಯಲ್ಲಿ ಬಂದಿದ್ದ ಜನರನ್ನು ನೋಡಿದ ಯಡ್ಡಿ ಗ್ಯಾಂಗ್ ಎಚ್ಚೆತ್ತು ಬಿಟ್ಟಿತು. ಮುಂದೆ 'ಬಂ'ರ ಯಾವುದೇ ರಾಜಕೀಯ ಆಟ ನಡೆಯದಂತೆ ನೋಡಿಕೊಳ್ಳಲಾರಂಭಿಸಿತು.

ನಿಜ ಹೇಳಬೇಕೆಂದರೆ ಈ ಬಾರಿ ಯಡ್ಡಿ ಗ್ಯಾಂಗ್ 'ಬಂ'ರ ರಾಜಕೀಯ ತಂತ್ರವನ್ನೇ ಅನುಸರಿಸಿ, ಬಂಗಾರಪ್ಪರನ್ನು ಶಿವಮೊಗ್ಗದಲ್ಲಿ ಕಟ್ಟಿ ಹಾಕುವ ಕೆಲಸ ಮಾಡುತ್ತಾ ಬಂದಿತು. ಜೊತೆಗೆ 'ಬಂ' ಈ ಹಿಂದೆ ಮಾಡುತ್ತಿದ್ದಂತೆಯೇ ಶಿಕಾರಿಪುರದಲ್ಲಿ ಸಣ್ಣ-ಪುಟ್ಟ ಜಾತಿಗಳ ಸಮಾವೇಶ ನಡೆಸಿದ್ದ ಯಡ್ಡಿ, 'ಬಂ'ರಂತೆಯೇ ಆಶ್ವಾಸನೆಗಳ ಮಳೆಸುರಿಸಿದ್ದರು. ಕೆಲ ಸಮಾಜದ ಮುಖಂಡರ ಮೂಗಿಗೆ ತುಪ್ಪ ಕೂಡ ಸವರಿದ್ದರು. ಈ ಮಧ್ಯೆ ಸಾಹೇಬ್ರು ಸಹವಾಸ ಬಿಟ್ಟು ಶರಣೋ ಎಂದು ಬಂದ ಹಾಲಪ್ಪ, ಗೋಪಾಲಕೃಷ್ಣಗೆ ಆರ್‌ಎಸ್‌ಎಸ್ ಮಂದಿ ಎಷ್ಟು ಬಾಯಿ ಬಡಿದುಕೊಂಡರೂ ಕೇಳದೆ ಟಿಕೆಟ್ ಕೊಟ್ಟಿದ್ದರು. ಇದರಿಂದ ಈಡಿಗರ ಮತಗಳನ್ನು ಪಡೆಯಬಹುದೆಂದ ಯಡ್ಡಿಯ ಲೆಕ್ಕಾಚಾರ ವರ್ಕ್‌ಔಟ್ ಆಗಿದೆ.

ಇದ್ಯಾವುದನ್ನೂ ಗ್ರಹಿಸದ 'ಬಂ' ಹೆಬ್ಬುಲಿಯಂತೆ ಘರ್ಜಿಸುತ್ತ ಯಡ್ಡಿ ಗ್ಯಾಂಗ್ ಇನ್ನಷ್ಟು ಹುಷಾರಿನಿಂದ ಕೆಲಸ ಮಾಡಲು ಪ್ರೇರಣೆ ನೀಡಿದರು.


ಕೇಳಿದವರಿಗೆಲ್ಲಾ ದುಡ್ಡು!

ನಿಜವಾಗಿಯೂ 'ಬಂ' ಸ್ಪರ್ಧೆಯಿಂದ ಯಡ್ಡಿ ವಿಚಲಿತರಾಗಿದ್ದರು. ಅನಂತ್‌ಕುಮಾರ್ ಬಣ ಪರೋಕ್ಷವಾಗಿ 'ಬಂ'ಗೆ ಬೆಂಬಲ ನೀಡಿ ತಮಗೆ ನೀರು ಕುಡಿಸಬಹುದು ಎಂದು ಅವರು ಇನ್ನಷ್ಟು ಹೆದರಿದ್ದರು.

ಹೀಗಾಗಿ ಎಷ್ಟು ಬೇಕಾದರೂ ಖಾಲಿಯಾಗಲಿ, ದುಡ್ಡು ಚೆಲ್ಲಿ ಎಂದು ಆದೇಶ ನೀಡಿದ್ದರು. ಇಬ್ಬರು ಮಕ್ಕಳು ಅಪ್ಪನನ್ನು ಗೆಲ್ಲಿಸಲೆಂದು ಹಳ್ಳಿ ಹಳ್ಳಿ ಸುತ್ತಿದರು. ಇಲ್ಲಿ ಹಿಂದುಳಿದ ವರ್ಗಗಳ ಮತಗಳೇ ನಿರ್ಣಾಯಕವಾಗಿದ್ದರಿಂದ ಸಣ್ಣ-ಪುಟ್ಟ ಜಾತಿಗಳ ಮುಖಂಡರ ಮನೆಗೆ ಹೋಗಿ, ಕೇಳಿದಷ್ಟು ದುಡ್ಡು ಕೊಟ್ಟು, ಮತಬ್ಯಾಂಕ್ ಭದ್ರಗೊಳಿಸಿದರು. 'ಬಂ' ಪರ ಪ್ರಚಾರಕ್ಕೆಂದು ಓಡಾಡುತ್ತಿದ್ದವರಿಗೆಲ್ಲಾ ಯಡ್ಡಿ ದುಡ್ಡು ಸಂದಾಯವಾಗಿತ್ತು.

ಹೇಳಿ-ಕೇಳಿ ಸಮಾಜವಾದಿ ಪಕ್ಷಕ್ಕೆ ಈ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತ ಮುಖಂಡರೇನೂ ಇರಲಿಲ್ಲ, ಕಾರ್ಯಕರ್ತರಂತೂ ಇದ್ದಿದ್ದು ಬೆರಳೆಣಿಕೆಯಷ್ಟು ಮಂದಿ. ಮಾಜಿ ಜಿ.ಪಂ. ಸದಸ್ಯ ಫಕೀರಪ್ಪ, ಮಾಜಿ ಶಾಸಕ ಟಿ.ಎಸ್.ಮಹಾಲಿಂಗಪ್ಪ, ರಂಗಪ್ಪ ಕೆಪಿಸಿಸಿ ಸದಸ್ಯ ನಗರದ ಮಹಾದೇವಪ್ಪ ಬಂಗಾರಪ್ಪರ ಪರ ಕೆಲಸ ಮಾಡುತ್ತಿದ್ದರು. ಒಂದು ವಾರಗಳ ಕಾಲ ಸಾಹೇಬ್ರು ಪ್ರಚಾರಕ್ಕೆ ಬರುತ್ತಾರೆ, ಕಾಸು ಬೇಕಾದಷ್ಟು ಖರ್ಚುಮಾಡುತ್ತಾರೆ ಎಂದು ನಂಬಿದ್ದ ಇವರಿಗೆ ಚುನಾವಣೆ ಹಿಂದಿನ ದಿನದವರೆಗೂ ಬಂ ಮುಖ ಹಾಕದಿದ್ದುದು 'ಏನೋ ಯಡವಟ್ಟಾಗಿದೆ' ಎಂಬ ಸಂದೇಶವನ್ನು ರವಾನಿಸಿತ್ತು.

ಇನ್ನು ಸುಮ್ಮನಿದ್ದರೆ, ತಮ್ಮ ಕೈಯೂ ಖಾಲಿಯಾಗುತ್ತದೆ ಎಂದು ಯಡ್ಡಿ ಗ್ಯಾಂಗ್ ಇಟ್ಟು ಹೋಗಿದ್ದ ಸೂಟ್‌ಕೇಸನ್ನು ಕೆಲವರು ಎತ್ತಿಕೊಂಡು ಸುಮ್ಮನಾಗಿ ಬಿಟ್ಟರು. ಕೊನೆಗೆ 'ಬಂ' ಬಂದರಾದರೂ ಅವರು ಹಣ ಕೊಡಲಿಲ್ಲ, ಅವರು ಅಂದುಕೊಂಡಂತೆ ಹಣ ಸುರಿಯಲು ಸಾರಾಯಿ ಲಾಬಿಯವರು ಮೂರ್ಖರೇನೂ ಆಗಿರಲಿಲ್ಲ, ಹೀಗಾಗಿ ಕೆಲ ಬೂತ್‌ಗಳಲ್ಲಿ 'ಬಂ'ರ ಹೆಸರು ಹೇಳಿ ಕೆಲಸ ಮಾಡಲೂ ಜನ ಉಳಿದಿರಲಿಲ್ಲ.



ಮತಗಳ ಆಧಾರದ ಮೇಲೆ ಪ್ರತಿ ಸಮಾಜದ ಮುಖಂಡರಿಗೆ ಹತ್ತು-ಹದಿನೈದು-ಇಪ್ಪತ್ತು ಲಕ್ಷ ಚೆಲ್ಲಿದ ಯಡ್ಡಿ ದೊಡ್ಡ ಲೀಡ್‌ನಲ್ಲಿ ಗೆದ್ದು ಬಂದಿದ್ದಾರೆ.

ಯಡ್ಡಿಗೆ ಹೇಳಿ ಮತ ಕೇಳಲು ಹಣಕಾಸು ಸಚಿವರಾಗಿದ್ದಾಗ ಮಾಡಿದ್ದ ಒಂದೆರಡು ಕೆಲಸಗಳಿದ್ದವು. 'ಬಂ'ಗೆ ಹೇಳಿಕೊಳ್ಳಲು ಏನೂ ಇರಲಿಲ್ಲ, ಭಾಷಣ ಮಾಡಲು ಅವರ ಆರೋಗ್ಯವೂ ಸರಿ ಇರಲಿಲ್ಲ, "ಮುಂದೆ ಬರುವುದು ಸಮ್ಮಿಶ್ರ ಸರ್ಕಾರ, ಅದರಲ್ಲಿ ನಮ್ಮ ಪಕ್ಷ ಮಹತ್ವದ ಪಾತ್ರ ವಹಿಸಲಿದೆ" ಎಂಬ 'ಬಂ'ರ ಮಾತುಗಳು ಹಾಸ್ಯದಂತೆ ಶಿಕಾರಿಪುರದ ಜನತೆಗೆ ಕೇಳಿಸುತ್ತಿದ್ದವು. ಏಕೆಂದರೆ ಅವರ ಜೊತೆಗಿರುವ ಮಗ ಮಧು ಸೊರಬದಲ್ಲಿ ಗೆಲ್ಲುವುದೇ ಅನುಮಾನವಾಗಿತ್ತು, ಉಳಿದ ಕ್ಷೇತ್ರಗಳಲ್ಲಿನ ಅಭ್ಯರ್ಥಿಗಳ ಸ್ಪರ್ಧೆ ನೆಪಮಾತ್ರದಂತಿತ್ತು.

ಮುಸ್ಲಿಮರೂ ಯಡ್ಡಿಗೆ ಜೈ ಎಂದರು!

ಈ ಬಾರಿ ಶಿಕಾರಿಪುರದಲ್ಲಿನ ಮುಸ್ಲಿಮರ ಓಟು 'ಬಂ'ಗೆ ಬೀಳಲಿಲ್ಲ, ಒಂದು ರಕ್ಷಣೆಯ ಕಾರಣಕ್ಕೆ ಇನ್ನೊಂದು ಅಭಿವೃದ್ಧಿಗಾಗಿ ಯಡ್ಡಿಯನ್ನು ಬೆಂಬಲಿಸುವುದೇ ಸರಿ ಎಂಬ ತೀರ್ಮಾನಕ್ಕೆ ಅವರು ಬಂದಾಗಿತ್ತು, 'ಬಂ'ರನ್ನು ಬೆಂಬಲಿಸುತ್ತಲೇ ಬಂದಿದ್ದ ಮುಸ್ಲಿಮರಿಗೆ ಅವರು ಎಲ್ಲ ಸಿದ್ಧಾಂತ ಮರೆತು ಯಾವಾಗ ಬಿಜೆಪಿ ಸೇರಿದ್ದರೋ ಅವಾಗಲೇ ಅಭಿಮಾನ ಕಡಿಮೆಯಾಗಿತ್ತು, ಹೀಗಾಗಿ ಈ ಬಾರಿ ಯಾವುದೇ ಹಿಂಜರಿಕೆ ಇಲ್ಲದೆ ಸುಮಾರು 25 ಸಾವಿರ ಮುಸ್ಲಿಮರು ಯಡ್ಡಿ ಬೆಂಬಲಕ್ಕೆ [illegible]

ಶಿವಮೊಗ್ಗೆಯಲ್ಲಿ ಕಾಂಗ್ರೆಸ್ ನಾಪತ್ತೆ

'ಬಂ' ಕುಟುಂಬದ ಹೀನಾಯ ಸೋಲು ಶಿವಮೊಗ್ಗ ಜಿಲ್ಲೆಯಲ್ಲಿ ಆತಂಕದ ರಾಜಕೀಯ ವಿದ್ಯಮಾನಗಳಿಗೆ ಕಾರಣವಾಗಿದೆ. ಒಂದು ಕಾಲದ ಸಮಾಜವಾದಿಗಳ ನೆಲೆ ಈಗ ಕೋಮುವಾದಿಗಳ ಭದ್ರಕೋಟೆಯಾಗಿ ಮತ್ತೆ ಪರಿವರ್ತನೆಗೊಂಡಿದೆ. 'ಬಂ' ಇದ್ದರೆ ಜಾತಿ ರಾಜಕಾರಣದ ಮೂಲಕ ಕೋಮುವಾದಿಗಳಿಗೆ ತಕ್ಕ ಪಾಠ ಕಲಿಸುತ್ತಾರೆಂಬ ಭರವಸೆಯಾದರೂ ಇರುತ್ತಿತ್ತು, ಈಗ ಅದೂ ಇಲ್ಲ.

ಕಾಂಗ್ರೆಸ್‌ನಲ್ಲಿ ಹೇಳಿಕೊಳ್ಳುವಂತಹ ನಾಯಕರೇ ಇಲ್ಲ, ಇದ್ದವರೂ ಗೆದ್ದು ಬರುವ, ಯಡ್ಡಿ ಗ್ಯಾಂಗ್‌ಗೆ ಸವಾಲು ಹಾಕುವ ಛಾತಿ ಉಳ್ಳವರಲ್ಲ, ಮುಂಡೆಪಾಳಾದವರನ್ನು ಕಟ್ಟಿಕೊಂಡು ಮೆಡಿಕಲ್ ಕಾಲೇಜು ಮಾಡಲು ಹೋಗಿ ಮುಂಡೆಗೆಡಿಸಿಕೊಂಡು, ಇತ್ತ ರಾಜಕೀಯದಲ್ಲೂ ಸೋತು ಸುಣ್ಣವಾಗಿರುವ ಕಾಗೋಡು ತಿಮ್ಮಪ್ಪ ಮತ್ತೆ ಎದ್ದು ಬರುವ ಸೂಚನೆಗಳಿಲ್ಲ.

ಸೊರಬದಲ್ಲಿ ಸೋತ ಕುಮಾರ್ ಬಂಗಾರಪ್ಪ ರಾಜಕೀಯದಲ್ಲಿ ಆಸಕ್ತಿ ಕಳೆದುಕೊಳ್ಳದೆ, ಮುಖ ಇಲ್ಲದ ಜಿಲ್ಲಾ ನಾಯಕರನ್ನೆಲ್ಲಾ ಓಡಿಸಿ, ಪಕ್ಷವನ್ನು ಬುಡಮಟ್ಟದಿಂದ ಕಟ್ಟಿದರೆ, ಅಭಿವೃದ್ಧಿಯ ಹೆಸರಿನಲ್ಲಿ ಲೂಟಿ ಹೊಡೆಯುತ್ತಿರುವ 'ಚಡ್ಡಿ' ಪರಿವಾರಕ್ಕೆ ಮುಂದೆ ಬುದ್ಧಿ ಕಲಿಸಬಹುದು.


ಪತ್ರಕರ್ತರಿಗೆ ಸಿಕ್ಕಿದ್ದು ಚೊಂಬು!

'ಬಂ' ಶಿಕಾರಿಪುರ ಕಣಕ್ಕೆ ಧುಮುಕುತ್ತಿದ್ದಂತೆಯೇ ಮಾಧ್ಯಮಗಳೆಲ್ಲಾ 'ಬಿಗ್‌ಬಲ'ದ ಹೋರಾಟ ನಡೆಯುತ್ತಿದೆ ಎಂದು ಬಣ್ಣಿಸಲಾರಂಭಿಸಿದವು. 'ಬಂ' ಕೊನೆಯ ಕ್ಷಣದಲ್ಲಿ ಮೋಡಿ ಮಾಡುತ್ತಾರೆ ಎಂಬ ನಂಬಿಕೆಯೇ ಈ ತೀರ್ಮಾನಕ್ಕೆ ಬರಲು ಕಾರಣವಾಗಿತ್ತು, ಇದರಿಂದ ಹೆದರಿದ ಯಡ್ಡಿ [illegible] ತಮ್ಮ ಪರವಾಗಿ ವರದಿಗಳನ್ನು ಬರೆಯುವಂತೆ ಸ್ಥಳೀಯ ಪತ್ರಕರ್ತರಿಗೆ [illegible] ಒಡ್ಡಿತು. ಯಡ್ಡಿಯ ಮಕ್ಕಳು ಒಂದು ಬೆಳ್ಳಿ ಚೊಂಬು ಮತ್ತು [illegible] ಸಾವಿರ ರೂಗಳನ್ನು ಬಹಿರಂಗವಾಗಿಯೇ ಪ್ರತಿ ಪತ್ರಕರ್ತರಿಗೂ [illegible]ದರು. ಆದರೂ ಯಡ್ಡಿ ಗೆದ್ದೇ ಗೆಲ್ಲುತ್ತಾರೆಂದು ಬರೆಯುವ [illegible]ವನ್ನು ಯಾರೂ ತೋರಿಸಲಿಲ್ಲ, ಒಳಗೊಳಗೇ ಮಾತನಾಡಿಕೊಂಡು [illegible] ಬಿಟ್ಟರು.

'ಬಂ' ಸ್ಪರ್ಧಿಸಿದ್ದರಿಂದ ನಮಗೆಲ್ಲ 'ಚೊಂಬು' ಸಿಕ್ಕಿತು ಎಂದು ಈಗ [illegible] ಖುಷಿಯಾಗಿದ್ದಾರಂತೆ!

ಶಿವಮೊಗ್ಗದ ಕೆಲ ಪತ್ರಕರ್ತರಂತೂ ತಾವೇ ಮುಖ್ಯಮಂತ್ರಿಯಾದವರಂತೆ [illegible]. [illegible] ಮುಖ್ಯಮಂತ್ರಿಯಾದಾಗಲೇ [illegible] ಬೇಕಾದಷ್ಟು [illegible]. ಈಗ ಇನ್ನು ಮುಂದೆ [illegible] ಎಂದು [illegible] ಕೂತಿದ್ದಾರಂತೆ.

ಸಾಹಿತ್ಯ ಚರಿತ್ರೆಯ ಅತಿ ದೊಡ್ಡ 'ಮ್ಯಾನ್ ಹಂಟ್'!



ವಿಶೇಷ ಲೇಖನ

■ ಎ.ಎಸ್. ಶ್ರೀಧರ

ಇಡೀ ಪ್ರಪಂಚದ ಸಾಹಿತ್ಯ ಚರಿತ್ರೆಯಲ್ಲಿ ಅತ್ಯಂತ ಜೀವಂತವಾಗಿ ಉಳಿದಿರುವ ವಿವಾದ ಎಂದರೆ ಜಗದ್ವಿಖ್ಯಾತ ಮಹಾಕವಿ ಶೇಕ್ಸ್‌ಪಿಯರ್ ಎಂಬ ವ್ಯಕ್ತಿ ನಿಜಕ್ಕೂ ಯಾರು ಎಂಬುದೇ. ಬಹುಶಃ ಜಗತ್ತಿನ ಯಾವ ಕವಿಯ ಜೀವನ ವೃತ್ತಾಂತದ ಬಗೆಗೂ ಇಷ್ಟೊಂದು ದೀರ್ಘ ಹಾಗೂ ವಿಸ್ತೃತ ಚರ್ಚೆಯಾದ ಹಾಗಿಲ್ಲ. ಈ ವಿವಾದದ್ದೇ ಒಂದು ಇತಿಹಾಸವಿದೆ. ಸಾಹಿತ್ಯ ಚರಿತ್ರಕಾರರು ಹಾಗೂ ವಿಮರ್ಶಕರಿಗೆ ಇನ್ನೂ ಬಗೆಹರಿಯದ ನಿಗೂಢವಾಗಿದೆ.

ಇತಿಹಾಸದುದ್ದಕ್ಕೂ ಇದು ಇನ್ನೇನು ಮುಗಿದ ವಿವಾದ, ಇದರ ಬಗ್ಗೆ ಇನ್ನೂ ಚರ್ಚೆಮಾಡುವುದಕ್ಕೆ ಏನೂ ಉಳಿದಿಲ್ಲ ಎಂಬ ಅಭಿಪ್ರಾಯ ಮೂಡಿದ ಹಿನ್ನೆಲೆಯಲ್ಲೇ ಮತ್ತೆ ಹೊಸ ಪುರಾವೆಗಳ ಅನ್ವೇಷಣೆ ಪ್ರಾರಂಭವಾಗಿ, ಹೊಸ ವಿವಾದಕ್ಕೆ ನಾಂದಿಮಾಡಿಕೊಟ್ಟಿದೆ. ಈಗ ಲಭ್ಯವಿರುವ ಮತ್ತು ಬಹುಮಟ್ಟಿಗೆ ಸ್ವೀಕೃತವಾಗಿರುವ ಶೇಕ್ಸ್‌ಪಿಯರ್ ಆತ್ಮ ವೃತ್ತಾಂತವೆಂದರೆ, ಆತ ಚಿಕ್ಕಂದಿನಲ್ಲೇ ಯಾವುದೋ ಪುಂಡು ಅಪರಾಧ ಮಾಡಿ ತನ್ನ ಹುಟ್ಟೂರಾದ ಏವನ್ ನದಿ ತೀರದ ಸ್ಟ್ರಾಟ್‌ಫೋರ್ಡ್ ಹಳ್ಳಿಯನ್ನು ಬಿಟ್ಟು ಓಡಿಹೋದದ್ದು. ನಂತರ ಅದೂ, ಇದೂ ಕೆಲಸ ಮಾಡುತ್ತಾ, ಕಡೆಗೆ ಲಂಡನ್ ನಗರದ ರಂಗಮಂದಿರದಲ್ಲಿ ಕುದುರೆ ನೋಡಿಕೊಳ್ಳುವ ಕೆಲಸ ಹಿಡಿದು, ನಂತರ ಹಂತ ಹಂತವಾಗಿ ರಂಗಭೂಮಿಯ ಸಂಪರ್ಕದಿಂದ ಮೊದಲು ಹಿನ್ನೆಲೆ ರಂಗಕರ್ಮಿಯಾಗಿ, ಆಮೇಲೆ ನಟನಾಗಿ, ಕಡೆಗೆ ನಾಟಕಕಾರನಾದ ಎಂಬುದು. ಆತನ ಹುಟ್ಟೂರು ಸ್ಟ್ರಾಟ್‌ಫೋರ್ಡ್ ಎಂಬುದು ನಿರ್ವಿವಾದವಾಗಿದ್ದರೂ, ಅಷ್ಟೇನೂ ವಿದ್ಯಾಭ್ಯಾಸ ಪಡೆಯದ, ಹಳ್ಳಿಗಾಡಿನಲ್ಲೇ ಬೆಳೆದ, ನಗರ ಸೇರಿದ ಮೇಲೂ ಯಾವ ವಿಶ್ವವಿದ್ಯಾನಿಲಯದಲ್ಲೂ ಓದಿದ ದಾಖಲೆಗಳೇ ಇಲ್ಲದ ಒಬ್ಬ ಹಳ್ಳಿ ಹಮ್ಮೀರ, ಅಷ್ಟೊಂದು ಗಂಭೀರವಾದ ಮತ್ತು ಎಂಥ ಘನ ವಿದ್ವಾಂಸರೂ ತಿಣುಕಾಡಬೇಕಾದ, ಎಲಾ ಕಾಲಕ್ಕೂ ತಕ್ಕ ಅರ್ಥವಿನ್ಯಾಸಗಳನ್ನು ಸದಾ ಹೊಮ್ಮಿಸುವ ಶ್ರೇಷ್ಠ ಕಲಾಕೃತಿಗಳನ್ನು ಹೇಗೆ ರಚಿಸಲು ಸಾಧ್ಯವಾಯಿತು ಎಂಬ ಪ್ರಶ್ನೆ ಮಾತ್ರ ಹಾಗೇ ಉಳಿದಿದೆ. ಯಾಕೆಂದರೆ ಶೇಕ್ಸ್‌ಪಿಯರ್ ನಾಟಕಗಳಲ್ಲಿ ಬಳಸಿರುವ ಭಾಷೆ, ಪ್ರತಿ ಸನ್ನಿವೇಶದಲ್ಲೂ ಚಿಮ್ಮುವ ಪ್ರತಿಮೆಗಳ ಸೌಂದರ್ಯ, ನಾಟಕವನ್ನು ಕಟ್ಟುವ ಕ್ರಮ ಇಂದಿಗೂ ಸರಿಸಾಟಿ ಇಲ್ಲದ್ದು. ಅಷ್ಟೇ ಅಲ್ಲ, ಈ ನಾಟಕಗಳಲ್ಲಿ ಮೈದಳೆದಿರುವ ಪಾತ್ರಗಳು ಯಾವಾಗಲೂ ಸಮಕಾಲೀನವೇ ಆಗಿದ್ದು, ಎಲ್ಲ ಕಾಲಕ್ಕೂ ಹೊಂದುವ ಬದುಕಿನ ಕೆಲ ಮೂಲಭೂತ ಸಮಸ್ಯೆ ಸಂಕೀರ್ಣತೆಗಳನ್ನು ಪ್ರತಿಬಿಂಬಿಸುವಂಥವು. ವಿಮರ್ಶಕ ಜಾನ್ಸನ್ ಹೇಳಿರುವಂತೆ, 'Shakespeare has no characters, but species'.

ಕುತೂಹಲಕ್ಕೆ ಇದೇ ರೀತಿಯ ಪ್ರಶ್ನೆಗಳನ್ನು ಅಷ್ಟೇ ಶ್ರೇಷ್ಠ ಕವಿಗಳಾದ ಪಂಪನ ಬಗ್ಗೆಯೋ, ಕುಮಾರವ್ಯಾಸನ ಬಗ್ಗೆಯೋ ಕೇಳಬಹುದೇ ಎಂಬ ಮರುಪ್ರಶ್ನೆಯನ್ನು ಕೇಳಿಕೊಂಡರೆ, ಅದು ನಮ್ಮ ಸಂಸ್ಕೃತಿಗೂ, ಪಶ್ಚಿಮದ ಸಂಸ್ಕೃತಿಗೂ ಇರುವ ವ್ಯತ್ಯಾಸದ ಘನ ವಿಚಾರಕ್ಕೆ ನಮ್ಮನ್ನು ಕೊಂಡೊಯ್ಯಬಹುದು. ಬಹುಶಃ ಇಲ್ಲಿನ ಸಂಸ್ಕೃತಿಯಲ್ಲಿ ಅಂಥ ಪ್ರಶ್ನೆಗಳೇ ಅಪ್ರಸ್ತುತ ಅಥವಾ 'ಕುರಿತೋದದೆ'ಯೂ ಶ್ರೇಷ್ಠ ಕೃತಿಗಳನ್ನು ಬರೆದಿರುವ ಮಹಾನ್ ಲೇಖಕರ ದೀರ್ಘ ಪರಂಪರೆಯೇ ಇರುವ ನಮ್ಮಲ್ಲಿ ಇದರ ಬಗ್ಗೆ ಅನೇಕ ಪುರಾಣ ಕತೆಗಳೂ, ಐತಿಹ್ಯಗಳು ಸೃಷ್ಟಿಯಾಗಿವೆ. ಅವಾಸ್ತವ ಎನ್ನಬಹುದಾದ ಈ ವಿವರಣೆಗಳೇ ನಮಗೆ ಹೆಚ್ಚು ಆಪ್ಯಾಯಮಾನ ಹಾಗೂ ಅರ್ಥಪೂರ್ಣ. ಆದರೆ ಶೇಕ್ಸ್‌ಪಿಯರ್ ಇದ್ದದ್ದು ಎಲಿಜಬೆತಳ ಕಾಲದ ಇಂಗ್ಲೆಂಡಿನಲ್ಲಿ; ಆಗತಾನೆ ಸೆಕ್ಯುಲರ್ ಆಗುತ್ತಿದ್ದ ವಾತಾವರಣವಿದ್ದ ಸಮಾಜದಲ್ಲಿ, ಹೀಗಾಗಿ ಪುರಾಣ ಅಥವಾ ಕಟ್ಟುಕತೆಗಳನ್ನು ಬಿಟ್ಟುಕೊಟ್ಟು, ವಾಸ್ತವದ ನೆಲೆಯಲ್ಲಿ "ವೈಜ್ಞಾನಿಕ" ದೃಷ್ಟಿಕೋನದ ಮೂಲಕ ಶೇಕ್ಸ್‌ಪಿಯರ್‌ನ ಜೀವನ ವೃತ್ತಾಂತವನ್ನು ಬಗೆಯಲು ಹೊರಟ ಇಂಗ್ಲಿಷ್ ಸಾಹಿತ್ಯದ ಪಂಡಿತರುಗಳಿಗೆ ಇಂಥ ವಾಸ್ತವದ ವಿವರಗಳು ಮುಖ್ಯವಾಯಿತು. ಇದರಿಂದ ಅವರು ಆ ಕಾಲದಲ್ಲಿ ಶೇಕ್ಸ್‌ಪಿಯರ್ ಎಂಬ ವ್ಯಕ್ತಿಗೆ ಸಂಬಂಧಪಟ್ಟ (ಅಥವಾ ಪಡದ) ಎಲ್ಲ ರೀತಿಯ ವಿವರಗಳನ್ನೂ ಹೇಗೆ ಶೋಧಿಸತೊಡಗಿದರು ಎಂದರೆ, ಅದು ಕೆಲವೊಮ್ಮೆ ಅತಿರೇಕಕ್ಕೆ ಹೋಗಿ, ಕೃತಿಗಿಂತಲೂ ಕೃತಿಕಾರನ ಬದುಕಿನ ವಿಚಾರಗಳೇ ಮೇಲುಗೈ ಪಡೆಯತೊಡಗಿದವು. ಈ ಪ್ರವೃತ್ತಿಯನ್ನು ಹಾಸ್ಯ ಮಾಡುತ್ತ ಒಬ್ಬ ವಿಮರ್ಶಕ ಶೇಕ್ಸ್‌ಪಿಯರ್‌ನ ಲ್ಯಾಂಡ್ರಿ ಬಿಲ್ಲುಗಳಿಗೂ, ಅವನ ಕೃತಿಯ ಪಾತ್ರಗಳಿಗೂ ಸಂಬಂಧ ಕಲ್ಪಿಸುವ ವಿಮರ್ಶಾ ಲೇಖನವನ್ನೇ ಬರೆದ!

> ಶೇಕ್ಸ್‌ಪಿಯರ್ ಕುರಿತ ವಿವಾದ ಏನೇ ಇರಲಿ, ಅದು ನಮ್ಮನ್ನು ಮತ್ತೆ, ಮತ್ತೆ ಅವನ ಕಾವ್ಯಕ್ಕೆ ಕರೆದೊಯ್ಯುವುದಾದರೆ ಅದರಿಂದ ಕಾವ್ಯಾಭ್ಯಾಸಕ್ಕೇ ಲಾಭ! ಈ ವಿವಾದಕ್ಕೆ ತೆರೆ ಎಳೆಯಲು ಕೂಡ ನಾವು ಶೇಕ್ಸ್‌ಪಿಯರ್ ಕಾವ್ಯಕ್ಕೇ ಮೊರೆಹೋಗಬಹುದು. ಕವಿ ವಾಣಿಯ ಪ್ರಕಾರ 'ಹೆಸರಿನಲ್ಲೇನಿದೆ? ಗುಲಾಬಿಯನ್ನು ಯಾವ ಹೆಸರಿನಿಂದ ಕರೆದರೂ ಅದರ ಸುವಾಸನೆ ಎಂದೂ ಬದಲಾಗದಲ್ಲವೇ?'

ನಿಜವಾದ ಶೇಕ್ಸ್‌ಪಿಯರ್ ಯಾರು?

ಶೇಕ್ಸ್‌ಪಿಯರ್‌ನ ಪ್ರಸಿದ್ಧಿಯಷ್ಟೇ ಆತನ ಕೃತಿಗಳ ಬಗ್ಗೆ ಇರುವ ವಿವಾದವೂ ಹಳೆಯದು. ರೆವರೆಂಡ್ ಜೇಮ್ಸ್ ವಿಲ್‌ಮಾಂಟ್ ಎನ್ನುವವನು 1785ರಲ್ಲೇ (ಶೇಕ್ಸ್‌ಪಿಯರ್‌ನ ಕಾಲ 1564-1616) ಶೇಕ್ಸ್‌ಪಿಯರ್ ಕೃತಿಗಳನ್ನು ನಿಜಕ್ಕೂ ಬರೆದವನು ಫ್ರಾನ್ಸಿಸ್ ಬೇಕನ್ ಎಂಬ ಲೇಖಕ ಎಂಬ ವಾದವನ್ನು ಮುಂದಿಟ್ಟ. (ಈಗಲೂ ಈ ವಿವಾದದಲ್ಲಿ ಮುಂದಿರುವ ಹೆಸರು ಬೇಕನ್‌ದೇ.) ಅಲ್ಲಿಂದಾಚೆಗೆ 'ನಿಜವಾದ' ಶೇಕ್ಸ್‌ಪಿಯರ್ ಯಾರು ಎಂಬುದಕ್ಕೆ ಅನೇಕ ಹೆಸರುಗಳು ಸೇರ್ಪಡೆಯಾಗತೊಡಗಿದವು. ಆಕ್ಸ್‌ಫರ್ಡ್‌ನ ಅರ್ಲ್, ಕ್ರಿಸ್ಟೋಫರ್ ಮಾರ್ಲೋ ಮುಂತಾದವರ ಹೆಸರುಗಳೂ ಚಾಲ್ತಿಗೆ ಬಂದವು. ಕೊನೆಗೆ ಒಬ್ಬ 'ಅಜ್ಞಾನ ವಿದ್ವಾಂಸ' ರಾಣಿ ಎಲಿಜಬೆತ್‌ಳೇ ನಿಜವಾದ ಕರ್ತೃ ಎಂದೇ ಘೋಷಿಸಿದ. ಇವರಲ್ಲಿ ಬೇಕನ್ ಪ್ರಬಂಧಕಾರನಾಗಿ ಪ್ರಸಿದ್ಧನಾದರೆ, ಮಾರ್ಲೋ ನಾಟಕಕಾರನೂ ಆಗಿದ್ದ, ಅವನ ಹೆಸರಿನಲ್ಲೇ ಪ್ರಕಟವಾದ 'ಡಾ. ಫಾಸ್ಟಸ್' ನಾಟಕವೂ ಅಷ್ಟೇ ಪ್ರಸಿದ್ಧ ಆದರೂ ಇವರು ಶೇಕ್ಸ್‌ಪಿಯರ್‌ನ ಕೃತಿಗಳನ್ನು ಬರೆದರು ಎಂದು ಹೆಚ್ಚಿನ ಮಂದಿ ಒಪ್ಪುವುದಿಲ್ಲ.

ಈ ವಿವಾದದ ಸಮಸ್ಯೆ ಎಂದರೆ, ಕರಾರುವಾಕ್ಕಾದ ಸಾಕ್ಷ್ಯಾಧಾರಗಳ ಕೊರತೆ. ವಿಚಿತ್ರವೆಂದರೆ, 'ನಿಜ' ಶೇಕ್ಸ್‌ಪಿಯರ್ ಯಾರು ಎನ್ನುವುದಕ್ಕೆ ನೀಡಲಾಗಿರುವ ಸಾಕ್ಷಿಗಿಂತಲೂ, ಶೇಕ್ಸ್‌ಪಿಯರ್ ತನ್ನ ನಾಟಕಗಳ ನಿಜ ಕರ್ತೃವಾಗಿರಲು ಸಾಧ್ಯವಿಲ್ಲ ಎಂಬ ವಾದಕ್ಕೆ ಹುಟ್ಟಿಕೊಂಡಿರುವ ಸಾಕ್ಷ್ಯಗಳೇ ಹೆಚ್ಚು!

ಇದಕ್ಕೆ ನೀಡುವ ಮೊದಲ ಆಧಾರವೆಂದರೆ, ಆಗಲೇ ಸೂಚಿಸಿದಂತೆ ಆತ ಅಂತಹ ವಿದ್ಯಾವಂತನಾಗಿರಲಿಲ್ಲ ಎನ್ನುವುದು. ಅವನ ತಂದೆ, ಸೋದರಿಯರಂತೂ, ನಿರಕ್ಷರ ಕುಕ್ಷಿಗಳೇ. ಶೇಕ್ಸ್‌ಪಿಯರ್ ತನ್ನ ಪ್ರಸಿದ್ಧಿಯ ಕಾಲದಲ್ಲಿ (1613) ಅವನ ಹುಟ್ಟೂರಿಗೆ ಭೇಟಿ ಕೊಟ್ಟದ್ದಕ್ಕೆ ದಾಖಲೆಗಳಿವೆ. ಆದರೆ ಆತನ ಒಂದು ಪೈಂಟಿಂಗ್ ಕೂಡ ಅಲ್ಲಿ ಲಭ್ಯವಿಲ್ಲ, ಅವನಷ್ಟು ದೊಡ್ಡ ಲೇಖಕರಲ್ಲದವರ ಚಿತ್ರಗಳೆಲ್ಲಾ ಇರುವಾಗ, ಇಂಥ ಶ್ರೇಷ್ಠ ಹಾಗೂ ಪ್ರಸಿದ್ಧ ಕಲಾವಿದನ ಒಂದು ಚಿತ್ರವೂ ಯಾಕಿಲ್ಲ? ಅವನ ಸಾವಿನ ಬಗ್ಗೆ ಇರುವ ದಾಖಲೆಯ ರಿಜಿಸ್ಟ್ರಿಯಲ್ಲಿ 'ಜೆಂಟ್' ಎಂದು ನಮೂದಾಗಿದೆಯೇ ವಿನಃ, ಅವನ ಪೂರ್ತಿ ಹೆಸರಿಲ್ಲ, ಹಾಗೆಯೇ ಬೇರೆ ಬೇರೆ ಕಡೆ ಅವನ ಹೆಸರು ಬೇರೆ, ಬೇರೆ ರೀತಿಯಲ್ಲಿ ಬರೆಯಲಾಗಿದೆ. ರಾಣಿಯ ಕೃಪೆಗೆ ಒಳಗಾದ ಒಬ್ಬ ಹುರುವಾಸಿ ಲೇಖಕನ ಹೆಸರನ್ನು ಹೀಗೆ ಅಸಡ್ಡೆಯಿಂದ ಬರೆಯಲು ಸಾಧ್ಯವೇ... ಇತ್ಯಾದಿ, ಇತ್ಯಾದಿ.

ಅದೇನೆ ಇರಲಿ. ಈ ವಿವಾದ ಇಂದಿಗೂ ಜೀವಂತವಾಗಿದೆ ಎನ್ನುವುದು ಮುಖ್ಯ. ಇದರಿಂದ ಶೇಕ್ಸ್‌ಪಿಯರ್ ಪರ-ವಿರೋಧಿಗಳ ಗುಂಪುಗಳೇ ಹುಟ್ಟಿಕೊಂಡಿತು. ಇದು ಇನ್ನೂ ಮುಂದುವರೆದು, ಇಂದಿನ ಅಂತರಜಾಲದ ಯುಗದಲ್ಲಿ ಒಂದು ವೆಬ್ ಸಮರಕ್ಕೇ ಕಾರಣವಾಗಿದೆ. (ನೋಡಿ Shakespeare Authorship webpage). ಶೇಕ್ಸ್‌ಪಿಯರ್‌ನ ಹುಟ್ಟೂರಾದ ಸ್ಟ್ರಾಟ್‌ಫೋರ್ಡ್‌ನ ಜನಕ್ಕಂತೂ ತಮ್ಮ ಊರಿನ ಹಿರಿಮೆಯನ್ನು ಸುಲಭವಾಗಿ ಬಿಟ್ಟು ಕೊಡಲು ಮನಸ್ಸಿಲ್ಲ (ಇದಕ್ಕೆ ಮಹಾಕವಿಯ ಹೆಸರಿನಲ್ಲಿ ಆ ಊರಿಗೆ ಬರುವ ಪ್ರವಾಸಿ ಆದಾಯವೂ ಕಾರಣವಿರಬಹುದು!) ಹೀಗಾಗಿ ಶೇಕ್ಸ್‌ಪಿಯರ್ ವಿವಾದದಲ್ಲಿ ಸ್ಟ್ರಾಟ್‌ಫೋರ್ಡಿಯನ್ಸ್ ಗುಂಪೇ ಪ್ರಬಲವಾದದ್ದು. ಈ ಬಗ್ಗೆ ಕೆಲವರು ಎಷ್ಟೊಂದು ಗಂಭೀರವಾದ ಸಂಶೋಧನ ಕೈಗೊಂಡಿದ್ದಾರೆಂದರೆ, ಶೇಕ್ಸ್‌ಪಿಯರ್ ಸಮಕಾಲೀನರ ಜಾತಕವನ್ನೆಲ್ಲಾ ಜಾಲಾಡಿ, ಆತನ ನಿಕಟವರ್ತಿಗಳಾಗಿದ್ದ ಎಂಟು ಮಂದಿಯ ಪಟ್ಟಿಯನ್ನೇ ತಯಾರಿಸಿದ್ದಾರೆ. ಇವೆಲ್ಲದರ ಒಟ್ಟಾರೆ ಫಲಿತಾಂಶವೆಂದರೆ, ಪಂಡಿತ ವಲಯದಲ್ಲಿ ಇಬ್ಬರು ಶೇಕ್ಸ್‌ಪಿಯರ್‌ಗಳ ಸೃಷ್ಟಿ. ಒಂದು ನಿಜವಾದ ವ್ಯಕ್ತಿಯಾದರೆ, ಇನ್ನೊಂದು ಅದೇ ಹೆಸರಿನಲ್ಲಿ ಬರೆಯುತ್ತಿದ್ದ ಬೇರೊಬ್ಬ ವ್ಯಕ್ತಿ!

ಕೃತಿ ಒಂದು, ನಾಮ ಹಲವು!


ಇಲ್ಲಿ ಮುಖ್ಯ ಪ್ರಶ್ನೆ, ಈ ವಿವಾದದಿಂದ ಶೇಕ್ಸ್‌ಪಿಯರ್‌ನ ಕೃತಿಗಳ ಆಸ್ವಾದಕ್ಕೆ ಏನು ಲಾಭ ಎನ್ನುವುದು. ಈ ವಿವಾದ ಕೊನೆಗೊಳ್ಳದೇ ಇದ್ದರೂ, ಇದರಿಂದ ಮಹಾಕವಿಯ ನಾಟಕಗಳನ್ನು ಇನ್ನಷ್ಟು ಆಳವಾಗಿ, ಸೂಕ್ಷ್ಮವಾಗಿ ಓದುವ ಒಂದು ಪರಂಪರೆಯೇ ಹುಟ್ಟಿಕೊಂಡಿತು. ಕವಿಯ ಬದುಕಿನ ಬಗ್ಗೆ ವಿವರಗಳನ್ನು ಕೆದುಕಲು ಹೊರಟ ವಿದ್ವಾಂಸರು ಕೊನೆಗೆ ಆತನ ನಾಟಕಗಳಲ್ಲಿ ಕಂಡುಬರುವ ಅನೇಕ ವಿಷಯಗಳನ್ನು, ಹಾಗೂ ಬದುಕಿನ ವಿವಿಧ ಜ್ಞಾನ ಶಾಖೆಗಳ ಬಗ್ಗೆ ಆತನಿಗೆ ಇದ್ದ ಅಪಾರ ಪರಿಣಿತಿಯನ್ನು ಶೋಧಿಸಲು ತೊಡಗಿದರು. ಮನಶಾಸ್ತ್ರ, ಲೋಹ ವಿಜ್ಞಾನ, ನರಸಂಬಂಧೀ ಏರುಪೇರುಗಳು ಇತ್ಯಾದಿ ವಿಚಾರಗಳು ಅವನ ನಾಟಕಗಳಲ್ಲಿ ಹೇಗೆ ಮೂಡಿಬಂದಿವೆ ಎಂಬ ಹುಡುಕಾಟ ಅವನ ಅಷ್ಟೇನೂ ಪ್ರಸಿದ್ಧಿಪಡೆಯದ ನಾಟಕಗಳಿಗೆ ಹೊಸ ಓದುಗರನ್ನು ಸೆಳೆಯಲು ಹಾಗೂ ಪ್ರಸಿದ್ಧ ನಾಟಕಗಳ ಮರು ಓದಿಗೆ ಮತ್ತೆ ಹೊರಳಲು ಸಹಾಯ ಮಾಡಿದವು. ಈ ವಿವರಗಳಿಗೂ, ಆತನ ಬದುಕಿನ ಕೆಲ ಘಟನೆಗಳಿಗೂ ಕಲ್ಪಿಸಲಾದ ಸಂಬಂಧವನ್ನು ನಾವು ಒಪ್ಪಲಿ, ಬಿಡಲಿ ಹತ್ತು ಹಲವು ಬಗೆಯ ಶಾಸ್ತ್ರ ವಿಜ್ಞಾನ ಹಾಗೂ ಚಿಂತನೆಯ ಸ್ವರೂಪಗಳು ಅವನ ನಾಟಕಗಳಲ್ಲಿ ಹೇಗೆ ಅನಾವರಣಗೊಳ್ಳುತ್ತವೆ ಎಂಬ ಹೊಸ ವಿಮರ್ಶಾ ಪದ್ಧತಿಯೊಂದು ಹೊರಹೊಮ್ಮಿತು. ಹೀಗಾಗಿ ಶೇಕ್ಸ್‌ಪಿಯರ್ ಕೃತಿಗಳನ್ನು ಅರ್ಥೈಸುವ ವಿಭಿನ್ನ ದೃಷ್ಟಿಕೋನ ಲಭ್ಯವಾದದ್ದು ಹೊರನೋಟಕ್ಕೆ ಅರ್ಥಹೀನವೆಂದು ಕಾಣಬಹುದಾದ ಈ ವಿವಾದದ ಉಪ ಉತ್ಪನ್ನ.

ಉದಾಹರಣೆಗೆ ಅವನ ನಾಟಕದಲ್ಲಿ ಅನೇಕ ಕಾಯಿಲೆಗಳ ಬಗ್ಗೆ, ಅದರ ವೈದ್ಯಕೀಯ ಕಾರಣಗಳ ಬಗ್ಗೆ ಪ್ರಸ್ತಾಪವಿದೆ. ಹಾಗಾದರೆ, ಶೇಕ್ಸ್‌ಪಿಯರ್‌ಗೆ ವೈದ್ಯಕೀಯ ಶಿಕ್ಷಣದ ಪರಿಚಯವಿತ್ತೇ? ಒಬ್ಬ ವಿದ್ವಾಂಸನ ಪ್ರಕಾರ, ಈ ಮಾಹಿತಿಯನ್ನು ಸ್ವತಃ ವೈದ್ಯಕೀಯವನ್ನು ವಿಶ್ವವಿದ್ಯಾನಿಲಯದಲ್ಲಿ ಅಭ್ಯಾಸಮಾಡಿದ್ದ ತನ್ನ ಅಳಿಯ ಡಾ. ಜಾನ್ ಹಾಲ್‌ನಿಂದ ಕವಿ ಪಡೆದ. ಇದು ಸಾಧ್ಯ ಎಂದುಕೊಂಡರೆ, ಇದರ ವಿರುದ್ಧದ ಇನ್ನೊಂದು ವಾದ ಶುರು! ಏಕೆಂದರೆ, ಶೇಕ್ಸ್‌ಪಿಯರ್‌ನ ಮಗಳಾದ ಸುಸನ್ನಾಳನ್ನು ಡಾ. ಹಾಲ್ ಮದುವೆಯಾದದ್ದು 1608ರಲ್ಲಿ, ಆದರೆ ಇದಕ್ಕೆ ಮುಂಚೆ ಬರೆದ ಅನೇಕ ನಾಟಕಗಳಲ್ಲೇ ಶೇಕ್ಸ್‌ಪಿಯರ್ ವೈದ್ಯಕೀಯ, ಆರೋಗ್ಯಕ್ಕೆ ಸಂಬಂಧಪಟ್ಟ ಪ್ರತಿಮೆಗಳನ್ನು ಬಳಸಿದ್ದಾನೆ. ಹಾಗಾದರೆ ಈ ಜ್ಞಾನ ಎಲ್ಲಿಂದ ಬಂತು? ಹೀಗೆ ಚರ್ಚೆ ಮುಂದುವರೆಯುತ್ತದೆ. ಆದರೆ, ಇದರಿಂದ ಮಹಾಕವಿಯ ನಾಟಕಗಳಲ್ಲಿ ಬರುವ 'ಆರೋಗ್ಯ ಹಾಗೂ ವೈದ್ಯಕೀಯ ಪರಿಭಾಷೆ' ಕುರಿತ ಹೊಸ ಸಂಶೋಧನೆಗೆ ಇದು ಕಾರಣವಾಗಿದೆ.


ಇಲ್ಲೇ ಉಲ್ಲೇಖಿಸಬಹುದಾದ ಇನ್ನೊಂದು ಸ್ವಾರಸ್ಯವಾದ ಮಾಹಿತಿ ಇದೆ. ಶೇಕ್ಸ್‌ಪಿಯರ್‌ನ ಪ್ರಸಿದ್ಧ ವಿದೂಷಕ ಪಾತ್ರವಾದ ಫಾಲ್‌ಸ್ಟಾಫ್, 'ಹೆನ್ರಿ ದಿ ಫಿಫ್ತ್' ನಾಟಕದಲ್ಲಿ ಸಾಯುವ ಮುನ್ನ ಮತಿಭ್ರಮಣೆಯ ಸ್ಥಿತಿಯಲ್ಲಿರುವ ಚಿತ್ರಣವಿದೆ. ಇದು ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆ ಹೊರತಂದಿರುವ ಚಿತ್ತ ವಿಕಲ್ಪ ಕುರಿತ ರೋಗನಿದಾನ (diagnosis) ವರದಿಗೆ ಎಷ್ಟು ಹತ್ತಿರವಿದೆ ಎಂದರೆ, ಎರಡೂ ವಿವರಣೆಯನ್ನು ಪಕ್ಕದಲ್ಲಿಟ್ಟು ನೋಡಿದರೆ, ಶೇಕ್ಸ್‌ಪಿಯರ್ ಒಬ್ಬ ಮಹಾ ಮನೋರೋಗ ತಜ್ಞನಂತೆ ಕಾಣಿಸುತ್ತಾನೆ. ಇದು ಆ ಮಹಾಕವಿಯ (ಅದು ಯಾರಾದರೂ ಆಗಿರಲೀಕೆ!) ದೊಡ್ಡ ಪ್ರತಿಭೆಗೆ ಸಾಕ್ಷಿ. ಹಾಗೆಯೇ ಮನುಷ್ಯನ ಅನಾರೋಗ್ಯ ಕುರಿತು ಬಣ್ಣಿಸುತ್ತಾ, ಕಡೆಗೆ ಕವಿ ಅದನ್ನು ಇಡೀ ರಾಜಕೀಯ ವ್ಯವಸ್ಥೆಯನ್ನು ಟೀಕಿಸಲು ಬೇಕಾದ ಕಾವ್ಯ ಪ್ರತಿಮೆಯನ್ನಾಗಿಸುತ್ತಾನೆ. ರಿಚರ್ಡ್ ದಿ ಸೆಕೆಂಡ್ ನಾಟಕದಲ್ಲಿ ದೇಹದ ಅನಾರೋಗ್ಯ bodypoliticಗೆ ಒಂದು ಸಂಕೇತವಾಗುವುದು ಹೀಗೆ. ಇಲ್ಲೇ ನಾವು ಫ್ರಾಯ್ಡ್ ತನ್ನ ಮಹತ್ವದ ಈಡಿಪಸ್ ಕಾಂಪ್ಲೆಕ್ಸ್ ಥಿಯರಿಯನ್ನು ಹ್ಯಾಮ್ಲೆಟ್ ನಾಟಕದ ಮೂಲಕ ವಿವರಿಸುವುದು ಕೂಡ ನೆನೆಯಬಹುದು.

ಇವೆಲ್ಲದರ ಅರ್ಥ ಇಷ್ಟೇ: 'ನಿಜ' ಶೇಕ್ಸ್‌ಪಿಯರ್ ಕುರಿತ ವಿವಾದ ಏನೇ ಇರಲಿ, ಅದು ನಮ್ಮನ್ನು ಮತ್ತೆ, ಮತ್ತೆ ಅವನ ಕಾವ್ಯಕ್ಕೆ ಕರೆದೊಯ್ಯುವುದಾದರೆ ಅದರಿಂದ ಕಾವ್ಯಾಭ್ಯಾಸಕ್ಕೇ ಲಾಭ! ಈ ವಿವಾದಕ್ಕೆ ತೆರೆ ಎಳೆಯಲು ಕೂಡ ನಾವು ಶೇಕ್ಸ್‌ಪಿಯರ್ ಕಾವ್ಯಕ್ಕೇ ಮೊರೆಹೋಗಬಹುದು. ಕವಿ ವಾಣಿಯ ಪ್ರಕಾರ 'ಹೆಸರಿನಲ್ಲೇನಿದೆ? ಗುಲಾಬಿಯನ್ನು ಯಾವ ಹೆಸರಿನಿಂದ ಕರೆದರೂ ಅದರ ಸುವಾಸನೆ ಎಂದೂ ಬದಲಾಗದಲ್ಲವೇ?'

ಇದು ತನ್ನ ಬಗೆಗಿನ ವಿವಾದಕ್ಕೆ ಮಹಾಕವಿ ತಾನೆ ಬರೆದುಕೊಂಡ ಭಾಷ್ಯ! ■



ಶೇಕ್ಸ್‌ಪಿಯರ್‌ನ ಮನೆ



ಶೇಕ್ಸ್‌ಪಿಯರ್‌ನ ಸಮಾಧಿ

ದೂರದಿಂದ ಈ ಜಾಗವನ್ನು ಕಾಣಲಾಗುವುದಿಲ್ಲ. ಹಿಂದೊಮ್ಮೆ ಇಲ್ಲಿಗೆ ಯಾರಾದರೂ ಬಂದಿದ್ದರೂ ಈಗ ಅವರಿಗೆ ವಾಪಸ್ಸು ಹೋಗುವ ದಾರಿ ಗೊತ್ತಾಗುವುದಿಲ್ಲ. ಒಂದಾನೊಂದು ಕಾಲದಲ್ಲಿ ಇಲ್ಲಿಗೊಂದು ಕಾಲುದಾರಿ ಇತ್ತು. ಆದರೆ ಅದರ ಮೇಲೆ ಪೊದೆಗಳನ್ನು ಬೆಳೆಸಿ ಅದರ ಸುಳಿವೂ ಸಿಗದಂತೆ ಮಾಡಿದೆ. ಗುಡ್ಡದ ಮೇಲಿರುವ ಈ ನನ್ನ ಮನೆಯ ಜಾಗವನ್ನು ಸರಿಯಾಗಿಯೇ ಆಯ್ಕೆ ಮಾಡಿದ್ದೇನೆ. ಸುಣ್ಣದ ಗೋಡೆಗಳು ಮತ್ತು ಕೆಂಪು ಕಿಟಕಿಗಳನ್ನು ಹೊಂದಿರುವ ತಿರುವೇರಿನ ಮೇಲಿರುವ ಈ ಮನೆಯು ಕಣಿವೆಯಲ್ಲಿ ವಾಸಿಸುತ್ತಿರುವ ಜನರಿಗೆ ಕಾಣಿಸುವುದಿಲ್ಲ.

ಮನೆಯ ಸುತ್ತ ನಾನು ಉತ್ತಿರುವ ಮತ್ತು ಉಳದೇ ಬಿಟ್ಟಿರುವ ಒಂದಿಷ್ಟು ಜಾಗವಿದೆ. ತರಕಾರಿಗಳನ್ನು ಬೆಳೆಯಲೆಂದು ಸಜ್ಜುಗೊಳಿಸಿರುವ, ಆದರೆ ಬಸವನಹುಳುಗಳು ಅದರಲ್ಲಿರುವ ಕೋಸುಗಳನ್ನು ತಿಂದು ಹಾಕುವ, ಕವೆಗಳಿಂದ ಒಂದಿಷ್ಟು ಮಣ್ಣನ್ನು ಎತ್ತಿಹಾಕಿ ಆಲೂಗಡ್ಡೆಗಳನ್ನು ಬೆಳೆಸಿರುವ ಜಾಗವದು. ಯಾರೊಂದಿಗೂ ಯಾವುದನ್ನೂ ಹಂಚಿಕೊಳ್ಳಬೇಕಿರದ ನಾನು, ನನಗೆ ಬೇಕಿರುವಷ್ಟು ಆಹಾರವನ್ನು ಬೆಳೆಸಿಕೊಂಡರೆ ಸಾಕು.

ನಾನೆಂದೂ ಸುತ್ತಲಿನ ಪೊದೆಗಳನ್ನು ಕಡಿದವನಲ್ಲ. ಈಗ ಮನೆಯ ಹೆಂಚಿನ ಮೇಲೂ ಪ್ರಪಾತದಂತೆ ನಿಧಾನವಾಗಿ ಹಬ್ಬುತ್ತಿರುವ ಪೊದೆಗಳನ್ನಾಗಲಿ, ನಾನು ಉಳದ ಭೂಮಿಯನ್ನು ಆಕ್ರಮಿಸಿಕೊಳ್ಳುತ್ತಿರುವ ಪೊದೆಗಳನ್ನಾಗಲಿ ಕಡಿದವನಲ್ಲ. ಬದಲಾಗಿ ನನ್ನನ್ನೂ ಸೇರಿದಂತೆ ಇಲ್ಲಿನ ಎಲ್ಲವನ್ನೂ ಆ ಪೊದೆಗಳು ಹೂತು ಹಾಕಲಿ ಎಂಬ ಬಯಕೆ ನನ್ನದು. ನನ್ನ ಮನೆಯ ಗೋಡೆಯ ಬಿರುಕುಗಳಲ್ಲಿ ಹಲ್ಲಿಗಳು ತಮ್ಮ ಗೂಡುಗಳನ್ನು ಕಟ್ಟಿಕೊಂಡಿವೆ. ನೆಲಹಾಸಿಗೆಯಡಿ ಇರುವೆಗಳು ರಂಧ್ರಗಳಿಂದ ತುಂಬಿರುವ ನಗರಗಳನ್ನೇ ಸ್ಥಾಪಿಸಿವೆ. ಪ್ರತಿದಿನ ಗೋಡೆಯಲ್ಲಿ ಹೊಸ ಬಿರುಕುಗಳು ಮೂಡಿವೆಯೇ ಎಂದು ಕಾತರದಿಂದ ನೋಡುವ ನಾನು ಕಳೆಗಳಿಂದಲೇ ಉಸಿರುಗಟ್ಟಿ ವಿನಾಶವಾದ ಮಾನವ ಕುಲದ ನಗರಗಳ ಬಗ್ಗೆ ಯೋಚಿಸುತ್ತೇನೆ.

ನನ್ನ ಮನೆಗಿಂತ ಎತ್ತರ ಪ್ರದೇಶದಲ್ಲಿರುವ ಕುರುಚಲು ಹುಲ್ಲುಗಾವಲಿನಲ್ಲಿ ನನ್ನ ಹಲವು ಮೇಕೆಗಳನ್ನು ಮೇಯಲು ಬಿಡುತ್ತೇನೆ. ಬೆಳಗಿನ ಜಾವ ಮೊಲಗಳ ವಾಸನೆ ಹಿಡಿದು ಬರುವ ನಾಯಿಗಳನ್ನು ಕಲ್ಲು ತೂರಿ ಓಡಿಸುತ್ತೇನೆ. ನಾಯಿಗಳನ್ನು, ಮನುಷ್ಯನಿಗೆ ಅವು ತೋರುವ ಗುಲಾಮಿ ಧೋರಣೆಯನ್ನು ಕಂಡರೆ ನನಗೆ ದ್ವೇಷ. ಹಾಗೆ ನೋಡಿದರೆ, ನಾಗರಿಕಗೊಂಡಿರುವ ಎಲ್ಲಾ ಪ್ರಾಣಿಗಳನ್ನು, ಮನುಷ್ಯರ ಊಟದೆಲೆಗಳನ್ನು ನೆಕ್ಕಿ ತಮ್ಮ ಬದುಕಿನ ಸಾರ್ಥಕತೆಯನ್ನು ಕಾಣುವ ಪ್ರಾಣಿಗಳನ್ನು ನಾನು ದ್ವೇಷಿಸುತ್ತೇನೆ. ನನ್ನ ತಾಳ್ಮೆ ಇರುವುದು ಮೇಕೆಗಳ ಬಗ್ಗೆ ಮಾತ್ರ. ಯಾಕೆಂದರೆ ಅವು ಯಾವ ರೀತಿಯ ಆತ್ಮೀಯತೆಯನ್ನು ತೋರುವುದಿಲ್ಲ, ಅದನ್ನು ನಿರೀಕ್ಷಿಸುವುದೂ ಇಲ್ಲ.

ನನ್ನ ರಕ್ಷಣೆಗೆ ಕಾವಲುನಾಯಿಗಳ ಅಗತ್ಯವಿಲ್ಲ ಅಥವಾ ಬೇಲಿಗಳಾಗಲಿ, ಬೀಗಗಳಾಗಲಿ ಅಥವಾ ಮನುಷ್ಯ ತನ್ನ ರಕ್ಷಣೆಗೆಂದು ನಿರ್ಮಿಸಿರುವ ಇನ್ಯಾವ ವಿಕೃತ ಸಲಕರಣೆಗಳ ಅಗತ್ಯವೂ ನನಗಿಲ್ಲ. ನನ್ನ ಭೂಮಿಯ ಸುತ್ತ ಜೇನುಗೂಡುಗಳಿವೆ. ಹಾರಾಡುವ ಆ ಜೇನುಗಳ ಬೇಲಿಯನ್ನು ನಾನಲ್ಲದೆ ಬೇರೆ ಯಾರಿಂದಲೂ ದಾಟಲಾಗುವುದಿಲ್ಲ. ರಾತ್ರಿಯ ವೇಳೆ ಅವು ತಮ್ಮ ಗೂಡುಗಳಲ್ಲಿ ಅಡಗಿದ್ದರೂ ಯಾರೂ ನನ್ನ ಮನೆಯ ಹತ್ತಿರ ಸುಳಿಯುವ ಧೈರ್ಯ ಮಾಡುವುದಿಲ್ಲ. ಅವರಿಗೆ ನನ್ನ ಬಗ್ಗೆ ಭಯ. ಅದಕ್ಕೆ ಸಕಾರಣವಾದ ಕಾರಣಗಳೂ ಇವೆ. ಅಂದಮಾತ್ರಕ್ಕೆ ಅವರು ನನ್ನ ಬಗ್ಗೆ ಹೇಳುವ ಕತೆಗಳೆಲ್ಲವೂ ಸತ್ಯ ಎಂದಲ್ಲ. ಅವೆಲ್ಲ ಸುಳ್ಳು. ನನ್ನ ಬಗ್ಗೆ ಅವರೆಲ್ಲ ಸೃಷ್ಟಿಸಿರುವ ಕತೆಗಳವು. ಆದರೆ ಅವರೆಲ್ಲ ನನ್ನ ಬಗ್ಗೆ ಭಯ ಪಡುವುದು ಸರಿಯಾಗಿದೆಯಲ್ಲದೆ ಅದು ನನಗೆ ಬೇಕಿದೆ.

ಬೆಳಗಿನ ಜಾವ ನಾನು ಶಿಖರವನ್ನೇರಿ ನೋಡುವಾಗ, ನನಗಿಂತ ಆಳದಲ್ಲಿರುವ ಕಣಿವೆ ಮತ್ತು ಅದರ ಹಾಗೂ ನನ್ನ ಸುತ್ತ ಇರುವ ಸಮುದ್ರದ ಗೋಡೆ ಕಾಣಿಸುತ್ತದೆ. ಹಾಗೆಯೇ ಮಾನವ ಕುಲ ಸಮುದ್ರದ ಅಂಚಿನಲ್ಲಿ ನಿರ್ಮಿಸಿಕೊಂಡಿರುವ ಮನೆಗಳು, ತಮ್ಮ ಕಲ್ಪಿತ ನೆರೆಹೊರೆ ಭಾವನೆಯಿಂದ ಬಿರುಗಾಳಿಯ ಹೊಡೆತದಿಂದ ತತ್ತರಿಸಿರುವಂತೆ ಕಾಣುತ್ತವೆ.


ಕಂದು ಬಣ್ಣದ ನಗರ, ಅದರ ಮಿನುಗುತ್ತಿರುವ ಕಿಟಕಿಗಳು, ಅದರ ಅಡುಗೆ ಮನೆಗಳಿಂದ ಏರುತ್ತಿರುವ ಹೊಗೆಯನ್ನು ನೋಡುತ್ತೇನೆ. ಒಂದು ದಿನ ಪೊದೆಗಳು ಆ ನಗರದ ಎಲ್ಲಾ ಪ್ರದೇಶಗಳನ್ನು ಆಕ್ರಮಿಸಿಕೊಂಡು, ಸಮುದ್ರ ಆ ನಗರ ನುಂಗಿ, ಆ ನಗರ ಕಲ್ಲುಗಳ ಅವಶೇಷವಾಗುತ್ತದೆ.

ಈಗ ದುಂಬಿಗಳು ಮಾತ್ರ ನನ್ನೊಂದಿಗಿವೆ. ಅವುಗಳ ಗೂಡುಗಳಿಂದ ನಾನು ಜೇನನ್ನು ತೆಗೆಯುವಾಗ ಅವು ನನ್ನನ್ನು ಕಚ್ಚದೆ ನನ್ನ ಸುತ್ತ ಹಾರಾಡುತ್ತವೆ. ನನ್ನ ಮುಖದ ಮೇಲೆ ಜೀವಂತ ಗಡ್ಡದಂತೆ ಕೂತಿರುತ್ತವೆ. ಐತಿಹಾಸಿಕ ಚರಿತ್ರೆ ಇಲ್ಲದ ಜೇನುಗಳು ಅತಿ ಸ್ನೇಹಜೀವಿಗಳು. ಹಲವಾರು ವರ್ಷಗಳಿಂದ ಮೇಕೆ ಮತ್ತು ಜೇನುಗಳೊಂದಿಗೆ ಇಲ್ಲಿ ಜೀವಿಸುತ್ತಿರುವ ನಾನು ಮೊದಮೊದಲು ಪ್ರತಿವರ್ಷದ ನಿರ್ಗಮನವನ್ನು ಗೋಡೆಯ ಮೇಲೆ ಗೆರೆಯನ್ನು ಎಳೆಯುವ ಮೂಲಕ ಲೆಕ್ಕ ಇಡುತ್ತಿದ್ದೆ.

ಆದರೆ ಈಗ ಪೊದೆಗಳು ಎಲ್ಲವನ್ನೂ ಆಕ್ರಮಿಸಿಕೊಂಡಿವೆ. ನಾನ್ಯಾಕೆ ಮನುಷ್ಯರೊಂದಿಗೆ ಬದುಕುತ್ತಾ ಅವರಿಗಾಗಿ ದುಡಿಯಬೇಕು? ಅವರ ಬೆವರು, ಪೈಶಾಚಿಕ ಸಂಪ್ರದಾಯಗಳು, ನೃತ್ಯಗಳು, ಧರ್ಮ ಮತ್ತು ದೇಗುಲಗಳು, ಅವರ ಹೆಂಗಸರ ಕಹಿ ಎಂಜಲು, ಎಲ್ಲವನ್ನೂ ನಾನು ದ್ವೇಷಿಸುತ್ತೇನೆ. ಆದರೆ ನನ್ನನ್ನು ನಂಬಿ, ನನ್ನ ಬಗೆಗಿನ ಕತೆಗಳು ನಿಜವಲ್ಲ. ನನ್ನ ಬಗ್ಗೆ ಸುಳ್ಳುಕೋರ ಸೂಳೆಮಕ್ಕಳು ಯಾವತ್ತಿಗೂ ಕಟ್ಟುಕತೆಗಳನ್ನು ಹೇಳುತ್ತಾ ಬಂದಿದ್ದಾರೆ.

ಯಾರಿಂದಲೂ ಏನನ್ನೂ ಸ್ವೀಕರಿಸದ, ಯಾರಿಗೆ ಏನನ್ನೂ ನೀಡದವ ನಾನು. ರಾತ್ರಿ ಮಳೆ ಬಿದ್ದರೆ ಮಾರನೆ ದಿನ ದಿಣ್ಣೆಯಿಂದ ಜಾರುವ ಬಸವನಹುಳುಗಳನ್ನು, ತೇವಗೊಂಡಿರುವ ಸುತ್ತಲಿನ ಭೂಮಿಯಲ್ಲಿನ ಅಣಬೆಗಳನ್ನು ತಿನ್ನುವವ ನಾನು. ನನಗೆ ಬೇಕಿರುವುದನ್ನೆಲ್ಲ ನನ್ನ ಸುತ್ತಲಿನ ಕಾಡು ನೀಡುತ್ತದೆ. ಬೆಚ್ಚಗಿರಲು ಸೌದೆಗಳನ್ನು ನೀಡುತ್ತದೆ. ಮೊಲ ಮತ್ತು ಹಕ್ಕಿಗಳಿಗೆ ನಾನು ಉರುಳು ಕಟ್ಟಿ ಹಿಡಿಯುತ್ತೇನೆ. ಅಂದಮಾತ್ರಕ್ಕೆ ನನಗೆ ವನ್ಯಜೀವಿಗಳ ಬಗ್ಗೆ ವಿಶೇಷ ಪ್ರೀತಿ ಇದೆ ಎಂದಾಗಲಿ, ಪ್ರಕೃತಿ ಬಗ್ಗೆ ಮನುಷ್ಯರ ಅಸಂಬದ್ಧ ಮೋಹವಾಗಲಿ ನನಗಿಲ್ಲ. ಈ ಜಗತ್ತಿನಲ್ಲಿ ಬಲಿಷ್ಠನೇ ಉಳಿಯುತ್ತಾನೆಂಬ ನಿಯಮವಿದ್ದು ನಮ್ಮ ಉಳಿವಿಗಾಗಿ ಪರಸ್ಪರ ಆಪೋಶನ ಮಾಡಬೇಕಿದೆ ಎಂಬುದು ನನಗೆ ಗೊತ್ತು. ನಾನು ತಿನ್ನುವ ಪ್ರಾಣಿಗಳನ್ನು ಮಾತ್ರ ಉರುಳು ಹಾಕಿ ಕೊಲ್ಲುತ್ತೇನೆ. ಅದಕ್ಕೆಂದು ನಾನು ಬಂದೂಕುಗಳನ್ನು ಉಪಯೋಗಿಸುವುದಿಲ್ಲವಾದ್ದರಿಂದ ನನ್ನ ಬಲಿಗಳನ್ನು ತರಲು ನಾಯಿಗಳ ಅಥವಾ ಮತ್ತೊಬ್ಬರ ಅಗತ್ಯ ನನಗಿಲ್ಲ.

ಈಗ ದುಂಬಿಗಳು ಮಾತ್ರ ನನ್ನೊಂದಿಗಿವೆ. ಅವುಗಳ ಗೂಡುಗಳಿಂದ ನಾನು ಜೇನನ್ನು ತೆಗೆಯುವಾಗ ಅವು ನನ್ನನ್ನು ಕಚ್ಚದೆ ನನ್ನ ಸುತ್ತ ಹಾರಾಡುತ್ತವೆ. ನನ್ನ ಮುಖದ ಮೇಲೆ ಜೀವಂತ ಗಡ್ಡದಂತೆ ಕೂತಿರುತ್ತವೆ. ಐತಿಹಾಸಿಕ ಚರಿತ್ರೆ ಇಲ್ಲದ ಜೇನುಗಳು ಅತಿ ಸ್ನೇಹಜೀವಿಗಳು. ಹಲವಾರು ವರ್ಷಗಳಿಂದ ಮೇಕೆ ಮತ್ತು ಜೇನುಗಳೊಂದಿಗೆ ಇಲ್ಲಿ ಜೀವಿಸುತ್ತಿರುವ ನಾನು ಮೊದಮೊದಲು ಪ್ರತಿವರ್ಷದ ನಿರ್ಗಮನವನ್ನು ಗೋಡೆಯ ಮೇಲೆ ಗೆರೆಯನ್ನು ಎಳೆಯುವ ಮೂಲಕ ಲೆಕ್ಕ ಇಡುತ್ತಿದ್ದೆ.



ಜೇನುಗೂಡುಗಳ ಮನೆ



ಇಟಲಿಯನ್ ಮೂಲ: ಇಟಾಲೋ ಕಾಲ್ವೀನೊ

ಕನ್ನಡಕ್ಕೆ: ಗೌರಿ ಲಂಕೇಶ್

ಹಲವೊಮ್ಮೆ ಮರಕಡಿಯುವವರು ಕಾಡಿನಲ್ಲಿ ನನಗೆ ಎದುರಾಗುತ್ತಾರೆ. ಆದರೆ ನಾನು ಅವರನ್ನು ನೋಡೇ ಇಲ್ಲ ಎಂಬಂತೆ ವರ್ತಿಸುತ್ತೇನೆ. ಭಾನುವಾರದ ದಿನಗಳಂದು ಕಾಡಿನಲ್ಲಿ ಸೌದೆಗಳನ್ನು ಆರಿಸಲು ಬಡವರು ಬರುತ್ತಾರೆ. ಅವರು ಕಟ್ಟಿಗೆಗಳಿಗೆ ಹಗ್ಗಗಳನ್ನು ಕಟ್ಟಿ ಅವುಗಳನ್ನು ಎಳೆದುಹೋದ ಕಡೆಗಳಲ್ಲಿ ಮಳೆ ನೀರು ಸಂಗ್ರಹಗೊಂಡು ಭೂಕುಸಿತಕ್ಕೆ ಕಾರಣವಾಗುತ್ತದೆ. ಮನುಷ್ಯರು ಕಟ್ಟಿಕೊಂಡಿರುವ ನಗರಗಳಲ್ಲೂ ಇಂತಹ ಭೂಕುಸಿತ ಸಂಭವಿಸಿ ಅಲ್ಲಿರುವ ಎಲ್ಲವೂ ನಾಶವಾಗಲಿ ಎಂದು ಆಶಿಸುತ್ತೇನೆ. ಒಂದು ದಿನ ನಾನು ಬೆಟ್ಟದ ಮೇಲೆ ನಡೆಯುವಾಗ ಭೂಕುಸಿತದಲ್ಲಿ ಮುಳುಗಿದ ಮನೆಗಳ ಚಿಮಣಿಗಳಿಂದ ಹೊಗೆ ಮಾತ್ರ ಕಾಣಿಸಲೆಂದು, ಪ್ರಪಾತಕ್ಕೆ ರಸ್ತೆಗಳು ಬೀಳಲೆಂದು, ಕಾಡಿನ ಮಧ್ಯೆ ಮುರಿದ ರೈಲು ಹಳಿಗಳು ಸಿಗಲೆಂದು ಬಯಸುತ್ತೇನೆ.

ನಿಮಗೆ ಅನ್ನಿಸಬಹುದು, ನನ್ನ ಈ ಏಕಾಂಗಿತನಗಳು ನನಗೆ ಭಾರವಾಗುವುದಿಲ್ಲವೆ ಎಂದು, ಯಾವುದೋ ಒಂದು ಸುದೀರ್ಘ ಮುಸ್ಸಂಜೆಯ ಹೊತ್ತಿನಲ್ಲಿ ತಲೆಯಲ್ಲಿ ಯಾವುದೇ ನಿರ್ದಿಷ್ಟ ಯೋಚನೆ ಇಲ್ಲದೆ ಮಾನವಕುಲ ವಾಸಿಸುವ ಜಾಗದ ಹತ್ತಿರಕ್ಕೆ ನಾನೆಂದೂ ಹೋಗಿಲ್ಲವೇ ಎಂದು. ಹೋಗಿದ್ದೆ ಒಂದು ಚಳಿಗಾಲದ ಮುಸ್ಸಂಜೆ ಬೆಟ್ಟದಿಂದ ಇಳಿದು ಹೂದೋಟಗಳಿರುವ ಆ ಮನೆಗಳತ್ತ ನಡೆದಿದ್ದೆ. ಆದರೆ ಮಹಿಳೆಯರ ನಗೆ ಮತ್ತು ದೂರದಿಂದ ಕರೆಯುತ್ತಿದ್ದ ಮಗುವಿನ ದನಿ ಕೇಳುತ್ತಿದ್ದಂತೆ ನಾನು ನನ್ನ ಬೆಟ್ಟದ ಮನೆಗೆ ವಾಪಸ್ಸು ಬಂದಿದ್ದೆ. ಅದೇ ಕೊನೆ. ಅಂದಿನಿಂದ ನಾನಿಲ್ಲಿ ಒಬ್ಬನೇ ಇದ್ದೇನೆ. ಹೌದು ನಿಮ್ಮನ್ನೂ ಕಾಡುವಂತೆ ಹಲವೊಮ್ಮೆ ನಾನು ತಪ್ಪು ಮಾಡಬಹುದೇ ಎಂಬ ಭಯ ನನ್ನನ್ನು ಕಾಡುತ್ತದೆ. ಆದ್ದರಿಂದ, ನಿಮ್ಮಂತೆ ನಾನು ಕೂಡ ಈಗಿರುವಂತೆ ನನ್ನ ಜೀವನ ಮುಂದುವರೆಸುತ್ತೇನೆ.

ನಿಮಗೆ ನನ್ನನ್ನು ಕಂಡರೆ ಭಯ. ಅದು ಸರಿಯಾದದ್ದೇ. ಆದರೆ ಅದಕ್ಕೂ ಆ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ. ಆ ಪ್ರಕರಣ ನಿಜವಾಗಲೂ ನಡೆಯಿತೋ ಇಲ್ಲವೋ, ಆದರೆ ಅದಾಗಿ ಅದೆಷ್ಟೋ ವರ್ಷಗಳಾಗಿದ್ದು ಈಗ ಮುಖ್ಯವಲ್ಲ.

ಆ ಹೆಂಗಸು, ಆ ಕಪ್ಪು ಹೆಂಗಸು ಅಂದು ಆ ಕುಡುಗೋಲು ಹಿಡಿದು ಬೆಟ್ಟವನ್ನು ಹತ್ತಿ ಬಂದಾಗ.... ನಾನಿಲ್ಲಿಗೆ ಬಂದು ಕೆಲಕಾಲ ಮಾತ್ರ ಆಗಿದ್ದರಿಂದ ನಾನಿನ್ನೂ ಮನುಷ್ಯ ಸಹಜ ಭಾವನೆಗಳಿಂದ ಕೂಡಿದ್ದೆ. ಆಗ ಬೆಟ್ಟದ ಮೇಲೆ ಕಾಣಿಸಿಕೊಂಡ ಆಕೆ ನನ್ನನ್ನು ನೋಡಿ ಮಾತನಾಡಿಸಲು ಯತ್ನಿಸಿದಾಗ ನಾನು ಪ್ರತಿಕ್ರಿಯಿಸದೆ ಸುಮ್ಮನಿದ್ದೆ.

ಹೌದು ಆಗಿನ್ನೂ ನನ್ನನ್ನು ಮಾನವ ಭಾವನೆಗಳು ಆವರಿಸಿದ್ದವು. ಅದರ ಜೊತೆಗೆ ಹಳೆಯ ಕೋಪಗಳು ಇದ್ದವು. ಆಕೆಯ ಬಗ್ಗೆ ನನಗೆ ಕೋಪ ಇಲ್ಲದಿದ್ದರೂ- ಅವಳ ಮುಖ ಕೂಡ ಈಗ ನನಗೆ ನೆನಪಿಲ್ಲ- ಆ ಹಳೆಯ ಕೋಪದಿಂದಾಗಿಯೇ ಅವಳಿಗೆ ಕೇಳಿಸದಂತೆ ಅವಳ ಹಿಂದೆ ಹೋಗಿದ್ದೆ.

ಈಗ ಅದರ ಬಗ್ಗೆ ಜನ ಹೇಳುವ ಕತೆ ಸಂಪೂರ್ಣವಾಗಿ ಕಟ್ಟುಕತೆ. ಯಾಕೆಂದರೆ ಅವತ್ತು ಆಗಲೇ ಕತ್ತಲಾಗುತ್ತಿತ್ತಲ್ಲದೆ ನಾನು ಆಕೆಯ ಕತ್ತಿನ ಸುತ್ತ ನನ್ನ ಕೈಗಳನ್ನು ಹಾಕಿದಾಗ ಅವಳ ದನಿಯನ್ನು ಕೇಳಿಸಿಕೊಳ್ಳಲು ಇಡೀ ಕಣಿವೆಯಲ್ಲಿ ಯಾರೊಬ್ಬರೂ ಇರಲಿಲ್ಲ. ಆದರೆ ನಿಮಗೆ ಇದೆಲ್ಲ ಅರ್ಥವಾಗಬೇಕಾದರೆ ನನ್ನ ಕತೆಯನ್ನು ಮೊದಲಿನಿಂದ ನಿಮಗೆ ಹೇಳಬೇಕಾಗುತ್ತದೆ.

ಬಿಡಿ, ಆ ಸಂಜೆಯ ಬಗ್ಗೆ ಮಾತನಾಡದಿರುವುದೇ ವಾಸಿ. ನಾನಿಲ್ಲಿ ವಾಸಿಸುತ್ತಿದ್ದೇನೆ. ನನ್ನ ಕೋಸುಗಳನ್ನು ನನ್ನೊಂದಿಗೆ ಹಂಚಿಕೊಳ್ಳುವ ಬಸವನಹುಳುಗಳೊಂದಿಗೆ. ಇಲ್ಲಿ ಎಲ್ಲೆಲ್ಲಿ ಅಣಬೆಗಳು ಸಿಗುತ್ತವೆಂದು ಅವುಗಳ ವಿಚಾರಿಸುವುದನ್ನು ಯಾವುದೆಂದು ನಾನು ಬಲ್ಲೆ. ಆದರೆ ಮಹಿಳೆಯರ ಬಗ್ಗೆ ಅವರಲ್ಲಿನ ವಿಷದ ಬಗ್ಗೆ ನಾನೀಗ ಚಿಂತಿಸುವುದಿಲ್ಲ. ವ್ಯಭಿಚಾರ ಮಾಡದೇ ಜೀವಿಸುವುದು ಈಗ ರೂಢಿಯಾಗಿದೆ.

ಆ ಕುಡುಗೋಲು ಹಿಡಿದಿದ್ದ ಕಪ್ಪನೆಯ ಹೆಂಗಸೇ ಕೊನೆ. ನನಗಿನ್ನೂ ನೆನಪಿದೆ. ಅಂದು ಆಕಾಶದಲ್ಲಿ ಕಪ್ಪು ಮೋಡಗಳಿದ್ದವು. ನಿಧಾನವಾಗಿ ಚಲಿಸುತ್ತಿದ್ದ ಕಪ್ಪು ಮೋಡಗಳು. ಅಂತಹ ಆಕಾಶದಡಿ, ಮೇಕೆಗಳು ಮಾತ್ರ ಇದ್ದ ಭೂಮಿಯ ಮೇಲೆ ಅಂದು ಪ್ರಥಮ ಬಾರಿಗೆ ಮನುಷ್ಯರ ನಡುವೆ ಮದುವೆ ಸಂಭವಿಸಿತ್ತು. ನನಗೆ ಗೊತ್ತು, ಇಬ್ಬರು ಮನುಷ್ಯರ ನಡುವಿನ ಸಂಪರ್ಕದಲ್ಲಿ ಭಯ ಮತ್ತು ಅವಮಾನ ಇರುತ್ತದೆ ಎಂದು. ನನಗೆ ಅದು ಬೇಕಿತ್ತು, ಆ ಭಯ ಮತ್ತು ಅವಮಾನವನ್ನು ಆಕೆಯ ಕಣ್ಣುಗಳಲ್ಲಿ ನೋಡುವುದು ನನಗೆ ಬೇಕಿತ್ತು. ಅದಕ್ಕೆಂದೇ ನಾನು ಆಕೆಗೆ ಹಾಗೆ ಮಾಡಿದ್ದು ನನ್ನನ್ನು ನಂಬಿ.

ಅದರ ಬಗ್ಗೆ ಇವತ್ತಿನವರೆಗೂ ನನ್ನೊಂದಿಗೆ ಯಾರೂ ಒಂದೇ ಒಂದು ಪದವನ್ನು ಮಾತನಾಡಿಲ್ಲ. ಅವತ್ತು ಇಡೀ ಕಣಿವೆಯಲ್ಲಿ ಯಾರೂ ಇರಲಿಲ್ಲವಾದ್ದರಿಂದ ಅವರಲ್ಲಿ ನನ್ನನ್ನು ಪ್ರಶ್ನಿಸಲು ಯಾವ ಪದವೂ ಇಲ್ಲ. ಆದರೆ ಪ್ರತಿರಾತ್ರಿ ಬೆಟ್ಟಗಳನ್ನು ಕತ್ತಲು ಆವರಿಸಿದಾಗ, ಚಿಮಣಿ ದೀಪದಲ್ಲಿ ನಾನು ಓದಿರುವ ಹಳೇ ಪುಸ್ತಕ ನನಗೆ ಅರ್ಥವಾಗದೆ ಉಳಿದಾಗ, ಕಣಿವೆಯಲ್ಲಿನ ಊರಿನ ಜನರ ಸದ್ದು, ಸಂಗೀತ ಮತ್ತು ದೀಪಗಳು ನನ್ನ ಮನಸ್ಸನ್ನು ಆವರಿಸಿದಾಗ, ನೀವೆಲ್ಲ ನನ್ನನ್ನು ದೂಷಿಸುತ್ತಿರುವ ದನಿ ನನಗೆ ಕೇಳಿಸುತ್ತದೆ.

ಆದರೆ ಅವತ್ತು ನಡೆದದ್ದನ್ನು ನೋಡಲು ಯಾರೂ ಇರಲಿಲ್ಲ. ಆನಂತರ ಆಕೆ ಎಂದಿಗೂ ತನ್ನ ಮನೆಗೆ ಹಿಂದಿರುಗದಿದ್ದರಿಂದ ಜನ ಹಾಗೆಲ್ಲ ಮಾತನಾಡುತ್ತಾರಷ್ಟೇ.

ಅಂದಹಾಗೆ, ಹಲವೊಮ್ಮೆ ಬೆಟ್ಟದ ಮೇಲೆ ನಾಯಿಗಳು ಹೋಗುವಾಗ ಒಂದು ಜಾಗದಲ್ಲಿ ಅವು ನಿಂತರೆ, ಅಲ್ಲಿನ ಭೂಮಿಯನ್ನು ಕೆರೆಯುತ್ತಾ ಬೊಗಳಿದರೆ ಅದಕ್ಕೆ ಕಾರಣ ಆ ಜಾಗದಲ್ಲಿರುವ ಮುದಿ ಹೆಗ್ಗಣದ ಗೂಡು. ನನ್ನನ್ನು ನಂಬಿ ಅಲ್ಲಿ ಮುದಿ ಹೆಗ್ಗಣದ ಗೂಡಿನ ಬದಲಾಗಿ ಬೇರೇನೂ ಇಲ್ಲ. ■

ದ್ಯಾವೇಗೌಡ ಕೊಡದೆ ಹೋದ್ರು, ಜನ ಕೊಟ್ರಲ್ಲ ತಗೊ

ಓಂದು ಹದ ಮಳೆ ಬಂದು ಸುರಿದು ಹೋಗಿದ್ದರಿಂದ. ಊರ ಸುತ್ತಲ ಮರಗಿಡದಲ್ಲಿ ಕುಳಿತಿದ್ದ ಧೂಳೆಲ್ಲ ತೊಳೆದು ಹೋಗಿ, ಊರ ಸುತ್ತಲ ವಾತಾವರಣವೆ ಸಳಸಳಿಸುತ್ತಿತ್ತು. ಆದರೂ ಕಾಳಮೂವನ ಟೀಮಿಗೆ ಅದ್ಯಾವುದೂ ಆಹ್ಲಾದಕರವಾಗಿ ಕಾಣುತ್ತಿರಲಿಲ್ಲ. ದೇವೇಗೌಡನ ಸದ್ದಡಗಿದ್ದರಿಂದ ಕಾಳಮೂವ ಬೇಸರಗೊಂಡಿದ್ದ. ಶ್ರೀಕಂಠಯ್ಯ ಸೋತಿದ್ದರಿಂದ ಸೀರ ಮಂಕಾಗಿದ್ದ. ಅಂಬರೀಷ್ ಸೋತಿದ್ದರಿಂದ ಜುಮ್ಮಿ ದಲ್ಯಾಗಿದ್ದಳು.

ಕಟ್ಟೆಪುರಾಣ

■ ಬಿ. ಚಂದ್ರೇಗೌಡ

ಬಿಜೆಪಿ ಅಧಿಕಾರಕ್ಕೆ ಬಂದಿದ್ದರಿಂದ ಉಗ್ರಿ ಮತ್ತು ವಾಟಿಸ್ಸೆ 'ಇವರನ್ನು ನೋಡೇಬಿಡೋಣ' ಎಂಬ ಉತ್ಸಾಹದಲ್ಲಿದ್ದರು. ಇನ್ನು ಸಿದ್ಧರಾಮಯ್ಯ ಗೆದ್ದಿದ್ದರಿಂದ ಹೋಟೆಲ್ ಚಿಕ್ಕಣ ಖುಷಿಯಿಂದ ಮೀಟರು ಗಟ್ಟಲೆ ಕಾಫಿ ಎಳೆಯುತ್ತಿದ್ದ!

"ಅಂತೂ ಎಡೂರಪ್ಪನಿಗೆ ಅಧಿಕಾರವ ದ್ಯಾವೇಗೌಡ ಕೊಡದೆಯಿದ್ರು ಜನ ಕೊಟ್ರಲ್ಲ ಬುಡು" ಎಂದ ಉಗ್ರಿ.

"ದ್ಯಾವೇಗೌಡ ಕೊಡಕ್ಕೆ ಬತ್ತಿರಲಿಲ್ಲ ಕಣೊ ಉಗ್ರಿ" ಎಂದ ವಾಟಿಸ್ಸೆ.

"ಕೊಟ್ರೇನಾಯ್ತಿತ್ತೋ? ಮಾತು ಉಳಕಳದು, ಪ್ರೂತಿಪ್ರೂದಿಸೂ ಉಳಕಸದು."

"ಅಂಗಲ್ಲ ಕಣೊ ಉಗ್ರಿ, ದ್ಯಾವೇಗೌಡ ಸೆಕ್ಯುಲರು ಅಂತ ಹೇಳಿಕೊಂಡೋನು, ಅಂತವ್ನಲ್ಲಿ ಬಿಜೆಪಿಗೆ ಪವರ್ ಕೊಡಕ್ಕೆ ಬತ್ತಿರಲಿಲ್ಲ."

"ಈಗೇನಾಯ್ತು? ನೀನು ಕೊಡದಿದ್ರೆ ಕತ್ತೆಬಾಲ, ಜನ ಕೊಟ್ರು, ಹೋಗೊ ನಿನ್ನವುನ್ ಕಂತೆನ್ನಾಡ ಅನ್ನಂಗಾಯ್ತುನ್ನ."

"ಅದೂ ಕರೆಟ್ಟು. ಅಂತೂ ಅಪ್ಪಮಕ್ಕಳು ಸೇರಿಕೊಂಡು ಬಿಜೆಪಿಯ ಈ ಮಟ್ಟಕ್ಕೆ ಬ್ಯಳಿಸಿಬುಟ್ರು."

"ಬ್ಯಳುದ್ರು ತಾನೆ ಏನು ಮಾಡಕ್ಕಾದತ್ಲ ಅವುರು? ಆ ಯಗಡೆ ಕಾಲ್ಡಲ್ಲಿ ಹೋಗಿಬುಡ್ತು ಕಾಂಗ್ರೆಸ್ಸು ಅಂತ ಮಾಡಿದ್ರೊ, ಇವತ್ತೆಲ್ಲದೆ ಜಂತಾ ಪಕ್ಷ?" ಎಂದ ಸೀರ.

"ಜಂತಾ ಪಕ್ಷ ಬ್ಯಾರೆ ಪಕ್ಷದ ವಟ್ಟೆಲದೆ ಚಿಗಪ್ಪ ಪರೆಗ್‌ಜಾಂಪಲ್ ಕೊಡದಾದ್ರೆ, ಇವತ್ತು ಬಿಜೆಪಿ ಪಳಗಿರೋರು ಜಂತಾಪಾರ್ಟಿ ಜನ. ಅಂಗೆ ಕಾಂಗ್ರೆಸ್‌ನಲ್ಲಿರೋರು ಜಂತಾ ಪಾರ್ಟಿ ಜನ. ಜಂತಾ ಪಾರ್ಟಿ ಎಲ್ಲೂ ಹೋಗಿಲ್ಲ, ಬೇರೆ ಪಾರ್ಟಿಲಿ ದೃಜೇಶನ್ನಾಗ್ಯದೆ ಅಷ್ಟೆ."

"ಜನ ಸಣ್ಣಪುಟ್ಟ ಪಾರ್ಟಿಯ ತಗದೆ ಯಸ್ತರಲ್ಲ ಹೇಳು?" ಎಂದ ಉಗ್ರಿ.

"ದುಡ್ಡಿನೆದ್ರಿಗೆ ಯಾವ ಪಾರ್ಟಿ ಉಳದವೊ ಉಗ್ರಿ. ಐನೂರುರೂಪಾಯಿ ನೋಟಿನೆದ್ರಿಗೆ ಹತ್ತುರುಪಾಯಿ ಉಳದತೇನೊ? ಅದ್ಕೆ ಜೆಡಿಯು, ಸಮಾಜವಾದಿ, ಸುವರ್ಣ, ಸರುವೋದಯ, ಬಿಎಸ್‌ಪಿಯಲ್ಲ ಬಕ್ಕಬರಿಲೆ ಬದ್ದೊ ಅತ್ತಗೆ" ಎಂದ ವಾಟಿಸ್ಸೆ.

"ಆ ಬಿಎಸ್‌ಪಿಗಳೆ ಕಣಯ್ಯ ಖರ್ಗೆ ಮುಖ್ಯಮಂತ್ರಿಯಾಗದಂಗೆ ಮಾಡಿದ್ದು."


"ಅಲ್ಲಿಗೆ ಖರ್ಗೆ ಕೋಟಾ ಮುಗಿತು ಅಂತಿಯಾ?"

"ಅಂಗೆ ಆಯ್ತಪ್ಪ, ಅವುರು ಸುಮಾರ್ ಕಡೆ ಕಾಂಗ್ರೆಸ್ ಕ್ಯಾಂಡೇಟ್‌ಗಳಿಗೆ ಟಾಂಕೊಟ್ರು ಕೆಡವಿದ್ದರಂತೆ."

"ಟಾಂಗ್ ಕೊಟ್ಯಾಗ ದ್ಯಟ್ಟಿಗೆ ಸಿಂತಗಳಕ್ಯಾದತೇನೊ? ಬಿದ್ದೇ ಬೀಳಬೇಕಾಯ್ತದೆ. ಅಂಗೆ ಹೋದಿದ್ದೆ ಈ ಚುನಾವಣೆ ಒಂದಿಷ್ಟು ವಳ್ಳೆ ರಿಜಲ್ಟು ಕೊಟ್ಟದೆ."

"ಯಾವ್ದೊ ವಳ್ಳೆ ರಿಜಲ್ಟು?"

"ಆ ದ್ರುಂಸಿಂಗ ಮನೆಲಿತಕ್ಕೇನಾಗಿತ್ತಪ್ಪ? ನಿಂತ ಕಿಸಗಂಡು ಬಿದ್ದ. ಅದೊಂದು ವಳ್ಳೆ ರಿಜಲ್ಟು. ಈ ಕಡಿಕೆ ನಮ್ಮ ಜೆ.ಟಿ. ದ್ಯಾವ ದೇವೇಗೌಡರತ್ರ ಇದ್ರೆ ಯಂತ ವ್ಯಾಲಿವೇಶನ್ ಇರದು. ಆಮ್ಯಾಲೆ ಡಿ.ಟಿ.ಟಿ. ಜಯಕುಮಾರ ಹೋದ. ಅಮ್ಯಾಲೇ..."



"ಅಂಗಕೆ ನೀ ಗುರುಯು ಚೇಷ್ಟೆ ಅಂತೀಯಾ?"

"ಊ ಮತ್ತೆ? ಅವುನ್ಯಾದತ್ತು ಗಂಭೀರವಾದ ರಾಜಕಾರಣ ಮಾಡಿದ್ದನೊ? ಬರೀ ಚೇಷ್ಟೆ ಮಾಡಿಕಂಡೇ ಬಂದ. ಕೋತಿ ತಾನು ಕೆಡದು ಅಲ್ಲವನನ್ನಲ್ಲ ಕೆಡುಸ್ತು ಅಂತ ಆ ಕಾಂಗ್ರೆಸ್‌ನ್ನಲ್ಲ ಹಾಳುಮಾಡಿ, ಅದ್ಯಾನ ಮಾಡಿ ಬಿಸಾಕಿದ. ಜನ ಅತ್ತಗೆ ಅವುನ್ನೆ ಬಿಸಾಕಿದ್ರು" ಎಂದ ಉಗ್ರಿ.

"ಹೋಂಟು ಸರಿ. ಮುಂದೆ ಎಂ.ಪಿ. ಯಲಕ್ಷನ್ ಬತ್ತದೆ. ಆಗ ಯಂಗೆ ಎದ್ದು ಬತ್ತನೆ ನೋಡು ಸಂ ಗುರು."

"ಎದ್ದು ಬರೊ ಕಾಲ ಹೋಗ್ಯದೆ ಕಣೊ. ಆಗ್ಲೆ ಕಾಲ ಯಲಿತನೆ ಬಂಗಾರಿ. ಇನ್ನಂಗೆದ್ದು ಬಂದನೂ?"

"ಮಿಸ್ಟರ್ ಉಗ್ರಿ, ಇದೇ ನಿಮ್ಮ ದ್ಯಾವೇಗೌಡ ಚುನಾವಣೆ ಕಸದಬುಟ್ಟಿಲಿ ಬಿದ್ದಿದ್ದ. ಅಮ್ಯಾಲೇನಾದ? ರಾಜಕಾರಣದಲ್ಲಿ ಏನಾದ್ರು ಆಗಬವುದು. ಜುಮ್ಮಕ್ಕ ನೀನಿಂಗೆ ದೇವರಂಗೆ ಕುಂತ್ರೆ ಆಗದಿಲ್ಲ, ಮಾತಾಡಬೇಕು. ಅಂಬರೀಷ ಕೇರ್ ಮಾಡದಂಗೆ ಇಸ್ಪೀಟ್ ಆಡ್ತ ಕುಂತಿರುವಾಗ ನೀನು ಚೌಕಬರನಾರ ಆಡಬೇಕು ಕಣಕ್ಕ" ಎಂದ ವಾಟಿಸ್ಸೆ.

"ಕಂಡೋನಂಗೆ ಹೇಳ್ತಿಯಲ್ಲ, ಸಸ್ಸೆ ಕೂತಗಳ್ಳ."

"ಕಾಣದೆಯಿದ್ದು ಅಂಬುರೀಸ್ ಯಾವ ಟೈಮಲ್ಲಿ ಏನು ಮಾತಾಡ್ತನೆ ಅಂತ ಗೊತ್ತು ಕಣಕ್ಕ, ಅದೇನಾದ್ರು ಆಗ್ಲಿ, ಅವುನು ಶ್ರೀರಂಗಪಟ್ಟದಲ್ಲಿ ನಿಲ್ಲಬಾರದಿತ್ತ ಕಣಕ್ಕ."

"ಆಪ್ರುವಿಪ್ರುಕಥೇಳ್ತಿಯಲ್ಲ, ನಿಮ್ಮ ಬಂಗಾರಿದೇಳೊ?"

"ಅದೊಂದು ಬ್ಯಾಡಲಕು, ಕಣೊ ಉಗ್ರಿ."

"ಯಾವ ಬ್ಯಾಡಲಕು, ಇಲ್ಲ, ಗುಡ್ಡಕ್ಕೆಯಾ. ಜನ ಸಾಕು ನಿನ್ನ ಚೇಷ್ಟೆ ಅಂತ ಸುಮ್ಮನಿರಿಸ್ಯವುರೆ ಕಣೊ."

ಅಜ್ಜಿ ಹೇಳಿದ ಆಧುನಿಕ ಕತೆ

'ಅಜ್ಜಿ ಅಜ್ಜಿ ಕತೆ ಹೇಳಜ್ಜಿ' ರಚ್ಚೆ ಹಿಡಿಯಿತು ಮೊಮ್ಮಗು. ಅಜ್ಜಿ ಹೇಳುವುದಕ್ಕೆ ಪ್ರಾರಂಭಿಸಿದಳು:


ಒಂದು ದೇಶ. ಅದಕ್ಕೊಬ್ಬ ರಾಜ. ಅವನೋ ರಾಕ್ಷಸನಂತೋನು. ಮಂತ್ರಿ ಇದ್ದನಲ್ಲಾ ಅವನು ಮೊರೆತ ಹುಲಿ. ಇನ್ನು ರಾಜನ ಪರಿವಾರವನ್ನು ಕೇಳುವ ಹಾಗೇ ಇಲ್ಲ, ರಣಹದ್ದುಗಳ ತರಹ ಪ್ರಜೆಗಳನ್ನು ಕಿತ್ತು ತಿನ್ನುತ್ತಿದ್ದೊ. ಹಿಂಗಾಗಿ ಪ್ರಜೆಗಳ ಜೀವನ ಅನ್ನೋದು ತಲೆಗಿದ್ದರೆ ಕಾಲಿಗಿಲ್ಲ, ಕಾಲಿಗಿದ್ದರೆ ತಲೆಗಿಲ್ಲ ಅನ್ನುವ ಹಾಗಿತ್ತು, ಆಗ ಏನಾಯ್ತು ಅಂತೀಯಾ. ಆ ದೇಶದಲ್ಲಿ ಒಂದು ಕಾಡು ಇತ್ತು, ಆ ಕಾಡಲ್ಲಿ ಚಿನ್ನಬೆಳ್ಳಿ ವಜ್ರ ವೈಡೂರ್ಯ ಅಗಾಧವಾಗಿತ್ತು, ಭೂಮಿ ಬಗೆದರೆ ಸಾಕು ಅವು ಸಿಗುತ್ತಿದ್ದೊ. ಅಂತಹ ಚಿನ್ನದಂತಹ ಕಾಡಿಗೆ ಎಲ್ಲಿಂದಲೋ ಬಂದ ಕೆಲವರು ಸೇರಿಕೊಂಡರು. ಅಲ್ಲಿದ್ದ ಸಂಪತ್ತನ್ನೆಲ್ಲ ಬಗೆದು ಬಗೆದು, ದೂರ ದೇಶಕ್ಕೆ ಕಳುಹಿಸಿ ಅವರೂ ಒಂದು ಕುಳ ಅಂತ ಆದರು.

ಅಜ್ಜಿ ಹೇಳುತ್ತಿದ್ದ ಕತೆಗೆ 'ಹೂಂ' ಅಂತಿತ್ತು ಮಗು. ಓಹೋ ಇದಕ್ಕೆ ಇನ್ನೂ ನಿದ್ದೆ ಬಂದಿಲ್ಲ ಅಂತ ಕಾಣ್ತದೆ ಅಂದುಕೊಂಡ ಅಜ್ಜಿ ಕತೇನ ಮುಂದುವರೆಸಿತು:

ಕಾಡಿನ ಸಂಪತ್ತನ್ನೆಲ್ಲ ಲೂಟಿ ಹೊಡೀತಿದ್ದರಲ್ಲ ಅವರು ಬಲೇ ಜಾಣರು. ಪ್ರಜೆಗಳ ಸಹಕಾರ ಇಲ್ಲದಿದ್ದರೆ ಇದು ಬಹಳ ದಿನ ಮುಂದುವರೆಯಲ್ಲ ಅಂತ ತಿಳಿಯಿತು. ಅವರಿಗೂ ಒಂದಿಷ್ಟು ಸಹಾಯ ಮಾಡ್ತಿದ್ದರು. ಮಗಳಿಗೆ ಮದುವೆ ಮಾಡ್ಬೇಕು ಅಂದರೆ ಅವರಿಗೂ ಒಂದಿಷ್ಟು ಹಣ ಬಿಸಾಕೋರು. ಗುಡಿ ಬಿದ್ಹೋಯ್ತಾ ಅದೆ ಅಂದರೆ ತಾವೇ ಮುಂದೆ ನಿಂತು ದುರಸ್ತಿ ಮಾಡಿಸೋರು. ಹೀಗೆ ಅವರು ಮಾಡಿಕೊಟ್ಟ ಸಹಾಯಾನ ಒಂದಕ್ಕೆ ಹತ್ತು ಮಾಡಿ ಪ್ರಚಾರ ಮಾಡೋಕೆ ಅಂತಲೇ ಕೆಲವರನ್ನು ನೇಮಿಸಿದ್ದರು. ಸಣ್ಣಪುಟ್ಟ ಸಹಾಯ ಮಾಡಿಕೊಡ್ತಿದ್ದರಲ್ಲ ಇವರ ಸಮಾನ ಯಾರೂ ಇಲ್ಲ, ನಮ್ಮ ನಾಯಕರಾಗಲು ಇವರೇ ಲಾಯಕ್ಕು ಅಂತ ಒಬ್ಬ ಮಾತನಾಡಿಕೊಳ್ಳುತ್ತಿದ್ದರು.

ಕಾಡಿನ ಸಂಪತ್ತನ್ನೆಲ್ಲ ಲೂಟಿ ಮಾಡ್ತಿದ್ದಾರೆ ಅನ್ನೋದರ ಸುಳಿವು ರಾಜನಿಗೆ ಸಿಕ್ಕಿತು. ಅರೆರೆ ಅವರು ಮಾಡುತ್ತಿರುವ ಕೆಲಸವನ್ನ ನಾವೇ ಮಾಡಬಹುದಲ್ಲ ಅಂದುಕೊಂಡು ಅವನೇನು ಮಾಡಿದ. 'ಅರಣ್ಯ ಸಂರಕ್ಷಣಾ ಕಾಯ್ದೆ' ಅಂತ ಒಂದು ಮಾಡಿದ. ಈ ಕಾಯ್ದೆ ಜಾರಿಗೆ ಬಂದರೂ ಅದರ ಪಾಡಿಗೆ ಅದಿತ್ತು, ಲೂಟಿ ಪಾಡಿಗೆ ಲೂಟಿ ನಡೀತಾನೆ ಇತ್ತು. ಓಹೋ ಬರೀ ಕಾನೂನು ಮಾಡಿದರೆ ಏನೇನೂ ಲಾಭವಿಲ್ಲ ಅದನ್ನು ಅನುಷ್ಠಾನಗೊ ಮಾಡಬೇಕು ಅಂತ ಇದಕ್ಕೇ ಅಂತಲೇ ಕೆಲವು ಅಧಿಕಾರಿಗಳನ್ನ ನೇಮಿಸಿದ. ಇವರೆಲ್ಲ ದಕ್ಷರು, ಪ್ರಾಮಾಣಿಕರು ಎಂಬುದು ನಿಜವೇಯ. ಆದರೆ ಯಾವುದೋ ಮಾಯೆ ಅವರನ್ನ ಆವರಿಸಿರಬೇಕು. ಕಾಡಿನ ಸಂಪತ್ತು ಅವರೆದುರು ಲೂಟಿ ಆಗುತ್ತಿದ್ದರೂ ಅವರ ಕಣ್ಣಿಗೆ ಬೀಳ್ತಾನೆ ಇರಲಿಲ್ಲ, ಕಾಲ ಕಳೆಯುತ್ತಿದ್ದಂತೆ ಆ ಸ್ಥಾನಕ್ಕೆ ಬರಲು ದಕ್ಷ ಅಧಿಕಾರಿಗಳಲ್ಲೇ ಪೈಪೋಟಿ ಪ್ರಾರಂಭ ಆಯಿತು.

ಅಧಿಕಾರಿಗಳು ಎಲ್ಲರೂ ಒಂದೇ ತರಹ ಅಲ್ಲವಲ್ಲ, ಅಲ್ಲೊಬ್ಬ ಇಲ್ಲೊಬ್ಬ ಉಪ್ಪಿನ ಋಣಾಗಿಣ ಅಂತ ಏನೇನೊ ಹೇಳ್ತಿದ್ದೊ. ಬದುಕೋ ದಾರಿ ಗೊತ್ತಿಲ್ಲದ ಅವು ಲೂಟಿ ತಡೆಯೋಕೆ ನಿಂತೊ. ಆದರೆ ಭಗವಂತನ ಇಚ್ಛೆಯೇ ಬೇರೆಯಾಗಿತ್ತು ಅಂತ ಕಾಣುತ್ತೆ. ಇಂತಹ ಅಧಿಕಾರಿಗಳು ಇದ್ದಕ್ಕಿದ್ದಂತೆ ಪತ್ತೆ ಇಲ್ಲದೆ ಹೋಗುತ್ತಿದ್ದರು. ಆ ಪರಮಾತ್ಮನ ಪಾದಾರವಿಂದ ಸೇರಿದರು ಅಂತ; ಕಾಡಿನ ಮರ್ಮ ಅರಿಯದೆ ಎತ್ತಲೋ ಓಡಿಹೋದರು ಅಂತ ಹೀಗೆ ನೂರು ನಾಲಿಗೆ ಸಾವಿರ ಮಾತು ಆಡಿಕೊಂಡೊ. ನಿಜಕ್ಕೂ ಏನು ನಡೆಯಿತು ಅನ್ನೋದ ಆ ಶಿವನೇ ಬಲ್ಲ.



ಇತ್ತ ಲೂಟಿಕೋರರು ದಿನೇದಿನೇ ಪ್ರವರ್ಧಮಾನಕ್ಕೆ ಬರುತ್ತಿರಲು ಅತ್ತ ಏನಾಯಿತು. ಇದ್ದಕ್ಕಿದ್ದಂತೆ ರಾಜನೆಂಬ ರಾಜನು ಶಿವನ ಪಾದಾರವಿಂದ ಸೇರಿದನು. ಆ ರಾಜನಿಗೆ ಮಕ್ಕಳು ಮರಿ ಇರಲಿಲ್ಲ, ರಾಜನಾಗುವ ಬಯಕೆ ಹಲವು ಪರಿವಾರದವರಿಗೆ ಇದ್ದಿತ್ತಾದ್ದರಿಂದ ಅವರಲ್ಲಿಯೇ ಒಳಜಗಳ ಪ್ರಾರಂಭ ಆಯಿತು. ಪ್ರಜೆಗಳೇ ರಾಜನಾರು ಎಂಬುದನ್ನು ನಿರ್ಧರಿಸಲಿ ಅಂತ ರಾಜಿ ಕಬೂಲಿಗೆ ಬಂದರು. ತಮ್ಮಲ್ಲೇ ಒಬ್ಬರನ್ನು ಆಯ್ಕೆ ಮಾಡುತ್ತಾರೆಯೇ ಹೊರತು ಇತರರನ್ನಲ್ಲ ಎಂಬ ಅಪಾರ ನಂಬಿಕೆ ಅವರಿಗಿತ್ತು, ಆದರೆ ಏನಾಯಿತು ಅಂದರೆ.... ಪ್ರಜೆಗಳು ಸಂಭಾವಿತ ಸಂಪತ್ತಿನ ಲೂಟಿಕೋರರನ್ನೇ ಆಯ್ಕೆ ಮಾಡಿದರು.

'ಯಾರನ್ನ ಮರಿ ಆಯ್ಕೆ ಮಾಡಿದ್ದು' ಅಂತ ಕೇಳಿತು ಅಜ್ಜಿ, ಆದರೆ ಅದಾದಾಗಲೋ ಮಗು ನಿದ್ದೆ ಹೋಗಿತ್ತು. ಅಜ್ಜಿ ಕರ್ತವ್ಯ ಮುಗಿಯಿತಲ್ಲ, ಅದೂ ಮಲಗಿತು.

ಒಂದು ಹೊತ್ತಿನಲ್ಲಿ ಮಗು ಕಿಟಾರನೆ ಕಿರುಚಿಕೊಂಡಿತು. ದಿಢೀರನೆ ಎದ್ದ ಅಜ್ಜಿ 'ಏನಾಯಿತು

ಅನಾರ್

■ ಎಚ್. ಎಲ್. ಕೇಶವಮೂರ್ತಿ

ಮರಿ' ಅಂತ ಕೇಳಿತು. ಟಿವಿ ಕಡೆ ಕೈ ಬೆರಳು ಮಾಡಿ 'ಅವರೇನ ಅಜ್ಜಿ ಸಂಪತ್ತು ಕಳ್ಳರು' ಅಂತು. ಅಜ್ಜಿ ಟಿವಿ ಕಡೆ ನೋಡಿತು. ಸಚಿವ ಸಂಪುಟದ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯುತ್ತಿತ್ತು, ಯಾರೋ ಮನೆ ಕಿತ್ತು ಹೋಗುವ ಹಾಗೆ ಟಿವಿ ಹಾಕಿದ್ದರಿಂದ ಮಗುವಿಗೆ ಎಚ್ಚರ ಆಗಿ ಕತೆಯಲ್ಲಿನ ಕಾಡು ಲೂಟಿಕೋರರ ನೆನಪು ಆಗಿರಬೇಕು. 'ಅಯ್ಯೋ ಅಲ್ಲ ನನ ಕಂದ. ಅವರು ದೇಶ ಆಳೋರು' ಅಂತು ಅಜ್ಜಿ!

ಯಾರಿಗುಂಟು ಯಾರಿಗಿಲ್ಲ!

ಇದು ಅದೃಷ್ಟದ ಆಟ ಅಂದರೆ!

ಪಕ್ಷದ ಟಿಕೆಟು ಸಿಗಲಿಲ್ಲ,

ಅದನ್ನು ತಪ್ಪಿಸಿದವರಿಗೆ ಹಂಡೆ ಹಾಲು ಕುಡಿದಂತಹ ಖುಷಿ!

ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆ.

ಟಿಕೆಟ್ ಸಿಗಲಿಲ್ಲ ಎಂಬ ಅನುಕಂಪ; ತಪ್ಪಿಸಿದವರ ಮೇಲಿನ ಸಿಟ್ಟು; ಜನಬೆಂಬಲಕ್ಕೆ ದಾರಿ ಆಯಿತು.

ಇಷ್ಟೇ ಆಗಿದ್ದರೆ ಅದೃಷ್ಟ ಅನ್ನೋದು ಬೋಟಾನೆ ಅನ್ನಬಹುದಿತ್ತು. ಇದಕ್ಕೆಲ್ಲ ಕಿರೀಟವಿಟ್ಟಂತೆ ಸರಳ ಬಹುಮತಕ್ಕೆ ಭಾಜಪಗೆ ಮೂವರು ಅತ್ಯವಶ್ಯಕ!

"ಇನ್ನೆಲ್ಲಿ ನಿಂತಗಬೇಕಾಗಿತ್ತ?"

"ಎಲ್ಲೂ ನಿಂತಗಬಾರದಿತ್ತು, ಅದ್ವುನು ಎಂಪಿಯಾಗಿ ...ಣು ಅಂದ್ರೆ ಸಮುದ್ರದಲ್ಲಿ ಈಜಾಡತಿದ್ನೋನು. ...ಗಷ್ಟುದ ಮದಿನ್ವಳಿಕೆ ಯಾಕೆ ಬಂದು ಬೀಳಬೇಕು? ...ದಿದ್ರು ಆಳನೋಡಿ ಬೀಳಬೇಕಾಗಿತ್ತು ಕಣಕ್ಕ. ...ನ್ನೆ ಓಡಿಬಂದು ತಲಿಮುಂದಾಗಿ ಬೀಳದಲ್ಲ."

"ಅಂಗೆ ಆಯ್ತು ಕಂಡ್ರ. ಅಂಬುರೀಸು ತಲಿ ...ಂದಾಗಿ ಬದ್ದ" ಎಂದ ಶೀರ.

"ಮದಿನ್ವಳಿಕೆ ಬೀಳರು ತಲಿಮುಂದಾಗೆ ಆಲದ ...ನ್ನ ಬೀಳದು. ನಾನು ಹಿಂದನೆ ಎಚ್ಚರಿಕೆ ಕೊಟ್ಟದ್ದೆ. ...ಂಗಪಟ್ನ ಸತ್ತೋರಿಗೆ ಪಿಂಡ ಬುಡೊ ಜಾಗ. ...ಗ್ಲೆ ಮೂರು ಜನ ಎಮ್ಮೆಲ್ಲೆಗಳು ಸತ್ತು ಅವುರೆದ್ದಿರು ...ಎಲ್ಲೆಗಳಾಗ್ಯವುರೆ, ಅಂತ ಜಾಗಕ್ಕೆ ಇವುನು ...ಗದಲ್ಲ ಅಂತ ಇದೇ ವೇದಿಕೆ ಮ್ಯಾಲೇಳಿದ್ದೆ ...ದೇನೊ ಉಗ್ರಿ?"

"ಹೇಳಿದ್ದೆ ಕಣೊ. ಆದ್ರೆ ನರಿ ಹೂಸು ಗಟ್ಟಕೇರ್ರತೆ, ...ಥೋನ ಮಾತ ಅಂಬುರೀಸು ಕೇಳಬೇಕಲ್ಲ" ಎಂದ

"ಕೇಳಿದೆಯಿದ್ರು, ನೋಡಿದ್ರೆ ಗೊತ್ತಾಯ್ತದಲ್ಲೊ. ... ಸಾವಿನಂಗೆ ಕಾಣ್ತದಪ್ಪ ಅಲ್ಲಿ ಶಾಸಕರು ಸತ್ತಿರದ ...ದಿದ್ರೆ. 'ಕಡಿಗೆ, ಆ ಬಂದಿಸಿದ್ದೇಗೌಡನುಡುಗ ...ವ್ನ, ಅವರಪ್ಪನ ಹೆಸರೇಳಿಕೊಂಡು ರಾಜಕಾರಣ ...ತ್ತಯಿರೊ ಜಾಗಕ್ಕೆ ಇವುನ್ಯಾಕಪ್ಪ ಹೋಗಬೇಕು? ...ಗೊ ಕಿತ್ತಾಡಿಕೊಂಡು ಕಾದಾಡಿಕೊಂಡು ಕಾಲ ...ದ್ನೊ. ಅಂಥ ಜಾಗಕ್ಕೆ ಇವುನೋಗಿ ಸೋತು ...ದ್ರೆ ಯಾರ್ದಕ್ಕ ತೆಪ್ಪು? ನೀನೆ ಹೇಳು."

"ನಾನೇನೇಳನ್ಲ, ಅವುನು ನಿಂತಾಯ್ತು, ಸೋತಾಯ್ತು, ...ಲ್ಲ ಮುಗುದದೆ. ಹೋಗು ಸುಮ್ಕನೆ."

"ಸುಮ್ಕನೆ ಹೋಗದಲ್ಲ, ಡಿಸ್‌ಕರ್ಸನ್ನಾಗಬೇಕು. ...ಜೆಪಿ ಬಂದಿರದ್ರಲ್ಲಿ ದ್ಯಾವೇಗೌಡುಂದೇನು ತಪ್ಪು, ...ಸ್ಸ್ಯನೋರದೇನು ತಪ್ಪು, ಇಂತ ಮ್ಯಾಟ್ರಲ್ಲ ಚರ್ಚೆ ...ಬೇಕು ಕಣಕ್ಕ."

"ಮಾಡು. ನಿನಿಗಿನ್ನೇನು ಕೇಪು?"

"ಇನ್ನದೆ ಶಾನೆ ನಮ್ಮ ಕ್ಲಬ್ಬ?"

"...!?"

...ಬಹುಮತ ಬಂದಿದ್ದರೆ?"

...ಇವರನ್ನು ಮೂಸಿಯೂ ನೋಡುತ್ತಿರಲಿಲ್ಲ.

...ಈಗ ರಾಜ ಮರ್ಯಾದೆ!

...ಪಕ್ಷದ ಟಿಕಿಟು ದೊರೆತು ಜಯ ಗಳಿಸಿದ್ದರೂ ...ತ್ರಿ ಪದವಿ ಕನಸಿನೊಳಗಣಗಂಟು!

...ಗೂಟದ ಕಾರು; ಕೇಳಿದ ಖಾತೆ; ಹೇಳಿದ ಕೆಲಸ!

...ತಿರಸ್ಕರಿಸಿದರೆ?

...ವಿರುದ್ಧ ಮತ!

...ಟಿಕಿಟು ತಪ್ಪಿಸಿದವರಿಗೆ ವಿಷ ಕುಡಿದಂತಹ ...ಭವ!

...ಒಂದಾಯ ಅಭ್ಯರ್ಥಿ ಎಸೆದ ಒಂದೇ ಕಲ್ಲಿಗೆ ...ರಿದ ಕಾಯಿಗಳೆಷ್ಟೋ!

...ಬಯಸದೇ ಬಂದ ಭಾಗ್ಯ ಅನುಭವಿಸಲಿ ಪಾಪ. ...ಆದರೆ ಒಂದು ಅನುಮಾನ. ಭಾಜಪ ಬೆಂಬಲಿಸಿದ ...ತರೇನೋ ಸುಭದ್ರ ಸರ್ಕಾರ ಬರಲಿ ಎಂಬ ...ದಿಂದ ಬೆಂಬಲ ನೀಡಿದ್ದೇವೆ ಎನ್ನುತ್ತಾರೆ. ಇವರನ್ನು ...ಳೂರಿನ ಐಷಾರಾಮಿ ಹೋಟೆಲಿನಲ್ಲಿ ಕೂಡಿ ...ದ್ದು ಇತರರ ಸಂಪರ್ಕದಿಂದ ದೂರವಿರಿಸಿದ್ದು ... ಕಡೆಯು ಪಹರೆಯವರನ್ನು ಕಾವಲು ಇಟ್ಟದ್ದು ...ಲ್ಲ ನೋಡಿದರೆ ಹದ್ದಿನ ಪಂಜರದೊಳಗೆ ಸಿಕ್ಕಿಬಿದ್ದ ...ಮರಿ ನೆನಪಾಗುತ್ತಲ್ಲಾ...

ಹೆಸರು ಯಾರದ್ದೋ....

...ಇಂತೂ ಇಂತೂ ಯಾಡಿಯೂರಪ್ಪನವರು ...ಮುಂತ್ರಿ ಆದರು.

...ಮಂತ್ರಿಮಂಡಲ ಯಾರದ್ದು ಆಗುತ್ತೆ?

...ಭಾಜಪ ಗೆಲುವಿಗೆ ಗಣಿ ದೊರೆಗಳು ಮೂಲಕಾರಣ ... ಆರು ಜನ ಪಕ್ಷೇತರರನ್ನು ಖರೀದಿಸಿದ್ದೂ ... ಕಾರಣರಂತೆ. ಕಂಡಹಾಗೆ ಮೂವರನ್ನು ...ಗಳನ್ನಾಗಿ ಮಾಡಿದ್ದಾರೆ. ಅದು ಸರಿ. ಭಾಜಪ ...ರಲ್ಲಿ ನಲವತ್ತು ಮಂದಿ ಕ್ರಿಮಿನಲ್ ಮೊಕದ್ದಮೆ ...ಸುತ್ತಿದ್ದಾರಂತೆ. ಮಂತ್ರಿ ಮಂಡಲದ ಸದಸ್ಯರಲ್ಲಿ ...ಮಂದಿ ಈ 'ಅರ್ಹತೆ' ಹೊಂದಿದ್ದಾರೋ ತಿಳಿದಿಲ್ಲ ...ಜಾದರೂ ಅಂತಹವರು ಇದ್ದರೆ ಈ ...ಮಂಡಲ ಆಗ್ಬೋದು'ಗಣಿಮಂತ್ರಿ ಮಂಡಲವೋ', ...ನಲ್ ಮಂತ್ರಿಮಂಡಲವೋ' ಆಗಬಹುದಲ್ಲವಾ....

ಮರೆಯುವ ಮುನ್ನ



ಪಿ. ಲಂಕೇಶ್ -ಆಗಸ್ಟ್ 12, 1990

ಟಿಪ್ಪೂ, ಹೈದರ್

ಟಿಪ್ಪೂ ಕತೆ ಟಿವಿಯಲ್ಲಿ ಬರುತ್ತಿರುವಾಗ ಒಂದೆರಡು ಕುತೂಹಲಕರ ವಿಷಯ ನೆನಪಾದವು. ಅವುಗಳಲ್ಲಿ ಒಂದು ಟಿಪ್ಪೂ ಮತ್ತು ಅವರ ತಂದೆ ಹೈದರ್ ಆಲಿಗೆ ಇದ್ದ ವ್ಯತ್ಯಾಸ. ಟಿಪ್ಪೂ ರಾಜನಾಗಿದ್ದವನು, ಅವನು ಎಷ್ಟು ಉದಾರಿ, ಕ್ರೂರಿ; ಧರ್ಮಾಂಧ, ಹುಂಬ ಎಂಬುದನ್ನೆಲ್ಲ ಹೈದರ್‌ಗೆ ಹೋಲಿಸಿ ನೋಡಬೇಕು. ಹೈದರ್ ಮಣ್ಣಿನ ಮಗ, ಸಾಮಾನ್ಯ ಸೈನಿಕನಾಗಿದ್ದವನು. ಸ್ವಂತ ಛಾತಿಯಿಂದ ಮುಂದೆ ಬಂದವನು.



ಹೈದರ್ ವಿಶಿಷ್ಟ ವ್ಯಕ್ತಿ. ಮೊಗಲ್ ದೊರೆಗಳು ಮತ್ತು ಅವರಿಗಿಂತ ಹಿಂದೆ ಬದುಕಿ ಹೋದ ನಾದಿರ್ ಶಾ ಮುಂತಾದವರನ್ನು ನೆನಪಿಗೆ ತರುವ ಗಟ್ಟಿಗ. ನಾದಿರ್ ಶಾ ಸಾಮಾನ್ಯವಾಗಿ ಸೋತು ಶರಣಾದ ಮೋಸಗಾರರನ್ನು ಬದುಕಲು ಬಿಡುತ್ತಿರಲಿಲ್ಲ; ಮುಂದೆ ಚೂರಿ ಹಾಕಬಲ್ಲ ಸೋತವರನ್ನು ಉಳಿಸುತ್ತಿರಲಿಲ್ಲ. ಮಹಮದ್ ಘೋರಿಯನ್ನು 1191 ರಲ್ಲಿ ಸೋಲಿಸಿದ ಪೃಥ್ವಿರಾಜ್ ಶರಣಾಗತ ಘೋರಿಯನ್ನು ಕ್ಷಮಿಸಿದ. ಮಾರನೆ ವರ್ಷವೇ ಘೋರಿ ಮತ್ತೊಮ್ಮೆ ದಂಡೆತ್ತಿ ಬಂದು ಪೃಥ್ವಿರಾಜ್‌ನನ್ನು ಭೂಗತ ಮಾಡಿದ. ಹೈದರ್ ಆಲಿ ಆ ತರಹದವನು. ವಾಸ್ತವ ಪ್ರಜ್ಞೆ, ಯುದ್ಧದ ಪ್ರತಿಭೆ ಮತ್ತು ಅಪ್ರತಿಮ ಶೌರ್ಯ ಹೊಂದಿದ್ದವನು. ಹೋದಹೋದಲ್ಲಿ ಸೋಲುತ್ತಿದ್ದ ಮೈಸೂರು ಸೈನ್ಯಕ್ಕೆ ಹೊಸ ಚೈತನ್ಯ ತಂದವನು. ಸಾಮಾನ್ಯ ಸೈನಿಕನಾಗಿದ್ದ ಈತ ಸೈನ್ಯದಲ್ಲಿ ಬ್ರಿಗೇಡಿಯರ್ ಆಗಿದ್ದ ಸಂಬಂಧಿಯೊಬ್ಬನಿಗೆ ಹಿತವಚನ ನೀಡಿದ: ಮುಂಬೈ ಸರ್ಕಾರದಿಂದ ಶಸ್ತ್ರಾಸ್ತ್ರ ಕೊಂಡುಕೋ, ಯೂರೋಪಿನ ಮೂವತ್ತು ಜನ ಬಂದೂಕು ಗುರಿಕಾರರನ್ನು ನೇಮಿಸಿಕೋ. ಸಣ್ಣ ಸೈನ್ಯದ ತುಕಡಿಯೊಂದಕ್ಕೆ ನಾಯಕನಾದ ಹೈದರ್ ಪ್ರತಿಯೊಂದು ಯುದ್ಧದಲ್ಲೂ ಗೆಲ್ಲತೊಡಗಿದ; ಫ್ರಾನ್ಸಿನ ಜೋಸೆಫ್ ಫ್ರಾಂಕಾಯ್ ಡೂಪ್ಲೆ ಎಂಬುವವನಿಂದ ತನ್ನ ಸೈನ್ಯಕ್ಕೆ ತರಬೇತಿ ನೀಡಿದ.



ಹಳೇ ಕಾಲದ ನಂಬಿಕೆ ಮತ್ತು ಮೂರ್ಖ ಭ್ರಮೆಯಲ್ಲಿ ಮುಳುಗಿದ್ದ ನಂಜರಾಜನೆಂಬ ದಿವಾನನನ್ನು ಕಿತ್ತು ಹಾಕಿ ರಾಜನನ್ನು ಗೃಹಬಂಧನದಲ್ಲಿಟ್ಟು ಮೈಸೂರು ರಾಜ್ಯವನ್ನು ಭಾರತದ ನಕ್ಷೆಗೆ ತಂದವನು ಹೈದರ್. ರಾಜಕೀಯ ತಂತ್ರ ಬಳಸಿ ಬ್ರಿಟಿಷರು, ಫ್ರೆಂಚರು ಮತ್ತು ಮರಾಠರನ್ನು ಬೇರೆಬೇರೆ ಇಟ್ಟ ಹೈದರ್ ಅವರಲ್ಲಿ ಯಾರೊಬ್ಬರ ಸೈನ್ಯ ಬಂದರೂ ಧೂಳೀಪಟ ಮಾಡಿದ. ಮೈಸೂರನ್ನು ಸಾಮ್ರಾಜ್ಯದ ಮಟ್ಟಕ್ಕೆ ವಿಸ್ತರಿಸಿ ಆಂಧ್ರದ ಅನೇಕ ಭಾಗಗಳು, ಬಳ್ಳಾರಿ ಮಂಗಳೂರನ್ನೆಲ್ಲ ವಶಪಡಿಸಿಕೊಂಡ. ಆದರೆ ಇಂಗ್ಲಿಷ್ ತಂತ್ರ ಗೆದ್ದಿತು; ಮರಾಠರು ಮತ್ತು ಫ್ರೆಂಚರನ್ನು ತಮ್ಮತ್ತ ಸೆಳೆದುಕೊಂಡ ಬ್ರಿಟಿಷರು ಹೈದರ್‌ನನ್ನು ಸೋಲಿಸತೊಡಗಿದರು.

ಹೈದರ್ ಸಾಯುವಾಗ ಟಿಪ್ಪೂವಿಗೆ ಹೇಳಿದೆ: "ಬ್ರಿಟಿಷರ ದ್ವೇಷ ಕಟ್ಟಿಕೊಳ್ಳಬೇಡ; ರಾಜಿ ಮಾಡಿಕೋ." ಟಿಪ್ಪೂ ದೊರೆಯಾಗಿ ಬ್ರಿಟಿಷರ ಭಯದಲ್ಲೇ ಬದುಕಬೇಕಾಯಿತು. ಮರಾಠರು, ಬ್ರಿಟಿಷರು, ಫ್ರೆಂಚರನ್ನು ಬೇರೆಬೇರೆ ಇಡುವ ತಂತ್ರ ಅವನಿಗೆ ಹೊಳೆಯಲಿಲ್ಲ. ಆದ್ದರಿಂದ ಟಿಪ್ಪೂ ಹುಂಬನಂತೆ ಯುದ್ಧ ಮಾಡುತ್ತಾ ಸತ್ತಾಗ ಆತ ಕರುಣಾಜನಕ ಮತ್ತು ಸ್ವಾಭಿಮಾನದ ವ್ಯಕ್ತಿಯಾಗಿದ್ದ. ಕರುಣಾಜನಕ ಯಾಕೆಂದರೆ, ಆತನಲ್ಲಿ ಹೈದರ್‌ನಲ್ಲಿದ್ದ ಗೆರಿಲ್ಲಾ ತಂತ್ರ, ತಪ್ಪಿಸಿಕೊಂಡು ಮತ್ತೆ ಇಕ್ಕುವ ಕಲೆ ಇರಲಿಲ್ಲ; ಆದ್ದರಿಂದ ಖುದ್ದು ಹೋರಾಡಿ ಸತ್ತ. ಸ್ವಾಭಿಮಾನಿ ಯಾಕೆಂದರೆ, ಬ್ರಿಟಿಷರಿಗೆ ಶರಣಾಗಿ ಹಲವಾರು ವರ್ಷ ನಿವೃತ್ತಿ ವೇತನ, ಪೊಳ್ಳು ಗೌರವ, ರಾಜಾಧಿರಾಜನೆಂಬ ಹೆಸರು ಪಡೆಯಬಹುದಿತ್ತು; ಆತ ಹಾಗೆ ಮಾಡಲಿಲ್ಲ.

ಧೂಳು, ರಕ್ತ, ಛಲ, ಸಮಯಸಾಧಕತನದಿಂದ ಪರಾಕ್ರಮಿಯಾಗಿದ್ದ ಹೈದರ್; ಅವಿದ್ಯಾವಂತನಾಗಿದ್ದರೂ ಅನನ್ಯ ಪ್ರತಿಭೆ ಪಡೆದಿದ್ದ ಹೈದರ್ ಟಿಪ್ಪೂಗಿಂತ ವರ್ಣರಂಜಿತ ವ್ಯಕ್ತಿ.


ಇನ್ನೊಂದು ಕುತೂಹಲದ ಅಂಶ. ಮೊಗಲ್ ವಂಶದ ಆರು ಜನ ಮಕ್ಕಳು, ಮರಿಮಕ್ಕಳು ಇತ್ಯಾದಿಯಾಗಿ ಇನ್ನೂರು ವರ್ಷ, ಆರು ತಲೆಮಾರು ಕಾಲ ಭಾರತವನ್ನು ಆಳಿದರು; ಟಿಪ್ಪೂವಿನ ಆರನೆ ತಲೆಮಾರಿನ ತರುಣರು (ಇನ್ನೂರು ವರ್ಷದ ಬಳಿಕ) ಕಲ್ಕತ್ತಾದಲ್ಲಿ ಕಡುಬಡವರಾಗಿ ಬದುಕುತ್ತಿದ್ದಾರೆ.

ಕಾಣದ ನಿಗೂಢ



ವಾರದ ಆರಂಭದಲ್ಲಿ ಶಾಂತಿ ಇರುತ್ತದೆ; ಗುರುವಾರ ಬಂದೊಡನೆ ಏನು ಬರೆಯುವುದೆಂಬ ತಳಮಳ ಶುರುವಾಗುತ್ತದೆ. ಇದನ್ನು ಬಹಳ ದಿನದಿಂದ ನೋಡಿಕೊಂಡಿದ್ದೇನೆ. ಮತ್ತೆಮತ್ತೆ ಅದೇ ತರಹದ ವಸ್ತು ಕುರಿತು ಬರೆಯಬಾರದು; ಎರಡು ವಾರ ರಾಜಕೀಯವನ್ನು ಕುರಿತು ಬರೆದರೆ ಮನಸ್ಸು ಬೇರೆಯ ವಿಷಯಕ್ಕಾಗಿ ಕುಡಿ ಚಾಚತೊಡಗುತ್ತದೆ. ಇದರಲ್ಲಿ ಎರಡು ಉಲ್ಲೇಖನಾರ್ಹ. ಏನಾದರೊಂದು ವಿಷಯ ಹೊಳೆದು ವಿವರ ಬಗೆಹರಿಯದಿದ್ದಾಗ ಉತ್ಸಾಹವಿರುತ್ತದೆ; ಏನೂ ಹೊಳೆಯದಿದ್ದಾಗ ಕಿರಿಕಿರಿ ಇರುತ್ತದೆ. ಒಮ್ಮೆ ಒಂದು ಬೆಳಗ್ಗೆ ನಿತ್ಯ ಹೋಗುವುದಕ್ಕಾಗಿ ಯಾರೂ ಜನರಿಲ್ಲದ, ಹೆಚ್ಚು ವಾಹನ ಓಡಾಡದ ದಾರಿಗಾಗಿ ಹುಡುಕಿ ಹೊರಟೆ. ನಮ್ಮ ಮನೆಯ ಹತ್ತಿರದ ಗುಡ್ಡಗಳಿಂದ ಆಚೆ ನಡೆಯತೊಡಗಿದೆ. ಗುಡ್ಡಗಳು ನಾನು ತಿಳಿದಿದ್ದಕ್ಕಿಂತ ಹೆಚ್ಚು ಉದ್ದವಿದ್ದವು; ದಾರಿ ಎಲ್ಲಿಯೋ ಕರೆದುಕೊಂಡು ಹೋದಂತಿತ್ತು. ಸುಮ್ಮನೇ ನಡೆದೆ. ಆದರೆ ಮನಸ್ಸಿನಲ್ಲಿ ಆತಂಕವಿತ್ತು. ಕಂಡರಿಯದ ಊರುಗಳು, ಮರದ ತೋಪುಗಳು, ನಾನು ಊಹಿಸಿದ್ದಕ್ಕೆ ವಿರುದ್ಧ ಹರಿಯುವ ಕೊಳಚೆ ತೊರೆ. ಆಮೇಲೆ ಇದ್ದಕ್ಕಿದ್ದಂತೆ ವಿಶಾಲವಾದ ರಸ್ತೆ. ಈ ರಸ್ತೆ ನಾನು ನೋಡಿದಂತಿತ್ತು. ಸುತ್ತ ಗಮನವಿಟ್ಟು ಪರೀಕ್ಷಿಸಿದೆ. ಅದು ಮೈಸೂರು ರಸ್ತೆ! ನಮ್ಮ ಮನೆಯಿಂದ ಕೇವಲ ನಾಲ್ಕು ಕಿಲೋಮೀಟರ್ ದೂರದಲ್ಲಿ ಮೈಸೂರು ರಸ್ತೆ ಇದೆಯೆಂದು ನಾನು ತಿಳಿದಿರಲಿಲ್ಲ. ಈಗ ಈ ನಿರ್ಜನ ದಾರಿ ನನ್ನ ವಾಕಿಂಗ್ ಮಾರ್ಗ.

ಹಾಗೆ ಯೋಚನೆ ಕೂಡ. ಗೊತ್ತಿಲ್ಲದ ದಾರಿ ಹಿಡಿದಂತೆ ಆತಂಕ, ಕುತೂಹಲ- ಮತ್ತು ಲೇಖನ ಮುಗಿದಾಗ ನಿರಾಳ, ಮೈಸೂರು ರಸ್ತೆ ಸಿಕ್ಕಂತೆ!



ಸಿಟ್ಟು

ಅವರಲ್ಲಿ ಜೈಜೈ ಅನ್ನುತ್ತ
ಚರ್ಚು-ಮಸೀದಿ ಬೀಳಿಸುವಾಗ
ನೀವಿಲ್ಲಿ ಹೊಸ ಅಂಗಿ ಹಾಕೊಂಡು
ನಿಮ್ಮನೆಯ ಓಪನಿಂಗ್ ಮಾಡುತ್ತಿದ್ದರೆ
ಅದಕ್ಕೆ ನನ್ನದೇನೂ ಸಿಟ್ಟಿಲ್ಲ!

ಅವರಲ್ಲಿ ಬೆಳೆದ ಹುಡುಗಿಯ
ಮೈ-ಮನ ಕೆಡಿಸುವಾಗ
ನೀವಿಲ್ಲಿ ಮನೆ ಸಿಂಗರಿಸಿಕೊಂಡು
ನಿಮ್ಮಗಳಿಗೆ ಆರತಿ ಎತ್ತಿ, ಹೂಹಾರ ಹಾಕುತ್ತಿದ್ದರೆ
ಅದಕ್ಕೆ ನನ್ನದೇನೂ ಸಿಟ್ಟಿಲ್ಲ!

ಅವರಲ್ಲಿ ಸಾಲ-ಸೋಲ ಮಾಡಿ
ಉರುಳು ಹಾಕಿಕೊಳ್ಳುವಾಗ
ನೀವಿಲ್ಲಿ ಚಮಚಾಗಳೊಂದಿಗೆ
ಸುಮೋ, ಸಫಾರಿ ಹತ್ತಿ ಓಟು ಬೇಡುತ್ತಿದ್ದರೆ
ಅದಕ್ಕೆ ನನ್ನದೇನೂ ಸಿಟ್ಟಿಲ್ಲ!

ಅವರಲ್ಲಿ ಇಳಿವಯಸ್ಸಲ್ಲಿ,
ಬೀಪಿ-ಶುಗರ್‌ನಲ್ಲಿ ಒದ್ದಾಡುವಾಗ
ನೀವಿಲ್ಲಿ 'ಸಾಫ್ಟಿ'ಗಳೊಡನೆ ಮಧುವೆಯಾಗಿ
ಅಮೆರಿಕಕ್ಕೆ ಹಾರುವ ಕನಸು ಕಾಣುತ್ತಿದ್ದರೆ
ಅದಕ್ಕೂ ನನ್ನದೇನೂ ಸಿಟ್ಟಿಲ್ಲ!

ಏಕೆಂದರೆ
ನನ್ನ ಸಿಟ್ಟಿರುವುದು
ಕೇವಲ ಮನುಷ್ಯರ ಮೇಲೆ ಮಾತ್ರ!!

■ ಖುರ್ಷಿದ್ ಆಲಂ. ಮೋಮಿನ

ಜನರ ಜವಾಬ್ದಾರಿ ಹೆಚ್ಚಾಗಿದೆ

ಯಾವುದು ಆಗಬಾರದೆಂದು ನಾವು ಆತಂಕ ಹೊಂದಿದ್ದೆವೋ ಅದು ದುರಾದೃಷ್ಟವಶಾತ್ ಆಗಿ ಹೋಗಿದೆ. ಕೋಮುವಾದಿ ಪಕ್ಷವಾದ ಬಿಜೆಪಿ ಪಕ್ಷ ಆಡಳಿತಕ್ಕೆ ಬಂದಿದ್ದು ಅತೀ ಕೆಟ್ಟ ಮನುಷ್ಯ ಮುಖ್ಯಮಂತ್ರಿ ಸ್ಥಾನದಲ್ಲಿ ಕೂತಿದ್ದಾರೆ. ಪ್ರಜಾಪ್ರಭುತ್ವದ ದೇಗುಲದಂತಿದ್ದ ವಿಧಾನಸೌಧವನ್ನು ಗರ್ಭಗುಡಿ ಸಂಸ್ಕೃತಿಗೆ, ಕೆಟ್ಟ ಕಾಸಿನ ಸಂಸ್ಕೃತಿಗೆ ಇವರು ಬದಲಾಯಿಸುವುದು ಖಚಿತವಿದ್ದ. ಇನ್ನು ಮುಂದೆ ಕರ್ನಾಟಕದ ಆಡಳಿತ ವಿಧಾನಸೌಧದಲ್ಲಿ ಆಗದೆ ಚಾಮರಾಜಪೇಟೆಯಲ್ಲಿರುವ ಕೇಶವಕೃಪಾದಲ್ಲಿ ತೀರ್ಮಾನವಾಗುತ್ತದೆ. ವಿಧಾನ ಸೌಧದಲ್ಲಿ ನೆಪಮಾತ್ರಕ್ಕೆ ಚರ್ಚೆಗಳಾಗುತ್ತವೆ. ನಮ್ಮ ಕರ್ನಾಟಕದ ಜನಸಾಮಾನ್ಯರಿಗೆ ಕೋಮುವಾದಿ ಪಕ್ಷದ ನಿಜ ಮುಖವಾಡ ಇನ್ನೂ ಸರಿಯಾಗಿ ತಿಳಿದಿಲ್ಲ. ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನ ಕುತಂತ್ರ ಬುದ್ಧಿಗಳ ಜ್ಞಾನವೂ ನಮ್ಮ ಜನಸಾಮಾನ್ಯರಿಗೆ ತಿಳಿದಿರುವುದಿಲ್ಲ, ಹೀಗಾಗಿ ಜನರು ಆ ಪಕ್ಷಕ್ಕೆ ತಮ್ಮ ಮತವನ್ನು ಕೊಟ್ಟಿರುತ್ತಾರೆ.

ತೆಗಳಿಕೆ ಹೊಗಳಿಕೆ

ಈ ಸಾರಿ ಬಿಜೆಪಿಯವರು ಇಷ್ಟೊಂದು ಶಾಸಕರನ್ನು ಹೊಂದಲು ಕಾರಣವೆಂದರೆ ಕಾಂಗ್ರೆಸ್ ಪಕ್ಷದವರು ವಿರೋಧ ಪಕ್ಷವಾಗಿ ಉತ್ತಮ ಕಾರ್ಯ ನಿರ್ವಹಿಸದಿರುವುದು. ಯಡಿಯೂರಪ್ಪನವರು ಮಠಮಾನ್ಯಗಳಿಗೆ ಇವರ ಸ್ವಂತ ಹಣವೋ ಎಂಬಂತೆ ಕೋಟಿಕೋಟಿ ಹಣವನ್ನು ದಾನವಾಗಿ ಕೊಟ್ಟಾಗಲೂ ಕಾಂಗ್ರೆಸ್ ಪಕ್ಷದವರು ಅದರ ವಿರುದ್ಧ ಸೊಲ್ಲೆತ್ತದೆ ತೆಪ್ಪಗಿದ್ದರು. ಸಂವಿಧಾನದಲ್ಲಿ ಎಲ್ಲಿ ಈ ಮಠಮಾನ್ಯಗಳಿಗೆ ಹಣ ಸಹಾಯ ಮಾಡಬಹುದೆಂಬ ಅಂಶ ಇದೆ? ಇದು ಸಂವಿಧಾನಕ್ಕೆ ವಿರೋಧವಾದ ಕೆಲಸವಲ್ಲವೆ? ಹೀಗಿದ್ದಾಗ್ಯೂ ಕಾಂಗ್ರೆಸ್ ಪಕ್ಷದ ನಾಯಕರು ವಿರೋಧ ಪಕ್ಷದ ಸ್ಥಾನದಲ್ಲಿದ್ದರೂ ಇದರ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಲಿಲ್ಲ, ಈ ಪಕ್ಷದವರು ಬರೀ ಆಡಳಿತ ನಡೆಸಲಿಕ್ಕೆ ಮಾತ್ರ ಇರುವಂತಹವರು; ವಿರೋಧ ಪಕ್ಷ ಪಾತ್ರ ನಮ್ಮದಲ್ಲವೆಂಬಂತೆ ನಡೆದುಕೊಂಡು ಜನರ ನಂಬಿಕೆಯನ್ನು ಕಳೆದುಕೊಂಡರು. ಇದೆಲ್ಲದರ ಪರಿಣಾಮವೇ ಇಂದು ಒಂದು ಕೋಮುವಾದಿ ಪಕ್ಷ ಅಧಿಕಾರಕ್ಕೆ ಬರುವಂತಾಯಿತು.

ಈ ಮೇಲೆ ಹೇಳಿದ ಎಲ್ಲಾ ವಿಚಾರಗಳ ಪ್ರವಾಹದ ಸುಳಿಯಲ್ಲಿ ಸಿಕ್ಕಿ ನಮ್ಮ ಮನಸ್ಸು ಚಿಂತಾಕ್ರಾಂತವಾಗಿದ್ದಾಗ ಕನಿಷ್ಠ ತಮ್ಮ ವಾರ ಪತ್ರಿಕೆಯಲ್ಲಿ 'ಕಂಡಹಾಗೆ' ಕಾಲಂನಲ್ಲಿ ಪ್ರಕಟಗೊಂಡ 'ಬರಲಿರುವ ಕರಾಳ ದಿನಗಳು' ಎಂಬ ಬರಹ ನನಗೆ ಬಹಳ ನೆಮ್ಮದಿಯನ್ನು ಕೊಟ್ಟಿತು. ನನ್ನಂತೆಯೇ ಯೋಚನೆ ಮಾಡುವವರು ಅದರಲ್ಲೂ ಗೌರಿ ಮೇಡಂ ಅಂತಹವರೇ ಇದ್ದಾರಲ್ಲಾ ಎಂಬ ಒಂದೇ ಒಂದು ವಿಷಯ ನನಗೆ ಎಷ್ಟೋ ನೆಮ್ಮದಿಯನ್ನು ತಂದಿತು. ಇಂತಹ ಸನ್ನಿವೇಶದಲ್ಲೂ ತಾವು ಮುನ್ನುಗ್ಗುವ ಛಲವನ್ನು ಈ ಬರಹದಲ್ಲಿ ಪ್ರಕಟಿಸಿರುವಿರಿ. ನೀವು ತಂದೆಗೆ ತಕ್ಕ ಮಗಳೇ ಸೈ. ನಿಮಗೆ ಧನ್ಯವಾದಗಳು. ನಿಮ್ಮ ಈ ಪವಿತ್ರ ಕೈಂಕರ್ಯಕ್ಕೆ ಸದಾ ನಮ್ಮ ಬೆಂಬಲ ತಮಗಿರುತ್ತದೆ.

-ಎಸ್‌ಕೆ, ಬೆಂಗಳೂರು

"ಇದು ಬೇಸರದ ದಿನಗಳು. ದೂರದಲ್ಲೆಲ್ಲೋ ತನ್ನ ಕುಕೃತ್ಯಗಳಿಂದ ನಮ್ಮನ್ನು ಬೆಚ್ಚಿಬೀಳಿಸುತ್ತಿದ್ದ 'ಬ್ರಹ್ಮರಾಕ್ಷಸ' ಈ ದಿನ ನಮ್ಮ ಮನೆಯಂಗಳದಲ್ಲಿ ಬಂದು ಕುಳಿತುಬಿಟ್ಟಿದ್ದಾನೆ.

ಇದು ನಮ್ಮ ಇತರ ಎಲ್ಲ ರಾಜಕೀಯ ಪಕ್ಷಗಳ ನಿರ್ಲಕ್ಷ್ಯತೆ, ಬೇಜವಾಬ್ದಾರಿತನ ಮತ್ತು ಗುಂಪುಗಾರಿಕೆಯ ಫಲವಾಗಿ ಜನಸಾಮಾನ್ಯರ ಅನಿವಾರ್ಯ ಮತ್ತು ಅನಪೇಕ್ಷಿತ ಆಯ್ಕೆಯಾಗಿ ಹೋಗಿದೆ.

ತನ್ನ ಕೋಮು ದಳ್ಳುರಿಯ ಜೊತೆಗೆ ಜಾತೀಯತೆ ಎಂಬ ದಾವಾನಿಲವನ್ನು ವ್ಯವಸ್ಥಿತವಾಗಿ ಹರಡುತ್ತ ಅಧಿಕಾರ ಗದ್ದುಗೆಯನ್ನು ಗುರಿ ಮಾಡಿಕೊಂಡು ಬಿಜೆಪಿಗಳು ದಾಪುಗಾಲಿಡುತ್ತಿದ್ದರೆ, ಇದರಿಂದ ಸೃಷ್ಟಿಯಾಗಬಹುದಾದ ಭೀಕರ ವಾತಾವರಣದ ಬಗ್ಗೆ ಜನರಿಗೆ ಸರಿಯಾಗಿ ಮನದಟ್ಟು ಮಾಡಬೇಕಾದ ರಾಜಕೀಯ ಪಕ್ಷಗಳು, ಪ್ರಗತಿಪರರು, ಜಾತ್ಯತೀತರು ಸ್ವಪ್ರತಿಷ್ಠೆಯಿಂದ ಹರಿದು ಹಂಚಿಹೋಗಿ ತಮ್ಮ ಪ್ರಚ್ಛನ್ನ ಶಕ್ತಿಯನ್ನು ಸೋಲಿಸಿಬಿಟ್ಟರು.



ಜಾತಿ, ದೇವರು, ಧರ್ಮ ಎಂಬ ಅಮಲಿನ ಪದಾರ್ಥಗಳು ತಲುಪುವಷ್ಟು ವೇಗವಾಗಿ, ಸರಾಗವಾಗಿ ಪ್ರೀತಿ, ಸಹಬಾಳ್ವೆ, ಸಾಮರಸ್ಯದಂಥ ಕೋಮಲ ವಿಷಯಗಳು ತಲುಪುವುದು ಕಷ್ಟ. ಅಮಲಿನ ಪದಾರ್ಥಗಳಿಗೆ ಸಾಮೂಹಿಕ ಸನ್ನಿಯ ವೇಗವರ್ಧಕ ಗುಣವಿದ್ದರೆ, ಕೋಮಲ ವಿಷಯಗಳು ಮನುಷ್ಯನ ಅಂತರಾಳವನ್ನು ಸ್ಪರ್ಶಿಸಿ ಸಮಷ್ಟಿ ಪ್ರಜ್ಞೆಯನ್ನು ಜಾಗೃತಗೊಳಿಸಬೇಕಾಗುತ್ತದೆ. ಇದನ್ನು ಮಾಡುವುದು ಸಮಾಜದ ಬಗ್ಗೆ ಕಾಳಜಿಯಿರುವ ಜವಾಬ್ದಾರಿಯುತ ಜನರ ಕರ್ತವ್ಯವಾಗಿದೆ.

ಇದೇನೂ ಅನಿರೀಕ್ಷಿತ ಫಲಿತಾಂಶವಲ್ಲ, ಕಾಂಗ್ರೆಸ್‌ಗಳು ದಾಯಾದಿ ಮತ್ಸರದಿಂದ ಸ್ವಾರ್ಥಕ್ಕಾಗಿ ಶೀತಲ ಸಮರ ಮಾಡುತ್ತಿದ್ದರೆ, ಜೆಡಿಎಸ್ ಸ್ವಕುಟುಂಬ, ಸ್ವಹಿತ ಅಭಿವೃದ್ಧಿಗಾಗಿ ತನ್ನ ಢೋಂಗಿ ಜಾತ್ಯತೀತವಾದವನ್ನು ಬಯಲುಗೊಳಿಸಿ ತನ್ನ ನಂಬಿದವರ ಬೆನ್ನಿಗೆ ಚೂರಿ ಹಾಕಿ ಫಾಸಿಗೊಳಿಸುತ್ತಿದ್ದರೆ, ಹಿಂದುಳಿದವರ, ದಮನಿತರ ಪರ ಎಂಬ ಭ್ರಮಾಲೋಕ ಸೃಷ್ಟಿಸಿ ತನ್ನ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಬಿಎಸ್‌ಪಿ ಎಂಬ ಆನೆ, ಇವುಗಳ ವರ್ತನೆ ಗಮನಿಸುತ್ತಿದ್ದರೆ ಇಲ್ಲಿ ಮುಂದೆ ಬಿಜೆಪಿ ಎಂಬ ದಯ್ಯ ಆಕಸ್ಮಾತ್ ವಕ್ಕರಿಸಿ ಬಿಡುವ ಎಲ್ಲ ಸೂಚನೆಗಳು ಕಾಣುತ್ತಿದ್ದವು.

ಚುನಾವಣಾ ಫಲಿತಾಂಶ ಹೊರಬೀಳುತ್ತ ಹೋದಂತೆ ನಿಮ್ಮಂತೆ ನನಗೂ ಆತಂಕ, ಬೇಸರವಾಗುತ್ತಿತ್ತು, ನಂತರ ಒಟ್ಟಾರೆ ಶೇಕಡವಾರು ಜನಬೆಂಬಲ ನೋಡಿ ಸಮಾಧಾನ ಮಾಡಿಕೊಂಡು ನಮ್ಮ ಮುಂದಿನ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಯೋಚಿಸತೊಡಗಿ ನನ್ನ ಕೆಲವು ಗೆಳೆಯರೊಂದಿಗೆ ಈ ಬಗ್ಗೆ ಮಾತನಾಡಿ ಹಗುರಾದೆ.

ನಮ್ಮ ತುರುವೇಕೆರೆಯ ಶಾಸಕ, ಚಿತ್ರನಟ ಜಗ್ಗೇಶ್ ಬಗ್ಗೆ ಬರೆದ '25 ವರ್ಷದ ಜಗ್ಗೇಶ್ ಜಗ್ಗಾಟ' ಓದಿ ಒಂದು ಘಟನೆ ನೆನಪಿಗೆ ಬಂತು.

ಮೇ 10 ರ ಚುನಾವಣೆಯ ದಿನ ಸಂಜೆ ಐದರ ಹೊತ್ತಿಗೆ ತನ್ನ ಕ್ಷೇತ್ರದ ಮತಗಟ್ಟೆಯೊಂದಕ್ಕೆ ಪತ್ನಿ ಪರಿಮಳಾರೊಂದಿಗೆ ಬಂದ ಕಾಂಗ್ರೆಸ್ ಅಭ್ಯರ್ಥಿ ಜಗ್ಗೇಶ್ ಧೂಳು, ಬಿಸಿಲಿನಲ್ಲಿ ಚುನಾವಣಾ ಪ್ರಚಾರಕ್ಕಾಗಿ ಊರೂರು ತಿರುಗಿ ಸುಟ್ಟ ಬದನೆಕಾಯಿಯಂತೆ ಗುರುತು ಸಿಗಲಾರದಷ್ಟು ವಿಕಾರವಾಗಿಬಿಟ್ಟಿದ್ದರು. ಕಾರಿನಿಂದ ಇಳಿದು ತನ್ನ ಅಭಿಮಾನಿಗಳನ್ನು ನೋಡಿ ತನ್ನ ಬಾತುಕೊಂಡ ಮಂಡಿ, ಬಿರುಕು ಬಿಟ್ಟ ಅಂಗಾಲುಗಳನ್ನು ತೋರುತ್ತ ಸ್ವಗತವೆಂಬಂತೆ 'ನನ್ನ ಇಪ್ಪತ್ತೈದು ವರ್ಷಗಳ ವೃತ್ತಿ ಜೀವನದಲ್ಲಿ ಈ ರೀತಿಯ ಕಷ್ಟಗಳನ್ನು ಅನುಭವಿಸಿರಲಿಲ್ಲ' ಎಂದು ಕುಂಟುತ್ತ ಮುಂದೆ ನಡೆಯತೊಡಗಿದರು. ಯಥಾಪ್ರಕಾರ ಅವರ ಅಭಿಮಾನಿ ಹೆಣ್ಣುಮಕ್ಕಳ ಗುಂಪು ನೋಡಿ ಕೈಮುಗಿದು 'ನಾನು ಹೆಣ್ಣುಮಕ್ಕಳಿಗೆ ಗೌರವ ಕೊಡುತ್ತೇನೆ. ಹೋದಲ್ಲೆಲ್ಲ ಹೆಣ್ಣುಮಕ್ಕಳು ಧೈರ್ಯ ತುಂಬಿದ್ದಾರೆ. ನೀವು ನನ್ನ ಕೈಬಿಟ್ಟಿಲ್ಲ, ಎದೆ ತುಂಬ ನೋಯುತ್ತಿದೆ. ಟೈಫಾಯಿಡ್ ಬೇರೆ. ವೊಕಾರ್ಟ್‌ದಲ್ಲಿ ಟ್ರೀಟ್‌ಮೆಂಟ್‌ಗೆ ಹೋಗುತ್ತಿದ್ದೇನೆ' ಎಂದು ಕಣ್ತುಂಬಿಕೊಂಡು ಹಿಂದಿರುಗಿ ಬಂದು ಕಾರಿನಲ್ಲಿ ಪತ್ನಿ ಪಕ್ಕ ಕೂತು ಪತ್ನಿಯನ್ನೇ ದಿಟ್ಟಿಸತೊಡಗಿದರು.

ಈ ದೃಶ್ಯ ನೋಡಿ ಚಿತ್ರರಂಗದಲ್ಲಿ ಅಹಂಕಾರಕ್ಕೆ, ಹುಂಬತನಕ್ಕೆ, ಚಿಲ್ಲರೆ ಮಾತುಗಳಿಗೆ ಹೆಸರು ವಾಸಿಯಾಗಿದ್ದ ವ್ಯಕ್ತಿ ಇದೇನಾ? ಎನಿಸುವಷ್ಟು ಆಶ್ಚರ್ಯವಾಯಿತು.

ತನ್ನ ತಾರಾ ವರ್ಚಸ್ಸಿನಿಂದ ಗೆದ್ದುಬಿಡುತ್ತೇನೆ ಎನ್ನುವ ಅಹಂಕಾರದಲ್ಲಿದ್ದ ಜಗ್ಗೇಶ್‌ಗೆ ರಾಜಕೀಯ ಷಡ್ಯಂತ್ರಗಳು, ಜನರ ನಂಬಿಕೆ, ಪ್ರೀತಿ, ವಿಶ್ವಾಸಗಳಿಸಲು ಇರುವ ಕಷ್ಟ ಎಲ್ಲಕ್ಕಿಂತ ಹೆಚ್ಚಾಗಿ ಚುನಾವಣೆಯಲ್ಲಿ ಹರಿದ ಹೆಂಡ, ಹಣದ ಹೊಳೆ ನೋಡಿ ಆತಂಕಗೊಂಡಿದ್ದರು, ಜರ್ಜರಿತರಾಗಿದ್ದರು. ಎಲ್ಲವನ್ನು ಮೀರಿ ತುರುವೇಕೆರೆ ಜನ ಜಗ್ಗೇಶ್ ಮಾತುಗಳಲ್ಲಿ ನಂಬಿಕೆ ಇಟ್ಟು ತಮ್ಮ ಶಾಸಕನಾಗಿ ಆರಿಸಿದರು.

ಜಗ್ಗೇಶ್ ತನ್ನ ಪೂರ್ವಾಶ್ರಮದ ಮಂಗಚೇಷ್ಟೆಗಳನ್ನು ಬದಿಗಿಟ್ಟು ನಟನೆಯಲ್ಲಿ ತನ್ನ ಪ್ರತಿಭೆಯನ್ನು ಸಾಬೀತುಪಡಿಸಿದಂತೆ ರಾಜಕೀಯದಲ್ಲಿ ತನ್ನ ಪ್ರಬುದ್ಧತೆಯನ್ನು ತೋರಿ ತಮ್ಮ ಪ್ರತಿನಿಧಿಯಾಗಿ ಆಯ್ಕೆ ಮಾಡಿದ ಜನರ ನಂಬಿಕೆಯನ್ನು ಹುಸಿಯಾಗಿಸದಿರುವಂತೆ ಎಚ್ಚರ ವಹಿಸಬೇಕಿದೆ. ಏಕೆಂದರೆ ಜನರ ಪ್ರೀತಿ, ನಂಬಿಕೆ ಗಳಿಸುವುದು ಎಷ್ಟು ಕಷ್ಟದ ಕೆಲಸ ಎಂದು ಜಗ್ಗೇಶ್‌ಗೆ ಅರ್ಥವಾಗಿದೆ.

-ಕೆ.ಎನ್. ದೀಪಕ್, ಕಲ್ಕೆರೆ

ಗೆದ್ದಿದ್ದು ಹಣ, ಸೋತಿದ್ದು ಜನ

ಅಂತೂ ಇಂತೂ ಚುನಾವಣೆ ಎಂಬ ನಾಟಕಕ್ಕೆ ತೆರೆಬಿದ್ದಾಗಿದೆ. ಯಾರು ಎಷ್ಟೇ ಓಟು ಪಡೆಯಲಿ, ಸೀಟು ಪಡೆಯಲಿ, ಯಾವ ಪಕ್ಷವಾದರೂ ಅಧಿಕಾರಕ್ಕೆ ಬರಲಿ ಬಿಡಲಿ, ಈ ಸಲ ಗೆದ್ದಿರುವುದು ಮಾತ್ರ ರಿಯಲ್ ಎಸ್ಟೇಟ್ ಮತ್ತು ಗಣಿ ಹಣ; ಸೋತಿರುವುದು ಕರ್ನಾಟಕದ ಜನ ಎನ್ನುವುದು ನಿಚ್ಚಳವಾಗಿದೆ. ಹಿಂದೆಂದಿಗಿಂತಲೂ ಹೆಚ್ಚಾಗಿ ಈ ಬಾರಿ ಚುನಾವಣಾ ಆಯೋಗವು ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತಂದಿತ್ತು, ನಿಜ. ಆದರೆ ರಂಗೋಲಿಯ ಕೆಳಗೇ ನುಸುಳುವುದನ್ನು ಕರಗತ ಮಾಡಿಕೊಂಡಿರುವ ಮಂದಿ ಯಾವುದಕ್ಕೂ ಲೆಕ್ಕಿಸದೇ ದುಡ್ಡು ಸೀರೆ, ಹೆಂಡ ಎಲ್ಲವನ್ನೂ ಹಂಚಿದ್ದಾರೆ. ಹಾಗಾಗಿಯೇ ಈ ಚುನಾವಣಾ ಫಲಿತಾಂಶವನ್ನು ಜನಾದೇಶ ಎಂದು ಕರೆಯಲು ಕಷ್ಟ.

ಚುನಾವಣೆ ಎಂಬ ಪ್ರಜಾಪ್ರಭುತ್ವದ ಸಾಧನ ಇಂದು ಪ್ರಜಾಪ್ರಭುತ್ವವನ್ನೇ ನಾಶ ಮಾಡಲು ಬಳಕೆಯಾಗುತ್ತಿರುವುದು ನಮ್ಮ ಮುಂದಿನ ದುರಂತ ಸತ್ಯವಾಗಿದೆ. ಇದೀಗ ರಾಜ್ಯದಲ್ಲಿ ಬಿಜೆಪಿ ಗದ್ದುಗೆಯನ್ನು ಕೆಲ ಕಸರತ್ತುಗಳನ್ನು ನಡೆಸಿ ಹಿಡಿದುಕೊಂಡಿದೆ. ತನ್ಮೂಲಕ ಕರಾಳ ಅಧ್ಯಾಯವೊಂದು ಪ್ರಾರಂಭವಾಗಿದೆ. ಇದಕ್ಕಿರುವ ಕಾರಣವೆಂದರೆ ಬಿಜೆಪಿಯು ಕೋಮುವಾದಿ ಪಕ್ಷವೆಂಬುದು ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚಾಗಿ ಅದು ಬೇರೆಲ್ಲ ಪಕ್ಷಗಳಿಗಿಂತಲೂ ಹೆಚ್ಚಾಗಿ ನಾಡಿನ ಎಲ್ಲಾ ಸಂಪತ್ತನ್ನು ಬಕಾಸುರ ಬಂಡವಾಳಿಗರ ಕೈಗೆ ಒಪ್ಪಿಸುತ್ತದೆ ಎಂದು. ಇದರ ಸ್ಯಾಂಪಲನ್ನು ನಾವು ಕಳೆದ 20 ತಿಂಗಳ ಅವಧಿಯಲ್ಲೇ ನೋಡಿದ್ದೇವಲ್ಲವೆ? ಮತ್ತು ಬಿಜೆಪಿಯು ಗುಜರಾತ್ ಮಾದರಿ ಎಂದು ಹೇಳುತ್ತಿರುವುದರ ಹೂರಣ ಇದೇ. ಇಂದು ನರೇಂದ್ರ ಮೋದಿಯ ಗುಜರಾತ್ ವಿದೇಶಿ ಬಂಡವಾಳಿಗರಿಗೆ, ಬಿರ್ಲಾ, ಅಂಬಾನಿಗಳಿಗೆ ನೆಚ್ಚಿನ ರಾಜ್ಯವಾಗಿದೆ. ರೈತರ, ಕಾರ್ಮಿಕರ, ದಲಿತರ ಸಮಾಧಿಗಳ ಮೇಲೆ ಎಸ್‌ಇಝೆಡ್‌ಗಳು ತಲೆ ಎತ್ತಿವೆ. ಹಿಂದೂ-ಮುಸ್ಲಿಂ ಎಂದು ಇಬ್ಭಾಗವಾಗಿರುವ ಮನಸ್ಸುಗಳ ನಡುವೆ ಐಕ್ಯತೆಯ ಹೋರಾಟಗಳಿಗೂ ಜಾಗವಿಲ್ಲದಾಗಿದೆ. ಸಾಕ್ಷಾತ್ ಇಂತಹುದೇ ಕರ್ನಾಟಕವನ್ನು ಸೃಷ್ಟಿಸುವುದು ಬಿಜೆಪಿ ಮತ್ತು ಸಂಘಪರಿವಾರದ ಉದ್ದೇಶವಾಗಿದೆ. ಮತ್ತವರು ಈ ನಿಟ್ಟಿನಲ್ಲಿ ಈಗಲೇ ಕಾರ್ಯಪ್ರವೃತ್ತರಾಗಿದ್ದಾರೆ.

ಒಂದು ಜನಪರ ಕನಾಟಕವನ್ನು ಬಯಸುವ ಎಲ್ಲರಿಗೂ ಇಂದು ಅತ್ಯಂತ ನಿರ್ಣಾಯಕ ಸಂದರ್ಭ ಬಂದೊದಗಿದೆ. ಇಂತಹ ಚಾರಿತ್ರಿಕ ಪರಿಸ್ಥಿತಿಯು ಕೇಳುವುದಿಷ್ಟೇ: ಈ ಹಿಂದೆ ಪ್ರತಿಗಾಮಿಗಳ, ಫ್ಯಾಸಿಸ್ಟರ ಕೈಮೇಲಾಗಿರುವುದಕ್ಕೆ ಪ್ರಗತಿಪರರ ಹಾಗೂ ಜಾತ್ಯತೀತ ಶಕ್ತಿಗಳ ಅಸಮರ್ಥತೆಯೇ ಕಾರಣವೆಂಬುದನ್ನು ಅವರು ಅರ್ಥಮಾಡಿಕೊಂಡು ಮುಂದಿನ ದಿನಗಳಲ್ಲಿ ಇನ್ನಷ್ಟು ದೃಢತೆಯಿಂದ ಪ್ರಭುತ್ವದ ವಿರುದ್ಧ ಜನಸಂಘರ್ಷವನ್ನು ನಡೆಸುವುದು. ಇಂದು ಫ್ಯಾಸಿಸ್ಟರ ವಿಜಯದಲ್ಲಿ ಸೋ ಕಾಲ್ಡ್ ಜಾತ್ಯತೀತರಾದ ಕಾಂಗ್ರೆಸ್ ಹಾಗೂ ದಳಗಳ ಜನವಿರೋಧಿತನ, ಭ್ರಷ್ಟತೆ, ಜಾತಿ ರಾಜಕಾರಣ ಎಲ್ಲವೂ ಇರುವುದನ್ನು ನಾವು ಮೊದಲು ಅರಿಯಬೇಕಾಗಿದೆ. ದಲಿತರ, ಕಾರ್ಮಿಕ ವರ್ಗದ ಪಕ್ಷಗಳೆಂದುಕೊಂಡವರೂ ಸಹ ಪಕ್ಕಾ ಅವಕಾಶವಾದಿಗಳೇ ಎಂದು ತೋರಿಸಿಕೊಂಡಿದ್ದಾರೆ. ಹೀಗಿರುವಾಗ ಇವರ್‍ಯಾರೂ ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸಬೇಕಿರುವ ಈ ಸಂಘರ್ಷದಲ್ಲಿ ಪ್ರಾಮಾಣಿಕವಾಗಿ ಭಾಗವಹಿಸಲಾರರು ಎಂಬ ಪಾಠವನ್ನೂ ಎದುರಿಗಿಟ್ಟುಕೊಂಡೇ ಮುನ್ನಡೆಯಬೇಕಾಗಿದೆ. ಇದೊಂದು ಸವಾಲಿನ ವಿಷಯ ಹೇಗೋ ಹಾಗೇ ನಿರ್ಧಾರಿತವಾದ ಜನಚಳವಳಿಯೊಂದನ್ನು ನಿರ್ಮಿಸಲು ಸಿಕ್ಕಿರುವ ಅವಕಾಶವೂ ಹೌದು. ಏಕೆಂದರೆ ಮುಂದಿನ ದಿನಗಳು ಸಾಮಾನ್ಯ ಜನತೆಯ ಪಾಲಿಗೆ ನರಕಸದೃಶವಾಗಲಿವೆ. ರೇಶನ್ ಕಾರ್ಡಿನಂತಹ ಸಮಸ್ಯೆಗಳು ಜನರನ್ನು ಹಿಂಡಿಹಿಪ್ಪೆ ಮಾಡಲಿವೆ, ಕೇಸರಿ ಪಡೆಗಳು ಅಮಾಯಕರ ಮೇಲೆ ರುದ್ರನರ್ತನಗೈಯಲಿವೆ. ಮೇಲ್ಜಾತಿ ದುರಭಿಮಾನವೆನ್ನುವುದು ದಲಿತರ, ಕೆಳಜಾತಿಗಳ ಜನರ ಮೇಲೆ ಅಟ್ಟಹಾಸ ನಡೆಸಲಿದೆ. ಹಾಗಾಗಿಯೇ ಬಾಯಿದ್ದೂ ಸುಮ್ಮನೆ ಕೂರದಿರೋಣ.


- ಹರ್ಷಕುಮಾರ್ ಕುಗ್ವೆ ಶಿವಮೊಗ್ಗ




ಯಡ್ಡಿ ದರ್ಬಾರಿನಲ್ಲಿ ತಾರೆಯರ ಕುಣಿತ

ಮೊನ್ನೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಂದರ್ಭದಲ್ಲಿ ನಮ್ಮ ಸಿನಿಮಾದ ಜನರು ಅಲ್ಲೇ ಆಡ್ಡಾಡುತ್ತಿದ್ದರು. ಅದರಲ್ಲಿ ಮುಖ್ಯವಾಗಿ ಕೊಳ್ಳೇಗಾಲದಲ್ಲಿ ಮತದಾರರಿಂದ ತಿರಸ್ಕರಿಸಲ್ಪಟ್ಟ ಮಹೇಂದರ್ ಮತ್ತು ಶ್ರುತಿ ಸೋಲನ್ನು ಮರೆಯುವ ರೀತಿಯಲ್ಲಿ ಮೇಕಪ್ ಮಾಡಿಕೊಂಡು ಸುತ್ತಾಡುತ್ತಿದ್ದರು. ಬೆಳಗ್ಗೆ ಯಡ್ಡಿ ಮನೆಯಲ್ಲಿ ಪೂಜೆ ನಡೆಯುತ್ತಿದ್ದಾಗಲೂ ಈ ಜೋಡಿ ಅಲ್ಲಿಯೂ ಹಾಜರಿತ್ತು. ಅನಂತರ ಪ್ರತಿಜ್ಞಾ ಸ್ವೀಕಾರ ಸಮಾರಂಭದಲ್ಲಿ ಮಟಮಟ ಮಧ್ಯಾಹ್ನದ ರಣರಣ ಬಿಸಿಲಿನಲ್ಲೂ ಈ ತಾರಾ ಜೋಡಿ ವಿಧಾನಸೌಧದ ಮುಂದಿನ ಆಸೀನದಲ್ಲಿ ತಣ್ಣಗೆ ಕುಳಿತಿದ್ದರು. ಕೊನೆಗೆ ಯಡಿಯೂರಪ್ಪನವರು ಪ್ರತಿಜ್ಞೆ ಸ್ವೀಕರಿಸಿ ವಿಧಾನಸೌಧದಲ್ಲಿರುವ ತಮ್ಮ ಕೊಠಡಿಗೆ ತೆರಳಿದಾಗ ಅಲ್ಲಿಯೂ ಇವರಿಬ್ಬರು ಯಡಿಯೂರಪ್ಪರನ್ನು ಹಿಂಬಾಲಿಸಿಕೊಂಡು ಬಂದರು. ಇದೆಲ್ಲ ನೋಡಿದರೆ ಶ್ರುತಿ ಮೇಡಂ ಅವರಿಗೆ ಈ ಸರ್ಕಾರದಲ್ಲಿ ಯಾವುದಾದರೊಂದು ಪೋಸ್ಟು ಸಿಕ್ಕಿದರೂ ಆಶ್ಚರ್ಯವಿಲ್ಲ.

ಇನ್ನೊಂದೆಡೆ ಯಡಿಯೂರಪ್ಪನವರ ಪಟ್ಟದ ಶಿಷ್ಯ ನಿರ್ಮಾಪಕ ವಿಜಯಕುಮಾರ್ ವಿಧಾನಸೌಧದ ಸುತ್ತ ಮುತ್ತ ನೂರಾರು ಕಟೌಟು ಬ್ಯಾನರುಗಳನ್ನು ಹಾಕಿಸಿ ತಮ್ಮ ನಾಯಕನನ್ನು ಸ್ವಾಗತಿಸಿದ್ದರು. ಇವರೂ ಅಷ್ಟೆ, ಬೆಳಗ್ಗಿನ ಪೂಜೆಯಲ್ಲಿ ಯಡ್ಯೂರಪ್ಪ ಕುಟುಂಬದವರಿಗೆ ಸಹಕರಿಸಿದರು.




ಈ ಮಧ್ಯೆ ಪ್ರತಿಜ್ಞಾ ಸ್ವೀಕಾರ ಮುಗಿದನಂತರ ನಿರ್ಮಾಪಕ, ನಿರ್ದೇಶಕ, ನಾಯಕನಟ ಮದನ್ ಮಲ್ಲು ಅದು ಹೇಗೋ ಪೊಲೀಸರಿಂದ ತಪ್ಪಿಸಿಕೊಂಡು ವಿಧಾನಸೌಧದ ಮೆಟ್ಟಿಲೇರಿ ಮುಖ್ಯಮಂತ್ರಿಯ ಹಿಂದೆ ಗನ್ ಮ್ಯಾನ್ ಥರ ನಿಂತು ಫೋಟೋಗ್ರಾಫರ್‌ಗಳಿಗೆ ಫೋಸು ಕೊಡುತ್ತಿದ್ದದ್ದು ತಮಾಷೆಯಾಗಿ ಕಾಣಿಸುತ್ತಿತ್ತು. ವಿಧಾನ ಪರಿಷತ್ ಸದಸ್ಯ ಶ್ರೀನಾಥ್ ಗಂಭೀರವಾಗಿ ಅಲ್ಲಿ ವ್ಯವಸ್ಥೆಯ ಬಗ್ಗೆ ತಲೆ ಕೆಡಿಸಿಕೊಂಡು ಮದುವೆ ಮನೆಯಲ್ಲಿ ಓಡಾಡುವ ಯಜಮಾನನಂತೆ ಕಾಣಿಸುತ್ತಿದ್ದರು. ಇವರ ಪ್ರತಿಸ್ಪರ್ಧಿ ಮುಖ್ಯಮಂತ್ರಿ ಚಂದ್ರು ಮಾತ್ರ ಎಲ್ಲೂ ಕಣ್ಣಿಗೆ ಬೀಳದೇ ನಾಪತ್ತೆಯಾಗಿದ್ದರು.



ಬಹುಶಃ ಟೆನ್ನಿಸ್ ಕೃಷ್ಣ, ಸಾಯಿಪ್ರಕಾಶ್ ಮೊದಲಾದ ಬಿಜೆಪಿಯ ಬೆಂಬಲಿಗರಿಗೆ ಅಲ್ಲಿ ಜನಜಂಗುಳಿಯನ್ನು ಧಾಟಿ ಒಳಗೆ ಬರಲು ಸಾಧ್ಯವಾಗಿಲ್ಲ ಎಂದು ನಮ್ಮ ಬೇಹುಗಾರರು ತಿಳಿಸಿದ್ದಾರೆ.

ಅಂತೂ ಯಡಿಯೂರಪ್ಪನ ದರ್ಬಾರಿನಲ್ಲಿ ಹಲವಾರು ಸಿನಿಮಾದ ಜನ ವಿಧಾನಸೌಧದ ಕಾರಿಡಾರಿನಲ್ಲಿ ದಿನನಿತ್ಯ ಕಾಣಿಸಿಕೊಳ್ಳುವ ಸಾಧ್ಯತೆ ದಟ್ಟವಾಗಿ ಕಾಣಿಸುತ್ತಿದೆ.



...ವ|ಬುಟ್ಟಿ|ಸೇರಿದ

...ರಾಮಾಯಣ

ರಾಮಾಯಣಕ್ಕೂ, ಉದಯ ಟೀವಿಗೂ ಅದ್ಯಾಕೋ ಮೊದಲಿನಿಂದಲೂ ಆಗಿಬರುತ್ತಿಲ್ಲ.

ಉದಯ ಟೀವಿ ಆರಂಭವಾದ ದಿನಗಳಲ್ಲಿ ರಮಾನಂದ ಸಾಗರ್ ಅವರ 'ರಾಮಾಯಣ' ಧಾರಾವಾಹಿಯನ್ನು ಕನ್ನಡಕ್ಕೆ ಡಬ್ ಮಾಡಲು ಈ ತಮಿಳು ಮಂದಿ ನಿರ್ಧರಿಸಿದ್ದರು. ಆಗ ಡಾ. ರಾಜ್‌ಕುಮಾರ್ ಸ್ವತಃ ರಾಮನ ಭಕ್ತನಾದರೂ ಆ ಧಾರಾವಾಹಿಯ ಡಬ್ಬಿಂಗ್ ವಿರುದ್ಧ ಬೀದಿಗಿಳಿದು ಪ್ರತಿಭಟಿಸಿದ್ದರು. ಕೊನೆಗೆ ರಾಜ್‌ಗೆ ಗೆಲುವಾಯಿತು. 'ರಾಮಾಯಣ' ಡಬ್ ಮಾಡುವ ಯೋಜನೆ ನಿಂತುಹೋಯಿತು.

ಆದರೆ ಇದನ್ನ ಪ್ರತಿಷ್ಠೆಯ ವಿಷಯವಾಗಿ ಕೈಗೆತ್ತಿಕೊಂಡ ಉದಯ ಟೀವಿಯವರು 'ರಾಮಾಯಣ' ಧಾರಾವಾಹಿಯನ್ನು ವೀಕ್ಷಕರಿಗೆ ತೋರಿಸಲೇಬೇಕೆಂದು ಹಣ ತೊಟ್ಟು ಹೊಸ ಧಾರಾವಾಹಿಯನ್ನು ಆರಂಭಿಸಿದರು. ಆದರೆ ಅದು ಕೂಡ ಟೇಕ್ ಆಫ್ ಆಗುವ ಮೊದಲೇ ನಿಂತುಹೋಯಿತು.

ಆದರೂ ಉದಯ ಟೀವಿಯ ಸೆಲ್ವಂ ಅವರಿಗೆ ರಾಮನ ಮೇಲಿನ ಪ್ರೀತಿ ಕಡಿಮೆಯಾಗಲೇ ಇಲ್ಲ. ಅಂತಹ ಸಂದರ್ಭದಲ್ಲಿ ಅವರಿಗೆ ಸಾಥ್ ನೀಡಿದವರು ತಮಿಳುನಾಡಿನ ಚೆನ್ನೈನಲ್ಲಿ ನೆಲೆಸಿದ್ದ ಕನ್ನಡಿಗ ಆರ್.ಎನ್. ಜಯಗೋಪಾಲ್. ಆರ್.ಎನ್.ಜೆ ನೇತೃತ್ವದಲ್ಲಿ ಮತ್ತೆ 'ರಾಮಾಯಣ' ಶುರುವಾಯಿತು. ಸುಮಾರು ನೂರಕ್ಕೂ ಹೆಚ್ಚು ಕಂತುಗಳ ಚಿತ್ರೀಕರಣವೂ ಮುಗಿದಿತ್ತು. ಅಷ್ಟೊತ್ತಿಗೆ ತೀವ್ರ ಅನಾರೋಗ್ಯಕ್ಕೆ ಈಡಾದ ಆರ್.ಎನ್.ಜೆ ಈ ಲೋಕವನ್ನೇ ಬಿಟ್ಟು ಹೋದರು. ಅದನ್ನು ಮುಂದುವರಿಸಲಾಗುವುದಿಲ್ಲ ಎಂದು ಆರ್.ಎನ್.ಜೆಯವರ ಸಹೋದರರು ಹೇಳಿದ್ದಾರೆ. ಅಂದರೆ ಆರ್.ಎನ್.ಜೆಯವರ ನಿರ್ಗಮನದಿಂದ 'ರಾಮಾಯಣ'ಕ್ಕೂ 'ಸಡನ್ ಡೆತ್' ಆಯಿತು. ಈಗ ಈ ರಾಮಾಯಣ ಧಾರಾವಾಹಿಯನ್ನು ಪ್ರಸಾರ ಮಾಡದಿರಲು ಉದಯ ಟೀವಿಯವರು ನಿರ್ಧರಿಸಿದ್ದಾರೆ.

ಅಲ್ಲಿಗೆ ಸುಮಾರು ನೂರು ಕಂತುಗಳಷ್ಟು ಚಿತ್ರೀಕರಣಗೊಂಡಿದ್ದ 'ರಾಮಾಯಣ' ಕಸದುಬುಟ್ಟಿ ಸೇರಿದೆ. ಅದರದ್ದೇ ಒಂದು ರಾಮಾಯಣ ಆಗಿದೆ!

...ಸಾಧಾರಣವಾಗಿ ಕಲಾವಿದರು ನಿಧನ ಹೊಂದಿದಾಗ ಅವರ ಆರ್ಥಿಕ ಪರಿಸ್ಥಿತಿ ನೋಡಿ ಮರುಕ ಹುಟ್ಟುವುದೇ ಹೆಚ್ಚು. ಆದರೆ ಮೊನ್ನೆ ನಿಧನ ಹೊಂದಿದ ...ದರಚನೆಕಾರ ಆರ್.ಎನ್. ಜಯಗೋಪಾಲ್ ಅದಕ್ಕೊಂದು ಅಪವಾದ. ಅವರು ಸಾಯುವ ಕೆಲವೇ ಕೆಲವು ತಿಂಗಳ ಹಿಂದೆ ಮದ್ರಾಸಿನಲ್ಲಿ ಅವರು ಸ್ಥಾಪಿಸಿದ್ದ ಕನ್ನಡ ...ಲೆಯನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಲ್ಲಿ 'ರಾಮಾಯಣ' ಧಾರಾವಾಹಿಯನ್ನು ಕೈಗೆತ್ತಿಕೊಂಡಿದ್ದರು.

...ಆ ಮಾರಾಟದಿಂದ ಅವರಿಗೆ ಸಿಕ್ಕಿದ ಹಣ ಎಷ್ಟು ಗೊತ್ತೆ? ಕೇವಲ ಎಂಭತ್ತು ಲಕ್ಷ ರೂಪಾಯಿಗಳು. ಈ ಎಂಭತ್ತರಲ್ಲಿ ಅರವತ್ತು ಲಕ್ಷ ಈಗಾಗಲೇ 'ರಾಮಾಯಣ'ಕ್ಕಾಗಿ ...ದರು. 'ರಾಮಾಯಣ'ದ ಆವರಿಗೆ ಮೇಲೆ ವಿಪರೀತ ವ್ಯಾಮೋಹ ಇದ್ದಿದ್ದರಿಂದಲೇ ಇವರು ಶಾಲೆ ಮಾರಿ ಈ ಸಾಹಸಕ್ಕೆ ಕೈಹಾಕಿದ್ದರು. ಮಾತ್ರವಲ್ಲ ರಾತ್ರಿ ಹಗಲು ...ಸ ಮಾಡಿ ದಣಿದಿದ್ದರು. ಅದರಿಂದ ಅವರ ಆರೋಗ್ಯ ಕೆಟ್ಟು ಕೊನೆಗೆ ಹೊರಟೇಹೋದರು.

...ಅವರಿಗೆ ಒಬ್ಬನೇ ಒಬ್ಬ ಮಗ. ಆತ ದೂರದ ಅಮೆರಿಕದಲ್ಲಿದ್ದಾನೆ. ಹೀಗಾಗಿ ಆರ್.ಎನ್.ಜೆ. ನಿಧನಹೊಂದಿದಾಗ ಪ್ರೀತಿಯ ಮಗನೂ ಇರಲಿಲ್ಲ; ಸಂಪಾದಿಸಿದ ...ಯೂ ಇರಲಿಲ್ಲ. ಬರುವಾಗ ಬೆತ್ತಲೆ ಹೋಗುವಾಗ ಕತ್ತಲೆ ಎಂಬುದು ಇದಕ್ಕೇ ತಾನೆ?




ಪೌರಾಣಿಕದಲ್ಲಿ ಪುರಾಣಿಕ್

'ಪ್ರಚಂಡ ರಾವಣ' ಸಿನಿಮಾ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದರೂ, 'ರಾಮಾಯಣ' ಧಾರಾವಾಹಿ ...ರವೇ ಆಗದಿದ್ದರೂ ಇಂತಹ ಪೌರಾಣಿಕ ಚಿತ್ರಗಳ ...ಮೋಹವಂತೂ ಕಡಿಮೆಯಾಗಿಲ್ಲ.

...ದಕ್ಕೆ ಉದಾಹರಣೆ ಎಂಬಂತೆ ಸುವರ್ಣ ಚಾನಲ್‌ನಲ್ಲಿ ...ಲ್ಲೇ 'ಶಿವಲೀಲಾಮೃತ' ಎಂಬ ಮೆಗಾ ಧಾರಾವಾಹಿ ...ಭವಾಗಲಿದೆ. ಇದರ ನಿರ್ದೇಶಕರು ಸುನಿಲ್ ...ಣಿಕ್. ಇವರು ಒಂದು ಕಾಲದಲ್ಲಿ ಜಿ.ವಿ. ಅಯ್ಯರ್ ...ಗಿ ಅವರ ಹಲವಾರು ಪೌರಾಣಿಕ ಚಿತ್ರಗಳ ...ಣದಲ್ಲಿ ಅನುಭವ ಗಳಿಸಿದವರು.

...ಮೆಚ್ಚಬೇಕಾದ ವಿಷಯ ಯಾವುದೆಂದರೆ ಕರ್ನಾಟಕದ ... ಏಳು ಚಾನೆಲ್‌ಗಳಲ್ಲಿ ಬರುವ ಒಟ್ಟು ...ತ್ತೊಂಭತ್ತು ಮೆಗಾ ಸೀರಿಯಲ್‌ಗಳಲ್ಲಿ ಇದೊಂದೇ ...ಣಿಕ ಕಥಾವಸ್ತುವಿರುವ ಧಾರಾವಾಹಿ. ಬಹುತೇಕ ... ಸೀರಿಯಲ್ಲುಗಳ ಕಥಾವಸ್ತು ಫ್ಯಾಮಿಲಿ ಡ್ರಾಮಾ. ...ಗಳ ಮಧ್ಯೆ ಇಂಥ ದೊಡ್ಡ ಸಾಹಸಕ್ಕೆ ಕೈಹಾಕಿರುವ ...ಲ್ ಪುರಾಣಿಕ್ ಮತ್ತು ಸುವರ್ಣ ಚಾನೆಲ್ ಸಿಇಓ ... ಅವರನ್ನು ಮೆಚ್ಚಬೇಕು.

...ಉಳಿದವರು ದಿನಕ್ಕೆ ಎರಡು ಎಪಿಸೋಡ್‌ಗಳನ್ನು ...ತೆಗೆದರೆ, ಇಂತಹ ಪೌರಾಣಿಕ ಕಥಾವಸ್ತುವಿನ ಒಂದು ... ಚಿತ್ರೀಕರಿಸಲು ಕನಿಷ್ಠ ಮೂರು ದಿನಗಳು ...ಗುತ್ತವೆ. ಅಂದರೆ, ಈ ಧಾರಾವಾಹಿ ವೆಚ್ಚ ಮತ್ತು ...ಗೆ ತಗಲುವ ಸಮಯವನ್ನು ನೀವೇ ಅಂದಾಜಿಸಿ. ...ಹ ಒಂದು ಪ್ರಯತ್ನ ಗೆದ್ದರೆ ಬಹುಶಃ ಏಕತಾನತೆಯ ...ಯಲ್ಲುಗಳ ಭರಾಟೆ ಕಡಿಮೆಯಾಗಬಹುದೋ ...?




ಸಪ್ಪೆಯಾದ ಬರ್ತ್‌ಡೇಗಳು

ಕನ್ನಡ ಚಿತ್ರರಂಗದ ಇಬ್ಬರು ಮಹಾನ್ ಸ್ಟಾರ್‌ಗಳು ಮೊನ್ನೆ ನಡೆದ ತಮ್ಮ ಬರ್ತ್‌ಡೇ ಸಂಭ್ರಮದಿಂದಲೇ ಗೈರು ಹಾಜರಾಗಿದ್ದರೆಂದರೆ ನಂಬುತ್ತೀರಾ? ಆದರೆ ಅದು ನಿಜ! ಆ ಬರ್ತ್‌ಡೇ ಬಾಯ್‌ಗಳು ರವಿಚಂದ್ರನ್ ಮತ್ತು ಅಂಬರೀಷ್.

ಶ್ರೀರಂಗಪಟ್ಟಣದ ಚುನಾವಣೆಯಲ್ಲಿ ಸೋತು ಮುಖಭಂಗಕ್ಕೀಡಾದ ರೆಬಲ್‌ಸ್ಟಾರ್ ಅಂಬರೀಷ್ ಸೋಲಿನ ನೋವಿನಿಂದ ಹೊರಬರಲು ತನ್ನ ಫ್ಯಾಮಿಲಿ ಸಮೇತ ಸಿಂಗಾಪೂರಿಗೆ ಪ್ರಯಾಣ ಬೆಳೆಸಿದ್ದಾರೆ. ಇಂತಹ ದೊಡ್ಡ ಮುಖಭಂಗವಾದ ಮೇಲೆ ಹೇಗೆ ತಾನೆ ಅವರು ತಮ್ಮ ಬರ್ತ್‌ಡೇ ಆಚರಿಸಲು ಸಾಧ್ಯ?

ಅಂಬಿ ಕಥೆ ಇದಾದರೆ ಅವರ ಬರ್ತ್‌ಡೇಯ ಮರುದಿನವೇ ತನ್ನ ಹುಟ್ಟುಹಬ್ಬ ಆಚರಿಸುವ ಕ್ರೇಜಿ ಸ್ಟಾರ್ ರವಿಚಂದ್ರನ್ ಅವರದ್ದು ಮತ್ತೊಂದು ಕಥೆ. ಅವರು ಅಂಬಿ ಥರ ಇತ್ತೀಚೆಗೆ ಸೋಲು ಕಂಡಿಲ್ಲ ನಿಜ. ಆದರೆ ತಮ್ಮ ಮಹತ್ವಾಕಾಂಕ್ಷೆಯ 'ಮಂಜಿನ ಹನಿ' ಚಿತ್ರದಿಂದ ಮತ್ತೆ ಲೈಮ್ ಲೈಟಿಗೆ ಬರುವ ಆತ್ಮವಿಶ್ವಾಸದಲ್ಲಿದ್ದಾರೆ. ಯಾಕೆಂದರೆ ಕಳೆದ ಎರಡು ವರ್ಷಗಳಿಂದ ರವಿಚಂದ್ರನ್ ಕೂಡ ಸೋಲಿನ ನೆರಳಿನಲ್ಲೇ ಕಾಲ ಕಳೆಯುತ್ತಿದ್ದಾರೆ. ಹೀಗಾಗಿ ರವಿಚಂದ್ರನ್‌ಗೂ ತಮ್ಮ ಅಭಿಮಾನಿಗಳ ಜೊತೆ ಸಂಭ್ರಮದಿಂದ ಹುಟ್ಟುಹಬ್ಬ ಆಚರಿಸುವ ಮೂಡ್ ಇರಲಿಲ್ಲ. ಆದ್ದರಿಂದ ಕ್ರೇಜಿ ಸ್ಟಾರ್ ತಮ್ಮ ಕುಟುಂಬದವರ ಸಮೇತ ತಿರುಪತಿ ತಿಮ್ಮಪ್ಪನ ಸಾನ್ನಿಧ್ಯದಲ್ಲಿ ಇಡೀ ದಿನವನ್ನು ಕಳೆದರು.



ಅವರಿಬ್ಬರ ಗೈರುಹಾಜರಿಯಲ್ಲಿ ಅವರ ಅಭಿಮಾನಿಗಳು ಅವರ ಮನೆಯ ಮುಂದೆ ನಿಂತು, ವಿಷ್ ಮಾಡಿ, ಕೇಕ್ ಕತ್ತರಿಸಿ ತಮ್ಮ ಸ್ಟಾರ್‌ಗಳ ಹುಟ್ಟುಹಬ್ಬವನ್ನು ತಾವೇ ಆಚರಿಸಿ ಹಿಂದಿರುಗಿದರು.

ಹಾಗೆ ನೋಡಿದರೆ ಇವರಿಬ್ಬರೂ ಕಳೆದ ಅನೇಕ ವರ್ಷಗಳಿಂದ ಅತ್ಯಂತ ಅದ್ದೂರಿಯಾಗಿ ತಮ್ಮ ಹುಟ್ಟುಹಬ್ಬ ಆಚರಿಸುತ್ತಿದ್ದ ಸ್ಟಾರ್‌ಗಳು. ಆದರೆ ಇದೇ ಮೊದಲ ಬಾರಿಗೆ ರೆಬೆಲ್ ಮತ್ತು ಕ್ರೇಜಿ ಬೇರೆ ಬೇರೆ ಕಾರಣಗಳಿಗಾಗಿ ಬರ್ತ್ ಡೇ ಸಂಭ್ರಮದಿಂದ ನಯವಾಗಿ ತಪ್ಪಿಸಿಕೊಂಡಿದ್ದಾರೆ. ಇದಕ್ಕೇ ಹೇಳುವುದು ಗೆಲುವು ಯಾವಾಗಲೂ ಸಿಹಿ, ಸೋಲು ಮಾತ್ರ ಕಹಿಕಹಿ......



...ರ್ವೆಗೆ ...ದು ಪ್ರಶಸ್ತಿ!

'ಖ್ಯಾತ' ನಿರ್ದೇಶಕ ರಮೇಶ್ ಸುರ್ವೆಯವರ ಮೊಟ್ಟ ಮೊದಲ ಚಿತ್ರ 'ಮಂದಾಕಿನಿ'ಗೆ ಕಥೆ, ಚಿತ್ರಕಥೆ, ಸಾಹಿತ್ಯ ಸಂಗೀತ ಮತ್ತು ನಿರ್ದೇಶನಗಳಿಗೆ ಐದು ಅವಾರ್ಡುಗಳು ಸಿಕ್ಕಿವೆ!!

ಇದೇನಪ್ಪ ಸಿನಿಮಾ ಇನ್ನೂ ಬಿಡುಗಡೆಯೇ ಆಗಿಲ್ಲ, ಅಂತಾದ್ದರಲ್ಲಿ ಐದು ಅವಾರ್ಡ್ ಎಲ್ಲಿಂದ ಬಂತು ಎಂದು ಗಾಬರಿ ಪಡುವ ಅಗತ್ಯವಿಲ್ಲ. ಸುರ್ವೆಯವರ ಈ ಮಹಾನ್ ಸಾಧನೆಗೆ ಅವಾರ್ಡುಗಳನ್ನು ಕೊಟ್ಟಿರುವುದು ಮತ್ಯಾರೂ ಅಲ್ಲ, ಮತ್ತೊಬ್ಬ ಪ್ರಚಾರ ಪ್ರಿಯ ನಿರ್ದೇಶಕ ಪ್ರೇಮ್.

ಕಳೆದ ವಾರ ರಮೇಶ್ ಸುರ್ವೆಯವರ ಐವತ್ತನೇ ವರ್ಷದ ಹುಟ್ಟುಹಬ್ಬದಂದು ಅವರಿಗೆ ವಿಶ್ ಮಾಡಲೆಂದು ಪ್ರೇಮ್ ಮತ್ತವರ ಟೀಂ ಬಂದಿತ್ತಂತೆ. ಆ ಸಂದರ್ಭದಲ್ಲಿ ರಮೇಶ್ ಸುರ್ವೆ ತಮ್ಮ ಚಿತ್ರದ ಮೊದಲ ಪ್ರತಿಯನ್ನು ಪ್ರೇಮ್ ಪಟಾಲಂಗೆ ತೋರಿಸಿದ್ದಾರೆ. ಸುರ್ವೆಯವರ ಸಿನಿಮಾ ನೋಡಿ ಸುಮ್ಮನಿರದೆ ಸಿಕ್ಕಾಪಟ್ಟೆ ಎಕ್ಸೈಟ್ ಆದ ಪ್ರೇಮ್ ತಂಡ ಒಂದಲ್ಲ, ಎರಡಲ್ಲ ಬರೋಬ್ಬರಿ ಐದು ಅವಾರ್ಡುಗಳನ್ನು ಸುರ್ವೆ ಬಳಿ ಘೋಷಿಸಿದ್ದಾರೆ.

ಮೊದಲೇ ಮಹತ್ವಾಕಾಂಕ್ಷೆಯಿಂದ ಸಿನಿಮಾ ನಿರ್ದೇಶಿಸಿರುವ ಸುರ್ವೆ ಪ್ರೇಮ್ ತಂಡದ ಈ ಮಾತಿನಿಂದ ಹಿಗ್ಗಿ ಹೀರೇಕಾಯಿಯಂತಾಗಿದ್ದಾರೆ. ಇಷ್ಟೇ ಅಲ್ಲದೆ ಐವತ್ತನ್ನು ಪೂರೈಸಿರುವ ಸುರ್ವೆ ತಮ್ಮ ಬಳಿ ಐವತ್ತು ಸೂಪರ್ ಹಿಟ್ ಆಗುವಂಥ ಕಥೆಗಳಿವೆ ಎಂದೂ ಬಹಿರಂಗವಾಗಿ ಘೋಷಿಸಿದ್ದಾರೆ. ಇದಕ್ಕಾಗಿ ಸುರ್ವೆ ಅಭಿಮಾನಿಗಳು ಅವರಿಗೆ 'ಕಥಾ ಕಣಜ' ಎಂಬ ಬಿರುದನ್ನೂ ನೀಡುತ್ತಿದ್ದಾರಂತೆ. 'ಪ್ರಶಸ್ತಿ ವಿತರಕ' ಸುರ್ವೆಗೇ ಪ್ರಶಸ್ತಿ ನೀಡುತ್ತಿರುವವರು ಅದೆಂಥ ಪುಣ್ಯಾತ್ಮರೋ, ಭಗವಂತನೇ ಬಲ್ಲ!!




ಸೋಲು–ಗೆಲುವು

ಈ ಬಾರಿ ಚಿತ್ರರಂಗದಿಂದ ವಿಧಾನಸೌಧಕ್ಕೆ ಮತದಾರರು ಹೊಸದಾಗಿ ಆಯ್ಕೆಮಾಡಿ ಕಳುಹಿಸಿದ್ದು ಒಬ್ಬನೇ ಒಬ್ಬ ವ್ಯಕ್ತಿಯನ್ನು; ಜಗ್ಗೇಶ್. ಇವರು ಈಗಾಗಲೇ ವಿಧಾನಸೌಧದಲ್ಲಿ ಮೊಕ್ಕಾಂ ಹೂಡಿರುವ ಸಿನಿಮಾದವರೇ ಆದ ಯೋಗೇಶ್ವರ್ ಮತ್ತು ಬಿ.ಸಿ. ಪಾಟೀಲರನ್ನು ಸೇರಲಿದ್ದಾರೆ. ವಿಶೇಷವೆಂದರೆ ಈ ಮೂವರೂ ಕಾಂಗ್ರೆಸ್‌ನವರು.

ಕಳೆದ ಎರಡು ಬಾರಿ ಚುನಾವಣೆಯಲ್ಲಿ ಜಗ್ಗೇಶ್ ಸೋತಿದ್ದರೂ ಶಾಸಕನಾಗಲೇಬೇಕು ಎಂಬ ಹಠವನ್ನು ತೊಟ್ಟಿದ್ದರು. ಕಳೆದ ಎರಡು ವರ್ಷಗಳಿಂದ ಶನಿವಾರ ಮತ್ತು ಭಾನುವಾರ ಯಾವುದೇ ಚಿತ್ರೀಕರಣಕ್ಕೆ ಡೇಟ್ಸ್ ನೀಡದೆ ಆ ದಿನಗಳನ್ನು ತುರುವೇಕೆರೆಯಲ್ಲಿ ಕಳೆಯುತ್ತಿದ್ದರು. ಅಲ್ಲಿ ಮೊಕ್ಕಾಂ ಹೂಡಿ 'ಶಾಸಕ'ನ ಥರ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಅಂದರೆ ತಮ್ಮ ಚುನಾವಣಾ ಪ್ರಚಾರವನ್ನು ಜಗ್ಗೇಶ್ ನಾಲ್ಕು ವರ್ಷಗಳ ಹಿಂದೆಯೇ ಪ್ರಾರಂಭಿಸಿದ್ದರು. ಈ ಕಾರಣದಿಂದ ಅಲ್ಲಿಯ ಮತದಾರರು ಈ ಬಾರಿ ಜಗ್ಗೇಶ್ ಕೈ ಹಿಡಿದು ಆತನನ್ನು ಗೆಲ್ಲಿಸಿದರು.







ಆದರೆ ಈ ಹಿಂದೆಯೇ ಲೋಕಸಭಾ ಸದಸ್ಯರಾಗಿದ್ದರೂ ತಮ್ಮ ಸಮಯವನ್ನೆಲ್ಲ ಬೆಂಗಳೂರಿನಲ್ಲೇ ಕಳೆದ ರೆಬೆಲ್ ಸ್ಟಾರ್ ಅಂಬರೀಷ್‌ರನ್ನು ಶ್ರೀರಂಗಪಟ್ಟಣದ ಜನ ಸೋಲಿಸಿದ್ದಾರೆ. ತನ್ನ ಗೆಲುವಿಗೆ ತನ್ನ ಜನಪ್ರಿಯತೆಯೇ ಸಾಕು ಎಂದು ನಂಬಿದ್ದ ಅಂಬಿಗೆ ಇದರಿಂದ ಶಾಕ್ ಆಗಿದೆ.

ಆರು ತಿಂಗಳ ಮೊದಲೇ ಅಂಬಿ ತಮ್ಮ ಕ್ಷೇತ್ರವನ್ನು ಆರಿಸಿಕೊಂಡು ಸ್ವಲ್ಪ ಕೆಲಸ ಮಾಡಿದ್ದರೂ ಭಾರೀ ಬಹುಮತದಿಂದ ಜಯಗಳಿಸಬಹುದಿತ್ತು. ಆದರೆ ಅದು ಅವರಿಗೆ ಅರ್ಥವಾಗುವ ಹೊತ್ತಿಗೆ ಕಾಲ ಮಿಂಚಿಹೋಗಿತ್ತು.

ಉಳಿದಂತೆ ಉಮಾಶ್ರೀ ತಮ್ಮ ತೇರದಾಳ ಕ್ಷೇತ್ರದ ಮತದಾರರಿಗೆ ಸಂಪೂರ್ಣವಾಗಿ ಹೊರಗಿನವರಂತೆ ಕಂಡರು. ಚಾಗೇಪಲ್ಲಿಯಲ್ಲಿ ಸಾಯಿಕುಮಾರ್ ಎರಡು ವರ್ಷದಿಂದ ನೀಡಿದ ಟೀವಿ, ಸೀರೆ ಯಾವುದೂ ಆತನ ಸಹಾಯಕ್ಕೆ ಬರಲೇ ಇಲ್ಲ. ಕೊಳ್ಳೇಗಾಲದಲ್ಲಿ ಮತ್ತೊಂದಾಗಿ ಎಂತಹ ಪೈಪೋಟಿ ಇತ್ತೆಂದರೆ ಅವರು ಗೆಲ್ಲುವುದಿಲ್ಲ ಎಂಬುದು ಮೊದಲೇ ನಿರ್ಧಾರವಾಗಿತ್ತು. ಸೊರಬದಲ್ಲಿ 'ಬಂ' ಸಹೋದರರ ಗಲಾಟೆಯಲ್ಲಿ ಅವರ ಮನೆ ಹುಡುಗನಂತಿದ್ದ ಹರತಾಳ ಹಾಲಪ್ಪ ಗೆದ್ದು ಅವರಿಬ್ಬರೂ ಮಣ್ಣು ಮುಕ್ಕಿದರು.


ಹೀಗಾಗಿ ಜಗ್ಗೇಶ್ ಒಬ್ಬರೇ ಜಯಭೇರಿ ಬಾರಿಸಿ ವಿಧಾನಸೌಧದ ಮೆಟ್ಟಿಲೇರುತ್ತಿದ್ದಾರೆ. ಇಷ್ಟತ್ತು ವರ್ಷಗಳನ್ನು ಈ ಬಗ್ಗೆ ಜನಮನದಲ್ಲಿ ಯಾವುದೇ ಗುಡ್ ಫಾದರ್ ನೆರವಿಲ್ಲದೇ ಬೆಳೆದ ಜಗ್ಗೇಶ್ ಪಾಲಿಗೆ ಇದು ನಿಜವಾಗಿಯೂ ಜನರು ನೀಡಿದ ದೊಡ್ಡ ಉಡುಗೊರೆ.

R B P LANKESH, Kannada Weekly Price Rs. 12/- 11-6-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.

ಬೋರ್ಡಿಗಿಲ್ಲದ ಪೌರಾಣಿಕ ಚಿತ್ರಗಳು



ಇತ್ತೀಚೆಗೆ ಕನ್ನಡ ಚಿತ್ರರಂಗಕ್ಕೂ ಪೌರಾಣಿಕ ಮತ್ತು ಚಾರಿತ್ರಿಕ ಚಿತ್ರಗಳಿಗೂ ಆಗಿಬರುತ್ತಿಲ್ಲ. ಡಾ. ರಾಜ್ ಅಭಿನಯದ 'ಭಕ್ತ ಪ್ರಹ್ಲಾದ' ಸಿನಿಮಾದ ನಂತರ ಬಿಡುಗಡೆಯಾದ ಯಾವ ಪೌರಾಣಿಕ ಚಿತ್ರವೂ ಯಶಸ್ವಿಯಾಗಿಲ್ಲ. ದಶಕದ ಹಿಂದೆ ಪೌರಾಣಿಕ ಕಥೆ ಮಿಶ್ರಣವಿದ್ದ 'ಮಿ. ಪುಟ್ಸಾಮಿ' ಎಂಬ ಫ್ಯಾಂಟಸಿ ಸಿನಿಮಾ ತೆರೆಕಂಡಿತ್ತು. ಉಮಾಕಾಂತ್ ನಿರ್ದೇಶನದ ಆ ಚಿತ್ರದಲ್ಲಿ ಶಿವರಾಜ್‌ಕುಮಾರ್ ಅಭಿನಯಿಸಿದ್ದರೂ ಚಿತ್ರ ಹೇಳಹೆಸರಿಲ್ಲದಂತೆ ಮುಳುಗಿತ್ತು.



ಕಳೆದ ವರ್ಷವಷ್ಟೇ ಹಿರಿಯ ನಿರ್ದೇಶಕ ಭಾರ್ಗವ ನಿರ್ದೇಶನದಲ್ಲಿ ಬಂದ 'ಗಂಡುಗಲಿ ಕುಮಾರರಾಮ' ಚಿತ್ರವಂತೂ ಇನ್ನಿಲ್ಲದಂತೆ ನೆಲಕಚ್ಚಿತ್ತು. ಪರಿಣಾಮ ನಿರ್ಮಾಪಕ ಕೋದಂಡರಾಮ್ ಅವರಿಗೆ ಏಳುಕೋಟಿ ರೂಪಾಯಿಗಳು ನಷ್ಟವಾಗಿತ್ತು.

ಇದನ್ನೆಲ್ಲಾ ಕಣ್ಣಾರೆ ಕಂಡಿದ್ದರೂ ಸಹ ಧೈರ್ಯ ಮಾಡಿ ಕೆ.ಸಿ.ಎನ್. ಗೌಡ್ರು ಹಳೆಯ 'ಹರಿಶ್ಚಂದ್ರ'ನಿಗೆ ಬಣ್ಣ ಬಳಿದು ಕಳೆದ ತಿಂಗಳಷ್ಟೇ ಚಿತ್ರ ಬಿಡುಗಡೆ ಮಾಡಿದ್ದರು. ಆದರೆ ಈ ಸಿನಿಮಾದಿಂದ 'ನೀರಿನ ಜೊತೆ ಚೊಂಬೂ ಹೋಯಿತು' ಎನ್ನುವಂತೆ ಮಾಡಿದ ಖರ್ಚಿನೊಂದಿಗೆ ಬಿಡುಗಡೆಗೆ ವ್ಯಯಿಸಿದ ಹಣವೂ ಕೊಚ್ಚಿಹೋಯಿತು. ಈಗ ರಾವಣನ ಸರದಿ. 'ಪ್ರಚಂಡ ರಾವಣ'ನ ಕಥೆಯೂ ಇವೆಲ್ಲದಕ್ಕಿಂತ ಹೊರತಾಗಿಲ್ಲ. ಬಹುತೇಕ ಕಂಪನಿ ಡ್ರಾಮಾದ ಜನರೇ ಇರುವ ಈ ಚಿತ್ರ ಒಂದೇ ಒಂದು ವಾರಕ್ಕೆ ಮಣ್ಣು ಮುಕ್ಕಿದೆ.

ಪೌರಾಣಿಕ ಚಿತ್ರಗಳಿಗೆ ಇಲ್ಲಿ ಭವಿಷ್ಯವಿಲ್ಲ ಎಂಬುದನ್ನು ಬಹುಶಃ ಡಾ. ರಾಜ್ ಸ್ವತಃ ಅರಿತಿದ್ದರೋ ಏನೋ? ಆ ಕಾರಣಕ್ಕಾಗಿಯೇ ಅವರು 'ಭಕ್ತ ಅಂಬರೀಷ'ನನ್ನು ನಿರಂತರವಾಗಿ ಮುಂದೂಡುತ್ತಲೇ ಬಂದರು. ಕಡೆಗೂ ಅದು ಸೆಟ್ಟೇರಲೇ ಇಲ್ಲ.

ಇದನ್ನೆಲ್ಲ ಕಂಡ ನಂತರವಾದರೂ ಕನ್ನಡ ಚಿತ್ರರಂಗದವರು ಇನ್ನು ಮುಂದೆ ಪೌರಾಣಿಕ ಸಿನಿಮಾ ಮಾಡಲು ಹೋಗಿ ಹಣ ಕಳೆದುಕೊಳ್ಳದಿರಲಿ.

ಬಡಾಯಿ ಹೊಡೆದ ಭೀಮೂಸ್ ಬಾಬು



ರಾಜೇಂದ್ರಸಿಂಗ್ ಬಾಬು ನಿರ್ದೇಶನದ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರ ಸದ್ಯದಲ್ಲೇ ಬಿಡುಗಡೆಯಾಗಲಿದೆ. ಸಾಧಾರಣವಾಗಿ ತಮ್ಮ ಚಿತ್ರ ಬಿಡುಗಡೆಯಾಗುವ ಸಂದರ್ಭದಲ್ಲಿ ರಾಜೇಂದ್ರಸಿಂಗ್ ಬಾಬು ಮಾತನಾಡುವ ಬೊಂಬೆಯ ತರ ವಟವಟನೆ ಮಾತನಾಡುತ್ತಲೇ ಇರುತ್ತಾರೆ. ಈ ಬಾರಿಯೂ ಹಾಗೆ ಮಾಡಿದ್ದಾರೆ.


ಉದಾಹರಣೆಗೆ ಈ ಚಿತ್ರವನ್ನು ಹಿಂದಿ, ತಮಿಳು ಮತ್ತು ತೆಲುಗು ಭಾಷೆಗಳಿಗೆ ಡಬ್ ಮಾಡಿ ಭಾರತದಾದ್ಯಂತ ಒಂದು ಸಾವಿರ ಕೇಂದ್ರಗಳಲ್ಲಿ ಬಿಡುಗಡೆ ಮಾಡುತ್ತೇನೆ ಎಂದು ಡಂಗೂರ ಬಾರಿಸಿದ್ದಾರೆ. ಅವರ ಮಾತನ್ನು ಪ್ರಶ್ನಿಸದೇ ದಿನಪತ್ರಿಕೆಗಳ ವರದಿಗಾರರು ಅದು ಪ್ರಪಂಚದ ಎಂಟನೇ ಅದ್ಭುತ ಎಂಬಂತೆ ವರದಿ ಮಾಡಿದ್ದಾರೆ.

ಚಿತ್ರವೊಂದನ್ನು ಒಂದು ಸಾವಿರ ಕೇಂದ್ರಗಳಲ್ಲಿ ಬಿಡುಗಡೆ ಮಾಡುವುದೆಂದರೆ ತಮಾಷೆಯ ವಿಷಯವಲ್ಲ. ಈಗಿನ ಸಂದರ್ಭದಲ್ಲಿ ದೊಡ್ಡ ದೊಡ್ಡ ನಿರ್ಮಾಪಕರಾದ ಸುಭಾಷ್ ಘಾಯ್, ಯಶ್ ಚೋಪ್ರಾ ಮೊದಲಾದವರಿಗೇ ಅದು ಅಸಾಧ್ಯ. ಹೀಗಿರುವಾಗ ಬಾಬು ಅದನ್ನು ಹೇಗೆ ಸಾಧಿಸಿಯಾರು? ಹೋಗಲಿ, ಘಾಯ್ ಮತ್ತು ಚೋಪ್ರಾದಂತಹ ಬಲಿಷ್ಠರಿಗೆ ಇಲ್ಲದ ಶಕ್ತಿ 'ಭೀಮೂಸ್...' ನಿರ್ಮಾಪಕ ಮೋಹನ್‌ಗೆ ಇದೆಯಾ?

ಅದೆಲ್ಲ ಬದಿಗಿರಲಿ, ಕನ್ನಡದಲ್ಲೇ ಮಾರುಕಟ್ಟೆ ಇಲ್ಲದೆ ಕೂತಿರುವ ಆ ಚಿತ್ರದ ನಾಯಕ ಉಪೇಂದ್ರರಿಗಾದರೂ ಈಗ ಆಲ್ ಇಂಡಿಯಾ ಮಾರ್ಕೆಟ್ ಇದೆಯಾ? ಇಂತಹ ನೂರಾರು ಪ್ರಶ್ನೆಗಳಿಗೆ ಬಾಬು ಬಳಿ ಉತ್ತರಗಳಿಲ್ಲ. ಆದರೆ ಇದ್ಯಾವುದರ ಬಗ್ಗೆ ತಲೆ ಕೆಡಿಸಿಕೊಳ್ಳದ ನಮ್ಮ ವರದಿಗಾರರು ಬಾಬು ಹೇಳಿದ್ದನ್ನೇ ಬರೆದು ಜನರಿಗೆ ಪುಕ್ಕಟೆ ಮನರಂಜನೆ ನೀಡಿದ್ದಾರೆ.



ಅಂದವಿಲ್ಲದ ಇಂದ್ರ



ದರ್ಶನ್ ನಟಿಸಿರುವ 'ಇಂದ್ರ' ಚಿತ್ರ ಬಿಡುಗಡೆಯಾಗಿದೆ. ಇದು ಇತ್ತೀಚೆಗೆ ಬಂದ ಅವರ 'ಗಜ' ಚಿತ್ರಕ್ಕಿಂತ ವಿಭಿನ್ನವಾಗೇನೂ ಇಲ್ಲ. ಆ ಚಿತ್ರದಂತೇ ಈ ಚಿತ್ರದಲ್ಲೂ ಬರೀ ಮಸಾಲೆ ಅಂಶಗಳೇ ತುಂಬಿವೆ. ಜೊತೆಗೆ ಒಂದಷ್ಟು ರಮಣೀಯವಾದ ಬ್ಯಾಕ್‌ಡ್ರಾಪ್ ಇರುವ ಹಾಡುಗಳೂ ಇವೆ. ಒಂದೇ ಒಂದು ವ್ಯತ್ಯಾಸವೆಂದರೆ ಇದೇ ಮೊದಲ ಬಾರಿಗೆ ದರ್ಶನ್ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿರುವುದು. ಒಂದು ಪಾತ್ರ ಕನ್ನಡ ಮಾತನಾಡಿದರೆ ಮತ್ತೊಂದು ಪಾತ್ರ ತುಳು ಭಾಷೆಯಲ್ಲಿ ಮಾತನಾಡುತ್ತದೆ. ವಾಸ್ತವವಾಗಿ ಇಲ್ಲಿ ತುಳು ಭಾಷೆಯನ್ನು ಸ್ಪಷ್ಟವಾಗಿ ಉಚ್ಚರಿಸಲು ಸಾಧ್ಯವಾಗಿಲ್ಲದ ಕಾರಣ ಅದು ತಮಾಷೆ ತರ ಕಾಣಿಸುತ್ತದೆ. ಹೀಗಾಗಿ ದರ್ಶನ್ ಅಭಿಮಾನಿಗಳ ಪಾಲಿಗೆ ಈ ಚಿತ್ರ ರೋಮಾಂಚನ ಉಂಟುಮಾಡಬಹುದು. ಆದರೆ ಉಳಿದವರ ಪಾಲಿಗೆ ಇದೊಂದು ಮಾಮೂಲಿ ಮಸಾಲೆ ಚಿತ್ರ.

ಚಿತ್ರದ ವಾಲ್‌ಪೋಸ್ಟರ್ ನೋಡಿದರೇನೇ 'ಇಂದ್ರ' 'ಗಜ'ಕ್ಕಿಂತ ಭಿನ್ನವಲ್ಲ ಎಂಬ ಸಂಶಯ ಮೂಡುತ್ತಿತ್ತು. ಚಿತ್ರ ನೋಡಿದ ಮೇಲೆ ಆ ಸಂಶಯ ನಿಜವಾಗುತ್ತದೆ. ಹೀಗಾಗಿ ಇದು ನೋಡಲೇಬೇಕಾದ ಚಿತ್ರವಂತೂ ಅಲ್ಲ. ಒಂದು ವೇಳೆ ಅಪ್ಪಿತಪ್ಪಿ ನೋಡಿದರೆ ಅಂತಹ ದೊಡ್ಡ ನಷ್ಟವೂ ಇಲ್ಲ. ಸಲಹೆ ನಮ್ಮದು, ನಿರ್ಧಾರ ನಿಮ್ಮದು.

ಬಂಧ-ನಿರ್ಬಂಧಗಳ ನಡುವೆ ರೈ



ಪ್ರಕಾಶ್ ರೈ ಮತ್ತೊಂದು ವಿವಾದವನ್ನು ಮೈಮೇಲೆಳೆದುಕೊಂಡಿದ್ದಾರೆ. ಮೊದಲಿನಿಂದಲೂ ಕನ್ನಡ, ತಮಿಳು ಸೇರಿದಂತೆ ತೆಲುಗು ಚಿತ್ರರಂಗಗಳಲ್ಲಿ "ಪ್ರಕಾಶ್ ರೈಗೆ ಟೈಮ್ ಸೆನ್ಸ್ ಇಲ್ಲ" ಎಂಬ ಆರೋಪ ಕೇಳಿಬರುತ್ತಿತ್ತು. ಸಮಯಕ್ಕೆ ಸರಿಯಾಗಿ ಶೂಟಿಂಗ್‌ಗೆ ಬರುವುದಿಲ್ಲ ಎಂಬ ಕಾರಣಕ್ಕೆ, ಹಿಂದೆ ತಮಿಳು ಇಂಡಸ್ಟ್ರಿಯವರು ರೈಗೆ ಒಂದು ವರ್ಷ ಸಿನಿಮಾಗಳಲ್ಲಿ ಅಭಿನಯಿಸದಂತೆ ನಿರ್ಬಂಧವನ್ನೂ ಹೇರಿದ್ದರು. ಈಗ ಇಂಥದ್ದೇ ಪ್ರಸಂಗ ತೆಲುಗಿನಲ್ಲೂ ಮರುಕಳಿಸಿದೆ.

ಚಿರಂಜೀವಿ ಸಹೋದರ ಪವನ್ ಕಲ್ಯಾಣ್ ನಟನೆಯ 'ಜಲ್ಸಾ' ಮತ್ತು ಜೂನಿಯರ್ ಎನ್‌ಟಿಆರ್ ಅಭಿನಯದ 'ಕಂತ್ರಿ' ಚಿತ್ರಗಳ ಚಿತ್ರೀಕರಣಕ್ಕೆ ರೈ ಸರಿಯಾದ ಸಮಯಕ್ಕೆ ಹಾಜರಾಗದ ಕಾರಣಕ್ಕೆ ಅವುಗಳ ಚಿತ್ರೀಕರಣ ವಿಳಂಬಗೊಂಡು ಅಂದುಕೊಂಡದ್ದಕ್ಕಿಂತ ದುಪ್ಪಟ್ಟು ಖರ್ಚಾಗಿದೆಯಂತೆ. ರೈನ ಈ ಬೇಜವಾಬ್ದಾರಿತನದಿಂದ ಬೇಸತ್ತ ತೆಲುಗು ನಿರ್ಮಾಪಕರ ಕೌನ್ಸಿಲ್ ಇನ್ನು ಮುಂದೆ ಅವರಿಗೆ ತೆಲುಗಿನ ಯಾವ ಸಿನಿಮಾಗಳಲ್ಲೂ ಅವಕಾಶ ಕೊಡದಂತೆ ನಿರ್ಬಂಧ ಹೇರಿದ್ದಾರಂತೆ. ಬೇರೆ ಯಾರೋ ನಟ ಹೀಗೆ ಮಾಡಿದ್ದರೆ ಅದು ದೊಡ್ಡ ವಿಚಾರವೆನಿಸುತ್ತಿರಲಿಲ್ಲ. ಆದರೆ ಪ್ರಕಾಶ್ ರೈನಂಥ ಪ್ರತಿಭಾವಂತ ನಟ ಇಂತಹ ಉಡಾಫೆತನವನ್ನು ತೋರುತ್ತಾ ತನ್ನ ವೃತ್ತಿ ಬದುಕಿಗೆ ತಾನೇ ಹಾನಿ ಮಾಡಿಕೊಳ್ಳುತ್ತಿರುವುದು ನಿಜಕ್ಕೂ ದುರಂತ.

ದಶಾವತಾರಕ್ಕೆ ಮುಕ್ತಿ



ಕಮಲ ಹಾಸನ್‌ರ 'ದಶಾವತಾರಂ' ಮೇಲೆ ಕೆಲ ಸಂಘಟನೆಗಳು ಹೇರಿದ್ದ ಕೇಸು ವಜಾಗೊಂಡಿದೆ.

ಹಾಗೆ ನೋಡಿದರೆ ಕಮಲ್‌ರ ಹಿಂದಿನ ಚಿತ್ರಗಳಾದ 'ಹೇ ರಾಮ್' ಮತ್ತು 'ವಿರುಮಾಂಡಿ' ಚಿತ್ರಗಳ ಮೇಲೂ ಕೆಲ ಸಂಘಟನೆಗಳು ಇದೇ ರೀತಿಯ ಕ್ಯಾತೆ ತೆಗೆದಿದ್ದವು. ಈ ಬಾರಿ 'ದಶಾವತಾರಂ'ಗೂ ಮತ್ತದೇ ಸಂಘಟನೆಗಳು ಅಡ್ಡಗಾಲು ಹಾಕಿದ್ದವು. ಈ ಚಿತ್ರದಲ್ಲಿ ಕಮಲಹಾಸನ್ ಓಂ ಮಂತ್ರ ಮತ್ತು ಭಗವದ್‌ಗೀತೆಯನ್ನು ಬಳಸಿಕೊಂಡು ಹಿಂದೂ ಧರ್ಮಕ್ಕೆ ಅಪಚಾರವೆಸಗಿದ್ದಾರೆ ಎಂಬ ಅತಾರ್ಕಿಕ ವಾದವನ್ನು ಇಟ್ಟುಕೊಂಡು ವಿಷ್ಣುಧರ್ಮ ಸಂರಕ್ಷಣಾ ಸಮಿತಿ, ಕಲ್ಯಾಣ ಶುಭ ಸಮಿತಿಯಂತಹ ಹಲವು ಹಿಂದೂ ಸಂಘಟನೆಗಳು 'ದಶಾವತಾರಂ' ಚಿತ್ರ ತೆರೆ ಕಾಣಬಾರದು ಎಂದು ದಾವೆ ಹೂಡಿದ್ದರು.

ಆದರೆ ಚಿತ್ರವನ್ನು ವೀಕ್ಷಿಸಿದ ಸತ್ಯನಾರಾಯಣನ್ ಮತ್ತು ವೆಂಕಟರಾಮನ್ ನೇತೃತ್ವದ ನ್ಯಾಯಪೀಠ ಈ ಚಿತ್ರದಲ್ಲಿ ಹಿಂದೂ ಧರ್ಮಕ್ಕೆ ಅಪಚಾರವಾಗುವಂಥ ಯಾವುದೇ ದೃಶ್ಯಗಳಿಲ್ಲ ಎಂದು ತೀರ್ಪು ನೀಡಿ ಹಿಂದೂ ಸಂಘಟನೆಗಳು ಹೂಡಿದ್ದ ಅರ್ಜಿಯನ್ನು ವಜಾಗೊಳಿಸಿದೆ.

ಇನ್ನಾದರೂ ಇಂಥ ಕುಂಟು ನೆಪಗಳನ್ನು ಇಟ್ಟುಕೊಂಡು ಪ್ರಚಾರಗಿಟ್ಟಿಸುವುದನ್ನು ಈ ಹಿಂದೂವಾದಿ ಸಂಘಟನೆಗಳು ಬಿಡಬೇಕು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main...